ಸಂಪುಟ: 04 ಸಂಚಿಕೆ: 234 ಪುಟಗಳು: 08 ಗುರುವಾರ 07 ನವೆಂಬರ್ 2024
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5

ಮುಂಜಾನೆ ಮಾತು

ಎಲ್ಲಾ ರೀತಿಯ ಪ್ರಾಪಂಚಿಕ ಜಾಡ್ಯಗಳು ಕೇವಲ ಏಕಾಗ್ರತೆಯಿಂದ ಭಗವಂತನ ಸ್ಮರಿಸುವುದರಿಂದ ಗುಣ ಹೊಂದುವುದು

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಉದಯ ವಾಹಿನಿ
ವರದಿಗಾರರು ಬೇಕಾಗಿದ್ದಾರೆ
ಎಂಎ., ಜರ್ನಲಿಸಂ ಮಾಡಿರುವಂತಹ ಉತ್ಸಾಹಿ ಯುವಕ ಯುವತಿಯರು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ಕೆಲಸ ಮಾಡುವಂತಹ
ರಾಜ್ಯದಾದ್ಯಂತ ವರದಿಗಾರರು ಬೇಕಾಗಿದ್ದಾರೆ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
9448225696
+91 8035841833
#: 1230 'JAYAMAHAL 13th cross, 2nd phase, Girinagar, Bangalore-560085. (Near to Bangalore one park, opposite mandya medical)
udayavahininews@gmail.com

ಮುಡಾ ಹಗರಣವನ್ನು ಸಿಬಿಐ ತನಿಖೆಗೆ ಒಪ್ಪಿಸುವಂತೆ ಆಗ್ರಹ

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿಗಳಿಗೆ ನಿಜಕ್ಕೂ ಪ್ರಾಮಾಣಿಕತೆ ಇದ್ದರೆ ಮುಡಾ ಹಗರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಆಗ್ರಹಿಸಿದ್ದಾರೆ ಸಿಬಿಐ ತನಿಖೆಯಿಂದ ವಾಸ್ತವಿಕ ವಿಚಾರಗಳು ಹೊರಕ್ಕೆ ಬರಲು ಸಾಧ್ಯ ಎಂದರು. ಮುಖ್ಯಮಂತ್ರಿಗಳು ತಮ್ಮ ಜೀವನ ತೆರೆದ ಪುಸ್ತಕ ಎನ್ನುತ್ತಿದ್ದಾರೆ. ಲೋಕಾಯುಕ್ತದ ಬದಲಾಗಿ ತಮ್ಮ ಕುಟುಂಬದ ನಿವೇಶನ ಹಂಚಿಕೆ ಹಗರಣವನ್ನು ಸಿಬಿಐ ತನಿಖೆಗೆ ಒಪ್ಪಿಸಿ ಪ್ರಾಮಾಣಿಕತೆಯನ್ನು ತೋರಿಸಲಿ ಎಂದು ಒತ್ತಾಯಿಸಿದರು. ಉಪ ಚುನಾವಣೆ ಸಂಬಂಧ ಪ್ರಶ್ನಿಸಿದಾಗ, 3ಕ್ಕೆ 3 ಕ್ಷೇತ್ರಗಳನ್ನು ಎನ್‌ಡಿಎ ಗೆಲ್ಲುವ ವಿಶ್ವಾಸವಿದೆ ಎಂದು ಅವರು ಉತ್ತರ ಕೊಟ್ಟರು. ಅಬಕಾರಿ ಇಲಾಖೆಯಲ್ಲಿ ಸಾವಿರಾರು ಕೋಟಿಯ ಹಗರಣ ನಡೆದಿದ್ದು, ಆ ಸಚಿವರು ಮತ್ತು ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಅವರು ಒತ್ತಾಯಿಸಿದರು. ಲಕ್ಷ್ಮಿ ಹೆಬ್ಬಾಳ್ಕರ್ ಅವರ ಇಲಾಖೆಯಲ್ಲಿ ಅಧಿಕಾರಿ ಆತ್ಮಹತ್ಯೆ ಕುರಿತು ತನಿಖೆ ನಡೆದು ಸತ್ಯ ಹೊರಬರಲಿ, ಆಮೇಲೆ ಪ್ರತಿಕ್ರಿಯೆ ಕೊಡುವುದಾಗಿ ಹೇಳಿದರು.

ಪಿಎಸ್‌ಐ ಪರೀಕ್ಷೆಯ ಅಂಕಪಟ್ಟಿ ಪ್ರಾಧಿಕಾರದಿಂದ ಪ್ರಕಟ

• ಉದಯವಾಹಿನಿ, ಬೆಂಗಳೂರು

ಪಿಎಸ್‌ಐ ಹುದ್ದೆಗಳಿಗೆ ರಾಜ್ಯ ಪರೀಕ್ಷಾ ಪ್ರಾಧಿಕಾರದಿಂದ ನಡೆಸಲಾಗಿದ್ದ ಪರೀಕ್ಷೆಯ ಅಂಕಪಟ್ಟಿಯನ್ನು ಪ್ರಕಟಿಸಲಾಗಿದೆ. ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ 402 ಪೊಲೀಸ್ ಸಬ್ ಇನ್ಸ್‌ಪೆಕ್ಟರ್ (ಪಿಎಸ್‌ಐ) ಹುದ್ದೆಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಕಳೆದ ತಿಂಗಳು ನಡೆಸಲಾಗಿತ್ತು.ಇದೀಗ ಪರೀಕ್ಷೆಯ ಕೀ ಉತ್ತರಗಳನ್ನು ಈಗಾಗಲೇ ಪ್ರಕಟಿಸಲಾಗಿದೆ. ಇಂದು ಅಭ್ಯರ್ಥಿಗಳು ಪಡೆದ ಅಂಕಪಟ್ಟಿಯನ್ನು ಪ್ರಕಟಿಸಲಾಗಿದೆ. ಈ ಮೂಲಕ ಪರೀಕ್ಷೆ ಬರೆದ 42,933 ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಆಕ್ಷೇಪಣೆಗಳಿದ್ದಲ್ಲಿ ನ.9ರೊಳಗೆ ಸಲ್ಲಿಕೆ ಮಾಡುವಂತೆ ಪ್ರಟಣೆಯಲ್ಲಿ ತಿಳಿಸಲಾಗಿದೆ. ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅಕ್ಟೋಬರ್ ತಿಂಗಳಲ್ಲಿ ನಡೆದ ಪಿಎಸ್‌ಐ ಪರೀಕ್ಷೆಯ ಪತ್ರಿಕೆ-1 ಮತ್ತು ಪತ್ರಿಕೆ-2 ರಲ್ಲಿ ಅಭ್ಯರ್ಥಿಗಳು ಗಳಿಸಿರುವ ಅಂಕಗಳ ವಿವರಗಳುಳ್ಳ ತಾತ್ಕಾಲಿಕ ಅಂಕಪಟ್ಟಿಯನ್ನು ಕೆಇಎ ಅಧಿಕೃತ ವೆಬ್‌ಸೈಟ್‌ನಲ್ಲಿ k||t://eh|sqoqh. https://cetonline.karnataka.gov.in/vaoresult/result-descomr.aspx ಪ್ರಕಟಿಸಿದೆ.

ಕಾಂಗ್ರೇಸ್‌ಗೆ, ಬಿಜೆಪಿಗೊಂದು ಕಾನೂನು ಇದೆಯೇ?: ಪಾಟೀಲ್

• ಉದಯವಾಹಿನಿ, ಹುಬ್ಬಳ್ಳಿ

ಪ್ರಕರಣದ ಆರೋಪದ ಕುರಿತು ತನಿಖೆ ವಿಚಾರದಲ್ಲಿ ಕಾಂಗ್ರೇಸ್‌ಗೊಂದು, ಬಿಜೆಪಿ ಗೊಂದು ಕಾನೂನು ಇದೆಯೇ? ಮುಡಾ ಹಗರಣದ ವಿಚಾರದಲ್ಲಿ ಬಿಜೆಪಿಗರು ಆರೋಪಕ್ಕೂ ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ಸಚಿವ ಎಚ್.ಕೆ.ಪಾಟೀಲ್ ತಿಳಿಸಿದರು. ಮುಡಾ ಹಗರಣದಲ್ಲಿ ಸಿಎಂ ರಾಜಿನಾಮೆ ನೀಡಿ ವಿಚಾರಣೆ ಎದುರಿಸಲಿ ಎಂಬುದು ಬಿಜೆಪಿಗರ ಒತ್ತಾಯವಾದರೆ, ಚುನಾವಣ ಬಾಂಡ್ ಹಗರಣದಲ್ಲಿ ಪ್ರಧಾನಿ ರಾಜೀನಾಮೆ ನೀಡಬೇಕಲ್ಲ ಎಂದು ಪ್ರಶ್ನಿಸಿದರು. 16,000 ಕೋಟಿ ಚುನಾವಣಾ ಬಾಂಡ್ ಹರಣದಲ್ಲಿ ಆರೋಪವಲ್ಲ, ಸುಪ್ರೀಂ ಕೋರ್ಟ್ ತನ್ನ ನಿಲುವು ವ್ಯಕ್ತಪಡಿಸಿದೆ. ಇಷ್ಟಾದರು ಪ್ರಧಾನಿ ರಾಜೀನಾಮೆ ನೀಡಿಲ್ಲ. ಸಿಎಂ ರಾಜೀನಾಮೆ ಕೇಳುವ ನೈತಿಕತೆ ಬಿಜೆಪಿಗರಿಗೇನಿದೆ ಎಂದರು.

ಕಮಲ ಹ್ಯಾರೀಸ್ ವಿರುದ್ಧ ಗೆದ್ದು ಬೀಗಿದ ಡೊನಾಲ್ಡ್ ಟ್ರಂಪ್ ಅಮೆರಿಕದ ಅಧ್ಯಕ್ಷನಾಗಿ 2 ನೇ ಬಾರಿಗೆ ಆಯ್ಕೆಯಾಗಿದ್ದಾರೆ. ಬಹುತೇಕ ಫಲಿತಾಂಶ ನಿರ್ಧಾರವಾಗಿರುವುದರಿಂದ ರಿಪಬ್ಲಿಕನ್ ಅಧ್ಯಕ್ಷೀಯ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ತಮ್ಮ ಬೆಂಬಲಿಗರನ್ನು ಉದ್ದೇಶಿಸಿ ಐತಿಹಾಸಿಕ ಭಾಷಣ ಮಾಡಿದ್ದಾರೆ. ಶ್ವೇತಭವನವನ್ನು ಗೆಲ್ಲಲು ಅಗತ್ಯವಿರುವ 270 ಚುನಾವಣಾ ಮತಗಳಲ್ಲಿ ಟ್ರಂಪ್ 277 ಎಲೆಕ್ಟೊರಲ್ ಮತಗಳನ್ನು ಈಗಾಗಲೇ ಗೆದ್ದಿದ್ದಾರೆ. ಇದು ಪ್ರಪಂಚದ ಅತ್ಯಂತ ಪ್ರಮುಖ ಕೆಲಸ.. ನಾನು ನಿಮಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತೇನೆ, ಅದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ ಎಂದು ಟ್ರಂಪ್ ನುಡಿದರು.

ಟ್ರಂಪ್ ಅಮೆರಿಕದ ಅಧಿಪತಿ

- ಅಮೆರಿಕದ ಅಧ್ಯಕ್ಷರಾಗಿ 'ಟ್ರಂಪ್' ಆಯ್ಕೆ
- 2 ನೇ ಬಾರಿಗೆ ಒಲಿದ ಅದೃಷ್ಟ

• ಉದಯವಾಹಿನಿ, ಅಮೆರಿಕ

ಡೊನಾಲ್ಡ್ ಟ್ರಂಪ್ ಬುಧವಾರ ವೇದಿಕೆಗೆ ತೆರಳಿ ವಿಜಯವನ್ನು ಘೋಷಿಸಿದರು ಮತ್ತು ಯುನೈಟೆಡ್ ಸ್ಟೇಟ್ಸ್‌ಗೆ ''ಸುವರ್ಣ ಯುಗ'' ತರುವುದಾಗಿ ಪ್ರತಿಜ್ಞೆ ಮಾಡಿದರು. ಬೆಂಬಲ ನೀಡಿದ್ದಕ್ಕೆ ಅವರು ಮತದಾರರಿಗೆ ಧನ್ಯವಾದ ತಿಳಿಸಿದರು. ತಮ್ಮ ಮೇಲೆ ನಡೆದ ಕೊಲೆ ಯತ್ನವನ್ನು ನೆನಪಿಸಿಕೊಂಡ ಟ್ರಂಪ್ ಹೇಳುತ್ತಾರೆ, '' ದೇವರು ಒಂದು ಕಾರಣಕ್ಕಾಗಿ ನನ್ನ ಜೀವವನ್ನು ಉಳಿಸಿದ್ದಾನೆ ಎಂದು ಅನೇಕ ಜನರು ನನಗೆ ಹೇಳಿದ್ದಾರೆ. ಆ ಕಾರಣವೆಂದರೆ ನಮ್ಮ ದೇಶವನ್ನು ಉಳಿಸುವುದು ಮತ್ತು ಅಮೆರಿಕವನ್ನು ಶ್ರೇಷ್ಠತೆಗೆ ಪುನಃಸ್ಥಾಪಿಸುವುದು ಮತ್ತು ಈಗ ನಾವು ಆ ಧ್ಯೇಯವನ್ನು ಒಟ್ಟಿಗೆ ಪೂರೈಸಲಿದ್ದೇವೆ ಎಂದು ಹೇಳಿದ್ದಾರೆ.

ಪ್ರತಿದಿನ, ನನ್ನ ದೇಹದ ಪ್ರತಿ ಉಸಿರಿನೊಂದಿಗೆ ನಾನು ನಿಮಗಾಗಿ ಹೋರಾಡುತ್ತೇನೆ. ನಾವು ನಮ್ಮ ಮಕ್ಕಳಿಗೆ ನೀವು ಅರ್ಹವಾದ ಬಲವಾದ, ಸುರಕ್ಷಿತ ಮತ್ತು ಸಮೃದ್ಧ ಅಮೆರಿಕವನ್ನು ನೀಡುವವರೆಗೂ ನಾನು ವಿಶ್ರಮಿಸುವುದಿಲ್ಲ. ರಿಪಬ್ಲಿಕನ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರು ತಮ್ಮ ಭಾಷಣದಲ್ಲಿ ಉದ್ಯಮಿ ಎಲಾನ್ ಮಸ್ಕ್ ಹೆಸರನ್ನೂ ಪ್ರಸ್ತಾಪಿಸಿದ್ದಾರೆ. ತಮ್ಮ ಬೆಂಬಲಕ್ಕೆ ಧನ್ಯವಾದ ತಿಳಿಸಿದ್ದಾರೆ. ಎಲಾನ್ ಮಸ್ಕ್ ಅವರು ಚುನಾವಣೆಯಲ್ಲಿ ಟ್ರಂಪ್ ಅವರನ್ನು ಉತ್ಸಾಹದಿಂದ ಬೆಂಬಲಿಸಿದ್ದಾರೆ ಮತ್ತು ಹಣವನ್ನು ಸಹ ಒದಗಿಸಿದ್ದಾರೆ ಎಂದರು. ಅಮೆರಿಕದ 47ನೇ ಅಧ್ಯಕ್ಷರಾದ ಡೊನಾಲ್ಡ್ ಟ್ರಂಪ್ ಅವರನ್ನು ಅಭಿನಂದಿಸಿ ಪ್ರಧಾನಿ ನರೇಂದ್ರ ಮೋದಿ ಟ್ವೀಟ್ ಮಾಡಿದ್ದಾರೆ. ಐತಿಹಾಸಿಕ ಚುನಾವಣಾ ವಿಜಯಕ್ಕಾಗಿ ನನ್ನ ಸ್ನೇಹಿತ ಡೊನಾಲ್ಡ್ ಟ್ರಂಪ್‌ಗೆ ಹೃತ್ಪೂರ್ವಕ ಅಭಿನಂದನೆಗಳು.

1. ಎರಡನೇ ಬಾರಿ ಅಧ್ಯಕ್ಷರಾದ ಬಳಿಕ ಅಮೆರಿಕನ್ನರಿಗೆ ಈ ಪ್ರಾಮಿಸ್ ಮಾಡಿದ ಡೊನಾಲ್ಡ್ ಟ್ರಂಪ್
2. ಅಮೆರಿಕಾದ ಚುನಾವಣೆಯಲ್ಲಿ ಇತಿಹಾಸ ನಿರ್ಮಿಸಿದ್ದ ಭಾರತ ಮೂಲದ ಸುಹಾಸ್ ಸುಬ್ರಹ್ಮಣ್ಯಂ
3. ಡೊನಾಲ್ಡ್ ಟ್ರಂಪ್ ತಮ್ಮ ಬೆಂಬಲಿಗರನ್ನು ಉದ್ದೇಶಿಸಿ ಐತಿಹಾಸಿಕ ಭಾಷಣ ಮಾಡಿದ್ದಾರೆ.
4. ಮೇಕ್ ಅಮೆರಿಕ ಗ್ರೇಟ್ ಅಗೇನ್ ಎಂಬ ಘೋಷಣೆಯನ್ನು ಪುನರುಚ್ಚರಿಸಿದ
5. ನನ್ನ ಹೆಂಡತಿ ಮಿರಾಂಡಾ ಮತ್ತು ನಾನು ಇಲ್ಲಿಯೇ ನಮ್ಮ ಹೆಣ್ಣುಮಕ್ಕಳನ್ನು ಬೆಳೆಸುತ್ತಿದ್ದೇವೆ

10ನೇ ಕಾಂಗ್ರೇಷನಲ್ ಡಿಸ್ಟ್ರಿಕ್ಟ್ ಜನರಿಗೆ ಆಭಾರಿ

ಕಾಂಗ್ರೇಸ್‌ನಲ್ಲಿ ಕಠಿಣ ಹೋರಾಟಗಳನ್ನು ನಡೆಸಲು ಮತ್ತು ಜನರ ಪರವಾಗಿ ಫಲಿತಾಂಶಗಳನ್ನು ನೀಡಲು ನನ್ನ ಮೇಲೆ ನಂಬಿಕೆ ಇಟ್ಟು ಮತ ಹಾಕಿದ ವರ್ಜೀನಿಯಾದ 10ನೇ ಕಾಂಗ್ರೇಷನಲ್ ಡಿಸ್ಟ್ರಿಕ್ಟ್ ಜನರಿಗೆ ಆಭಾರಿಯಾಗಿದ್ದೇನೆ. ಈ ಕ್ಷೇತ್ರ ನನ್ನ ಮನೆ. ನಾನು ಇಲ್ಲಿಯೇ ಮದುವೆಯಾಗಿದ್ದೇನೆ ಎಂದು ಸುಬ್ರಹ್ಮಣ್ಯಂ ಹೇಳಿದ್ದಾರೆ. ನನ್ನ ಹೆಂಡತಿ ಮಿರಾಂಡಾ ಮತ್ತು ನಾನು ಇಲ್ಲಿಯೇ ನಮ್ಮ ಹೆಣ್ಣುಮಕ್ಕಳನ್ನು ಬೆಳೆಸುತ್ತಿದ್ದೇವೆ. ಇಲ್ಲಿನ ಸಮುದಾಯಗಳು ಎದುರಿಸುತ್ತಿರುವ ಸಮಸ್ಯೆಗಳು ನಮ್ಮ ಕುಟುಂಬಕ್ಕೆ ವೈಯಕ್ತಿಕವಾದವುಗಳು. ಈ ಜಿಲ್ಲೆಗೆ ಸೇವೆ ಸಲ್ಲಿಸಲು ನನಗೆ ಸಿಕ್ಕ ಸದಾವಕಾಶ ಇದಾಗಿದೆ ಎಂದು ತಿಳಿಸಿದ್ದಾರೆ.

ಸ್ನೇಹಿತನಿಗೆ ಪ್ರಧಾನಿ ಮೋದಿ ಅಭಿನಂದನೆ.!



ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಡೊನಾಲ್ಡ್ ಟ್ರಂಪ್ ಭರ್ಜರಿ ಗೆಲುವು ಸಾಧಿಸಿದ್ದು, ಪ್ರಧಾನಿ ಮೋದಿ ಅಭಿನಂದನೆ ಸಲ್ಲಿಸಿದ್ದಾರೆ.ನನ್ನ ಸ್ನೇಹಿತನಿಗೆ ಹೃತ್ಪೂರ್ವಕ ಅಭಿನಂದನೆಗಳು ನಿಮ್ಮ ಐತಿಹಾಸಿಕ ಚುನಾವಣಾ ವಿಜಯದ ಬಗ್ಗೆ. ನಿಮ್ಮ ಹಿಂದಿನ ಅವಧಿಯ ಯಶಸ್ಸನ್ನು ನೀವು ನಿರ್ಮಿಸುತ್ತಿರುವಾಗ, ಭಾರತ-ಯುಎಸ್ ಸಮಗ್ರ ಜಾಗತಿಕ ಮತ್ತು ಕಾರ್ಯತಂತ್ರದ ಪಾಲುದಾರಿಕೆ ಯನ್ನು ಮತ್ತಷ್ಟು ಬಲಪಡಿಸಲು ನಮ್ಮ ಸಹಯೋಗವನ್ನು ನವೀಕರಿಸಲು ನಾನು ಎದುರು ನೋಡುತ್ತಿದ್ದೇನೆ. ಒಟ್ಟಾಗಿ, ನಮ್ಮ ಜನರ ಸುಧಾರಣೆಗಾಗಿ ಮತ್ತು ಜಾಗತಿಕ ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಯನ್ನು ಉತ್ತೇಜಿಸಲು ಕೆಲಸ ಮಾಡೋಣ ಎಂದು ಪ್ರಧಾನಿ ಮೋದಿ ಟ್ವೀಟ್ ಮಾಡಿದ್ದಾರೆ.

ಎರಡನೇ ಬಾರಿ ಅಧ್ಯಕ್ಷ ಪಟ್ಟಕ್ಕೆ

ಚುನಾಯಿತರಾದ ಬೆನ್ನಲ್ಲೇ ಟ್ರಂಪ್ ಮೊದಲ ಭಾಷಣ ಮಾಡಿದ್ದಾರೆ. ದೇಶವನ್ನು ಸುಭದ್ರಗೊಳಿಸಲು ಬೇಕಾದ ಎಲ್ಲಾವನ್ನೂ ಮಾಡುತ್ತೇನೆ ಎಂದು ಹೇಳಿದರು. ಮೇಕ್ ಅಮೆರಿಕ ಗ್ರೇಟ್ ಅಗೇನ್ ಎಂಬ ಘೋಷಣೆಯನ್ನು ಪುನರುಚ್ಚರಿಸಿದ ಡೊನಾಲ್ಡ್ ಟ್ರಂಪ್, ನಾನು ಪ್ರತಿ ಕ್ಷಣವೂ ಅಮೆರಿಕಕ್ಕಾಗಿ ದುಡಿಯುತ್ತೇನೆ ಎಂದು ಪುನರುಚ್ಚರಿಸಿದ್ದಾರೆ. ಇದು ನನ್ನ ಜೀವನದ ಅತ್ಯಂತ ಮಹತ್ವದ ಕ್ಷಣವಾಗಿದ್ದು, ನನ್ನ ಸರ್ವಸ್ವವನ್ನು ಅಮೆರಿಕಕ್ಕೆ ಸಮರ್ಪಿಸಲಾಗಿದೆ. ನಾನು ಪ್ರತಿಯೊಬ್ಬ ನಾಗರಿಕರಿಗಾಗಿ, ನಿಮಗಾಗಿ, ನಿಮ್ಮ ಕುಟುಂಬಕ್ಕಾಗಿ ಮತ್ತು ನಿಮ್ಮ ಭವಿಷ್ಯಕ್ಕಾಗಿ ಹೋರಾಡುತ್ತೇನೆ ಎಂದು ಟ್ರಂಪ್ ಹೇಳಿದ್ದಾರೆ.

ಇತಿಹಾಸ ನಿರ್ಮಿಸಿದ್ದ ಭಾರತ ಮೂಲದ ಸುಹಾಸ್ ಸುಬ್ರಹ್ಮಣ್ಯಂ

ಭಾರತ ಮೂಲದ ಸುಹಾಸ್ ಸುಬ್ರಹ್ಮಣ್ಯಂ ಅವರು ಅಮೆರಿಕ ಚುನಾವಣೆಯಲ್ಲಿ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಅವರು ವರ್ಜೀನಿಯಾದ 10ನೇ ಕಾಂಗ್ರೇಷನಲ್ ಡಿಸ್ಟ್ರಿಕ್ಟ್ ಆಯ್ಕೆಯಾಗುವ ಮೂಲಕ ಇತಿಹಾಸ ಬರೆದಿದ್ದಾರೆ.ಇಡೀ ಪೂರ್ವ ಕರಾವಳಿಯಿಂದ ಚುನಾಯಿತರಾದ ಮೊದಲ ಭಾರತೀಯ ಅಮೆರಿಕನ್ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ.ಡೆಮಾಕ್ರಟಿಕ್ ಭದ್ರಕೋಟೆಯಾದ ವರ್ಜೀನಿಯಾದಿಂದ ಜನಪ್ರತಿನಿಧಿಗಳ ಸಭೆಗೆ(ಕಾಂಗ್ರೇಸ್) ಸ್ಪರ್ಧಿಸಿದ್ದ ಸುಬ್ರಮಣ್ಯಂ ಅವರು ರಿಪಬ್ಲಿಕನ್ ಪಕ್ಷದ ಮೈಕ್ ಕ್ಲಾನ್ಸಿ ಅವರನ್ನು ಸೋಲಿಸಿದ್ದಾರೆ.

ನನ್ನ ಜೊತೆ ತಗ್ಗಿ ಬಗ್ಗಿ ನಡೆಯಬೇಕು: ಡಿಕೆ ಶಿವಕುಮಾರ್

• ಉದಯವಾಹಿನಿ, ಬೆಂಗಳೂರು

ನಮ್ಮ ಮೆಟ್ರೋ ನಾಗಸಂದ್ರ ಮಾದಾವರ ವಿಸ್ತರಿತ ಮಾರ್ಗಕ್ಕೆ ಚಾಲನೆ ನೀಡುವ ಸಂದರ್ಭದಲ್ಲಿ ತಮ್ಮ ಜೊತೆಗಿದ್ದ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅನುದಾನದ ಬಗ್ಗೆ ಪ್ರಶ್ನಿಸಿದ್ದಕ್ಕೆ ಡಿಸಿಎಂ ಡಿಕೆ ಶಿವಕುಮಾರ್ ನನ್ನ ಬಳಿ ತಗ್ಗಿ ಬಗ್ಗಿ ನಡೆಯಬೇಕು ಎಂದು ಎಚ್ಚರಿಕೆ ನೀಡಿದ್ದಾರೆ.

ಕಾರ್ಯಕ್ರಮದಲ್ಲಿ ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಮತ್ತು ಡಿಸಿಎಂ ಡಿಕೆ ಶಿವಕುಮಾರ್ ಅಕ್ಕಪಕ್ಕದಲ್ಲಿಯೇ ಕೂತು ಸಾಕಷ್ಟು ಚರ್ಚೆ ನಡೆಸಿದ್ದಾರೆ. ಈ ವೇಳೆ ಇತ್ತೀಚೆಗೆ ಬೆಂಗಳೂರು ಜಯನಗರ ಕ್ಷೇತ್ರಕ್ಕೆ ಮಾತ್ರ ಅನುದಾನ ಬಿಡುಗಡೆ ಮಾಡದೇ ಇರುವ ಕುರಿತು ತೇಜಸ್ವಿ ಸೂರ್ಯ ಪ್ರಶ್ನೆ ಮಾಡಿದ್ದಾರೆ.

ಬೆಂಗಳೂರಿನ ಎಲ್ಲಾ ಕ್ಷೇತ್ರಗಳಿಗೂ ಅನುದಾನ ನೀಡಿದ್ದೀರಿ. ಆದರೆ ಜಯನಗರ ಕ್ಷೇತ್ರಕ್ಕೆ ಮಾತ್ರ ಕೊಟ್ಟಿಲ್ಲ ಎಂದು ತೇಜಸ್ವಿ ಸೂರ್ಯ ಡಿಸಿಎಂ ಡಿಕೆ ಶಿವಕುಮಾರ್ ಬಳಿ ವಿಷಯ ಪ್ರಸ್ತಾಪಿಸಿದರು. ಇದಕ್ಕೆ ಡಿಕೆಶಿ, ಜಯನಗರ ಶಾಸಕ ಸಿಕೆ ರಾಮಮೂರ್ತಿ ವಿರುದ್ಧ ತೇಜಸ್ವಿ ಸೂರ್ಯ ಮುಂದೆ ಕೆಂಡ ಕಾರಿದ್ದಾರೆ. ನಾವು ಅಧಿಕಾರಕ್ಕೆ ಬಂದ ಮೇಲೆ ಬೆಂಗಳೂರು ದಕ್ಷಿಣ ಅಧೋಗತಿಗೆ ತಲುಪಿದೆ ಎಂದು ಹೇಳುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದ ಡಿಕೆ ಶಿವಕುಮಾರ್, ನನ್ನ ಬಳಿ ತಗ್ಗಿ ಬಗ್ಗಿ ನಡೆಯಬೇಕು, ಎಲ್ಲಾರ ಜೊತೆ ಇದ್ದ ಹಾಗೆ ನನ್ನ ಜೊತೆ ಇದ್ದರೆ ನಡೆಯಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ. ಅಷ್ಟೇ ಅವರು ಹೇಳಿದ ಮಾತನ್ನು ಪ್ರೂವ್ ಮಾಡಲಿ ಆಮೇಲೆ ಅನುದಾನ ಬಿಡುಗಡೆ ಮಾಡ್ತೀನಿ ಎಂದಿದ್ದಾರೆ.

ಅನುದಾನ ಕೇಳಿದ ತೇಜಸ್ವಿಗೆ ವಾರ್ನಿಂಗ್

ಹುದ್ದೆಗೆ ಮಾಡಿದ ಅವಮಾನ

ಲೋಕಾಯುಕ್ತರು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮ್ಯಾಚ್ ಫಿಕ್ಸಿಂಗ್ ಎಂದು ಆರ್.ಅಶೋಕ ಹೇಳಿರುವುದು ಸಂವಿಧಾನಾತ್ಮಕ ಹುದ್ದೆಗೆ ಮಾಡಿದ ಅವಮಾನ. ಲೋಕಾಯುಕ್ತ ಯಾರ ಕಾಲದಲ್ಲಿ ನೇಮಕ ಮಾಡಿದರು ಎಂಬುದು ಅವರಿಗೆ ಗೊತ್ತಿದೆಯೇ. ಅವರೇ ನೇಮಕ ಮಾಡಿದ ಲೋಕಾಯುಕ್ತರ ಬಗ್ಗೆ ಗೌರವ ಇಲ್ಲವೇ ಎಂದು ಪ್ರಶ್ನಿಸಿದರು. ಈ ಹೇಳಿಕೆಯು ನ್ಯಾಯಲಯ ಹಾಗೂ ನ್ಯಾಯಾಲಯ ಪೀಠಕ್ಕೆ ಮಾಡಿದ ಅವಮಾನವಾಗಿದೆ. ಲೋಕಾಯುಕ್ತ ಸ್ಥಾನದ ಬಗ್ಗೆ ಅನುಮಾನ ವ್ಯಕ್ತಪಡಿಸಿರುವುದು ಅಗೌರವ ತೋರಿದಂತೆ. ಇದನ್ನು ಲೋಕಾಯುಕ್ತರು ಗಂಭೀರವಾಗಿ ಪರಿಗಣಿಸಿ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಅಲ್ಪಸಂಖ್ಯಾತರ ಮಸೀದಿ, ದರ್ಗಾಕ್ಕೆ 10 ಕೋಟಿ ಕೊಟ್ಟಿದ್ದೆ

• ಉದಯವಾಹಿನಿ, ಶಿಗ್ಗಾಂವಿ

ಅಲ್ಪಸಂಖ್ಯಾತರ ಮಸೀದಿ, ದರ್ಗಾ ಅಭಿವೃದ್ಧಿಗಾಗಿ ನಾನು ಮುಖ್ಯಮಂತ್ರಿಯಾಗಿದ್ದಾಗ 10 ಕೋಟಿ ರೂ. ಅನುದಾನ ನೀಡಿದ್ದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಅಲ್ಪ ಸಂಖ್ಯಾತರ ಪರ ಎಂದು ಹೇಳಿಕೊಳ್ಳುವ ಸಿದ್ದರಾಮಯ್ಯನವರು ನಿಜವಾಗಿಯೂ ಅಲ್ಪ ಸಂಖ್ಯಾತರನ್ನು ರಾಜಕೀಯ ಲಾಭಕ್ಕೋಸ್ಕರ ಅಷ್ಟೇ ಬಳಸಿಕೊಳ್ತಿದ್ದಾರೆ ಎಂದು ವ್ಯಂಗ್ಯ ಮಾಡಿದ್ದಾರೆ. ನಾನು ಸಿಎಂ ಆಗಿದ್ದಾಗ ಅಲ್ಪ ಸಂಖ್ಯಾತರಿಗಾಗಿ 10 ಕೋಟಿ ರೂ. ಅನುದಾನ ನೀಡಿದ್ದೆ. ಇದುವರೆಗೆ ಯಾವ ಸಿಎ

ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

ಪರಿಶಿಷ್ಟರ ಮೇಲೆ ಹಲ್ಲೆ

ಇದೇ ಭಾನುವಾರ ನವೆಂಬರ್ ಮೂರರಂದು ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಚಳಕಾಪುರ ಗ್ರಾಮದ ಹನುಮಾನ್ ದೇವರ ಜಾತ್ರೆಯಲ್ಲಿ ಭಾಗವಹಿಸಿದ್ದಕ್ಕಾಗಿ ಪರಿಶಿಷ್ಟರ ಮೇಲೆ ಹಲ್ಲೆ ನಡೆದಿದ್ದು ದೂರು ದಾಖಲಾಗಿ ಅರವತ್ತೊಂಭತ್ತು ಜನರ ಬಂಧನದ ವರದಿಯಾಗಿದೆ. ಚಳಕಾಪುರ ಸಿದ್ಧಾರೂಢರ ಜನ್ಮಸ್ಥಳ. ಸುಮಾರು ಇಪ್ಪತ್ತು ವರ್ಷ ದೇಶವನ್ನು ಕಾಲ್ನಡಿಗೆಯಿಂದ ಸುತ್ತಿ ಹೋದ ಕಡೆಗಳಲ್ಲೆಲ್ಲಾ ಜಾತೀಯತೆ ಅಸ್ಪೃಶ್ಯತೆ ಮೂಢನಂಬಿಕೆಗಳ ವಿರುದ್ಧ ಧ್ವನಿ ಎತ್ತಿ ಪರಿವರ್ತಿಸಿದವರು. ಐವತ್ಮೂರು ವರ್ಷಗಳ ಕಾಲ ಹುಬ್ಬಳ್ಳಿಯಲ್ಲಿ ನೆಲೆ ನಿಂತು ಜಾತಿಗರ ತಾರತಮ್ಯ ದ್ವೇಷ ಪಿತೂರಿ ಕಿರುಕುಳಗಳನ್ನು ಸ್ವಯಂ ಎದುರಿಸಿ ಸಮಾನತೆ ಧಾರ್ಮಿಕ ಸಾಮರಸ್ಯ ಭಾವವನ್ನು ಬಿತ್ತಿದವರು. ವಿಸ್ತೃತವಾದ ಸಿದ್ಧಾರೂಢ ಸಂಪ್ರದಾಯದಲ್ಲಿ ಗುರು ಭಕ್ತರಲ್ಲಿ ಜಾತಿಯ ಎಣಿಕೆ ಇಲ್ಲ. ಬಸವಣ್ಣನ ಅನಂತರ ಈ ನಿಟ್ಟಿನಲ್ಲಿ ಅತ್ಯಂತ ಪ್ರಬಲವಾದ ಕ್ರಾಂತಿ ಮಾಡಿದ ರಾಜ್ಯದ ಸಂತರು ಸಿದ್ಧಾರೂಢರು. ಅಂದು ಮಹಾರಾಷ್ಟ್ರದ ಶಾಹುಮಹಾರಾಜ್ ಬರೋಡಾದ ಮಹಾರಾಜ್ ಮುಂತಾದವರು ಸಿದ್ಧಾರೂಢರ ವಿಚಾರಧಾರೆಗೆ ಮಾರು ಹೋದರು. ಇಂದು ರಾಜ್ಯ ಮಾತ್ರವಲ್ಲದೇ ಆಂಧ್ರ ಮಹಾರಾಷ್ಟ್ರ ತಮಿಳು ಗೋವಾ ಮುಂತಾದ ಕಡೆ ಅಸಂಖ್ಯರು ಅವರ ತತ್ತ್ವ ಸಿದ್ಧಾಂತ ಪಾಲಿಸುವರು. ಇಂಥವರು ಜನ್ಮತಳೆದ ಊರಿನಲ್ಲಿಯೇ ಇಂಥ ಕರಾಳತೆ ನಡೆದಿರುವುದು ಶೋಚನೀಯ.

ಹರಿದಾಸ ಮಂಜರಿ ಗಾಯನ

• ಉದಯವಾಹಿನಿ, ಬೆಂಗಳೂರು

ತ್ಯಾಗರಾಜನಗರದಲ್ಲಿರುವ ವಜ್ರಕ್ಷೇತ್ರ ಶ್ರೀ ಅಭಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನದ ವತಿಯಿಂದ ನವೆಂಬರ್ 8, ಶುಕ್ರವಾರ ಸಂಜೆ 6-30ಕ್ಕೆ ಕು॥ ವಾಣಿಶ್ರೀ ರಾಮಕೃಷ್ಣ ಇವರಿಂದ ಹರಿದಾಸ ಮಂಜರಿ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸ್ಥಳ : ಶ್ರೀ ಅಭಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, ವಜ್ರಕ್ಷೇತ್ರ, 152/1, 7ನೇ ಮುಖ್ಯರಸ್ತೆ 7ನೇ ಅಡ್ಡರಸ್ತೆ, 3ನೇ ಬ್ಲಾಕ್, ತ್ಯಾಗರಾಜನಗರ ಬೆಂಗಳೂರು-70 ಈ ಕಾರ್ಯಕ್ರಮವು ಶ್ರೀವಜ್ರಕ್ಷೇತ್ರ ಯೂಟ್ಯೂಬ್ ವಾಹಿನಿಯಲ್ಲಿ ನೇರಪ್ರಸಾರ ಇರುತ್ತದೆ.

ರಾಜ್ಯದಲ್ಲಿ ಇ-ಶ್ರಮ ನೋಂದಾಯಿತ ಕಾರ್ಮಿಕರಿಗೆ ಗುಡ್ ನ್ಯೂಸ್

• ಉದಯವಾಹಿನಿ, ಬೆಂಗಳೂರು

ಪ್ರಮುಖ ದಾಖಲೆಗಳಲ್ಲಿ ಪಡಿತರ ಚೀಟಿ ಕೂಡ ಒಂದಾಗಿದೆ. ಅದರಲ್ಲೂ ಅರ್ಹ ಇ-ಶ್ರಮ ನೋಂದಾಹಿತ ಕಾರ್ಮಿಕರಿಗೆ ಆದ್ಯತಾ ಪಡಿತರ ಚೀಟಿ ವಿತರಣೆ ಕಾರ್ಯ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಆರಂಭ ಆಗಿದೆ. ಹಾಗಾದರೆ ಅರ್ಜಿ ಸಲ್ಲಿಸುವ ವಿಧಾನಗಳನ್ನು ಇಲ್ಲಿ ನೀಡಲಾಗಿದೆ ಗಮನಿಸಿ. ಅರ್ಹ ಕಾರ್ಮಿಕರು ಆದ್ಯಾತಾ ಪಡಿತರ ಚೀಟಿ ಪಡೆಯಲು ನಿಮ್ಮ ಹತ್ತಿರದ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯನ್ನು ಸಂಪರ್ಕಿಸಬಹುದಾಗಿದೆ. ಇನ್ನು ಅರ್ಹರು ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 1800 425 9339 ಅಥವಾ ಸಹಾಯವಾಣಿ 1969ಕ್ಕೆ ಸಂಪರ್ಕಿಸಬಹುದಾಗಿದೆ.

ಚಾಲಕನ ನಿಯಂತ್ರಣ ತಪ್ಪಿ ಖಾಸಗಿ ಬಸ್ ಪಲ್ಟಿ : ತಪ್ಪಿದ ಭಾರೀ ಅನಾಹುತ!

• ಉದಯವಾಹಿನಿ, ಬೆಂಗಳೂರು

ಚಾಲಕನ ನಿಯಂತ್ರಣ ತಪ್ಪಿ ಖಾಸಗಿ ಬಸ್ ಪಲ್ಟಿ ಹೊಡೆದ ಪರಿಣಾಮ ಬಸ್ ನಲ್ಲಿದ್ದ ಇಬ್ಬರು ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಹಾಗಾಗಿ ಭಾರೀ ಅನಾಹುತ ಒಂದು ತಪ್ಪಿದೆ. ಈ ಒಂದು ಘಟನೆ ಬೆಂಗಳೂರಿನ ನೆಲಮಂಗಲದ ಬಳಿ ನಡೆದಿದೆ. ಚಾಲಕನ ನಿಯಂತ್ರಣ ತಪ್ಪಿ ಖಾಸಗಿ ಬಸ್ ಪಲ್ಟಯಾಗಿದದೆ. ಅಪಘಾತ ಬಳಿಕ ಖಾಸಗಿ ಬಸ್ ನಲ್ಲಿದ್ದ ಇಬ್ಬರೂ ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ನೆಲಮಂಗಲದಿಂದ ಬಸ್ ತುಮಕೂರಿಗೆ ತೆರಳುತ್ತಿತ್ತು. ಈ ವೇಳೆ ಚಾಲಕರ ನಿಯಂತ್ರಣ ತಪ್ಪಿ ಬಸ್ ಪಲ್ಟಿಯಾಗಿದೆ. ಈ ವೇಳೆ ಹೆದ್ದಾರಿಯಲ್ಲಿ ಫುಲ್ ಟ್ರಾಫಿಕ್ ಜಾಮ್ ಉಂಟಾಗಿದೆ.

ಮಾನಸಿಕ ಸ್ವಾಸ್ಥ್ಯ ಕಾಪಾಡಿಕೊಳ್ಳಲು ಸರ್ಕಾರದಿಂದ ಟೆಲಿ ಮನಸ್ ಆ್ಯಪ್ ಬಿಡುಗಡೆ.!

• ಉದಯವಾಹಿನಿ, ಬೆಂಗಳೂರು

ಮಾನಸಿಕ ಸ್ವಾಸ್ಥ ಕಾಪಾಡಿಕೊಳ್ಳಲು ರಾಜ್ಯ ಸರ್ಕಾರ ಟೆಲಿ ಮನಸ್ ಆ್ಯಪ್ ಬಿಡುಗಡೆ ಮಾಡಿದೆ. ಮಾನಸಿಕ ಸ್ವಾಸ್ಥ್ಯ ಕಾಪಾಡಿಕೊಳ್ಳಲು ಹಾಗೂ ಮಾನಸಿಕ ಅನಾರೋಗ್ಯ ಸಮಸ್ಯೆಗಳಿಗೆ ಪರಿಹಾರೋಪಾಯ ಕಂಡುಕೊಳ್ಳಲು ಟೆಲಿ ಮನಸ್ ಆಯಪ್ ಸಹಕಾರಿಯಾಗಲಿದೆ. ಗೂಗಲ್ ಪ್ಲೇ ಸ್ಟೋರ್ನಲ್ಲಿ ಟೆಲಿಮನಸ್ ಆಯಪ್ ಲಭ್ಯವಿದ್ದು, ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ನೆರವಾಗಲಿದೆ. ಎಂದು ಸರ್ಕಾರ ಪ್ರಕಟಣೆ ಹೊರಡಿಸಿದೆ.

ವ್ಯಾಪ್ತಿಯಲ್ಲಿ ಬೈಲಾ ಉಲ್ಲಘಿಸಿರುವ ನಿರ್ಮಾಣ ಹಂತದ 200 ಕಟ್ಟಡಗಳು ಪತ್ತೆ

• ಉದಯವಾಹಿನಿ, ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿರ್ಮಾಣ ಹಂತದಲ್ಲಿರುವ ಸುಮಾರು 200 ಕಟ್ಟಡಗಳು ನಿಯಮಗಳನ್ನು ಉಲ್ಲಂಘಿಸಿದ್ದು, ಅವುಗಳನ್ನು ಶೀಘ್ರದಲ್ಲೇ ತೆರವುಗೊಳಿಸಲಾಗುವುದು ಎಂದು ಪಾಲಿಕೆ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ. ಕಿರಿಯ ಹಾಗೂ ಸಹಾಯಕ ಇಂಜಿನಿಯರ್‌ಗಳು ಸೇರಿದಂತೆ ಹೊರಗುತ್ತಿಗೆ ಆಧಾರದಲ್ಲಿ 70 ಸಿಬ್ಬಂದಿಯನ್ನು ನೇಮಕ ಮಾಡಿಕೊಂಡು ಅಕ್ರಮ ಕಟ್ಟಡಗಳ ಸಮೀಕ್ಷೆ ಮಾಡಲಾಗುತ್ತಿದೆ. ಕಂದಾಯ ಅಧಿಕಾರಿಗಳು ಸೇರಿದಂತೆ ಇಂಜಿನಿಯರ್‌ಗಳ ತಂಡ ಪಾಲಿಕೆಯ ಎಲ್ಲಾ 8 ವಲಯಗಳಿಗೆ ಭೇಟಿ ನೀಡಿ ಸಮೀಕ್ಷೆ ನಡೆಸಲಿದೆ. ಮಹದೇವಪುರದಲ್ಲಿ 65 ಹಾಗೂ ಪಶ್ಚಿಮ ವಲಯದಲ್ಲಿ 27 ಕಟ್ಟಡಗಳು ಅಕ್ರಮವಾಗಿ ನಿರ್ಮಾಣವಾಗುತ್ತಿವೆ ಎಂಬ ವರದಿ ಲಭ್ಯವಾಗಿದೆ. ಶೀಘ್ರ ಉಳಿದ ವಲಯಗಳ ಮಾಹಿತಿ ಲಭ್ಯವಾಗಲಿದೆ ಎಂದು ತಿಳಿಸಿದ್ದಾರೆ. ಎಲ್ಲಾ ವಲಯದ ಮಾಹಿತಿ ಲಭ್ಯವಾಗುತ್ತಿದ್ದು, ಅಂದಾಜು 200 ಕಟ್ಟಡಗಳು ನಿಯಮ ಉಲ್ಲಂಘಿಸಿವೆ ಎಂದು ಅಂದಾಜು ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ.

ಬೆಂಗಳೂರಲ್ಲಿ ಬಸ್ ಚಲಾಯಿಸುತ್ತಿದ್ದಾಗಲೇ ಹೃದಯಾಘಾತ: ಬಿಎಂಟಿಸಿ ಚಾಲಕ ಸಾವು

• ಉದಯವಾಹಿನಿ, ಬೆಂಗಳೂರು

ಬಸ್ ಚಲಾಯಿಸುತ್ತಿದ್ದಾಗಲೇ ಬಿಎಂಟಿಸಿ ಚಾಲಕನಿಗೆ ಹೃದಯಾಘಾತ ಉಂಟಾಗಿದೆ. ಬಸ್ ನಿಲ್ಲಿಸಿ ಆಸ್ಪತ್ರೆಗೆ ದಾಖಲಿಸೋಕೆ ಕರೆದೊಯ್ಯಲು ತಯಾರಿಯಲ್ಲಿದ್ದಾರೆ ಸಾವನ್ನಪ್ಪಿರುವಂತ ಧಾರುಣ ಘಟನೆ ನಡೆದಿದೆ. ಬೆಂಗಳೂರಿನ ನೆಲಮಂಗಲದಿಂದ ಯಶವಂತಪುರಕ್ಕೆ ಬಿಎಂಟಿಸಿ ಬಸ್ ಅನ್ನು ಚಾಲಕ ಕಿರಣ್(39) ತೆಗೆದುಕೊಂಡು ಹೋಗುತ್ತಿದ್ದರು.ದಾರಿಯ ಮಧ್ಯದಲ್ಲೇ ಬಿಎಂಟಿಸಿ ಡಿಪೋ ನಂಬರ್.40ರ ಚಾಲಕ ಕಿರಣ್ ಅವರಿಗೆ ಎದೆನೋವು ಕಾಣಿಸಿಕೊಂಡಿತ್ತು. ಈ ಕಾರಣದಿಂದ ಬಸ್ಸನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿ, ಚಾಲಕನನ್ನು ಆಸ್ಪತ್ರೆಗೆ ಕರೆದೊಯ್ಯಬೇಕು ಎನ್ನುವಷ್ಟರಲ್ಲಿ ಚಾಲಕ ಕಿರಣ್ ಸಾವನ್ನಪ್ಪಿದ್ದಾರೆ. ಈ ಘಟನೆಯಲ್ಲಿ ಚಾಲಕನ ಸಮಯಪ್ರಜ್ಞೆಯಿಂದ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಅಬಕಾರಿ ಇಲಾಖೆಯಲ್ಲಿ 900 ಕೋಟಿ ರೂ. ಹಗರಣ, ಸಿಬಿಐ ತನಿಖೆಗೆ ವಹಿಸಿ

ಸಚಿವ ಆರ್.ಬಿ.ತಿಮ್ಮಾಪುರ ರಾಜೀನಾಮೆ ನೀಡಬೇಕು, ಇದು ಹಣದ ಅವ್ಯವಹಾರವಾಗಿರುವುದರಿಂದ ಜಾರಿ

• ಉದಯವಾಹಿನಿ, ಬೆಂಗಳೂರು

ಅಬಕಾರಿ ಇಲಾಖೆಯಲ್ಲಿ 900 ಕೋಟಿ ರೂ. ಭ್ರಷ್ಟಾಚಾರ ನಡೆದಿದ್ದು, ಇದನ್ನು ಕೂಡಲೇ ಸಿಬಿಐ ತನಿಖೆಗೆ ವಹಿಸಬೇಕು. ಸಚಿವ ಆರ್.ಬಿ.ತಿಮ್ಮಾಪುರ ರಾಜೀನಾಮೆ ನೀಡಬೇಕು. ಇದು ಹಣದ ಅವ್ಯವಹಾರವಾಗಿರುವುದರಿಂದ ಜಾರಿ ನಿರ್ದೇಶನಾಲಯ ಕೂಡ ಕ್ರಮ ವಹಿಸಬೇಕು ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೆ ಬೆಂಗಳೂರಿನಲ್ಲಿ ರೌಡಿಗಳು ಹಫ್ತಾ ವಸೂಲಿ ಮಾಡುತ್ತಿದ್ದರು. ಈಗ ರೌಡಿಗಳೇ ನಾಚುವಂತೆ ಅಬಕಾರಿ ಸಚಿವ ತಿಮ್ಮಾಪುರ ಅವರು ವಾರಕ್ಕೆ 18 ಕೋಟಿ ರೂ. ವಸೂಲಿ ಮಾಡುತ್ತಿದ್ದಾರೆ.

ಉದಯವಾಹಿನಿ ಚಿತ್ರ

ಬಿಜೆಪಿ ಸರ್ಕಾರವಿದ್ದಾಗ 40 ಪರ್ಸೆಂಟ್ ಆರೋಪ

ಅಂದರೆ ವರ್ಷಕ್ಕೆ ಸುಮಾರು 900 ಕೋಟಿ ರೂ. ಲಂಚ ಪಡೆಯಲಾಗುತ್ತಿದೆ. ಪ್ರತಿ ಹುದ್ದೆಯ ಅಧಿಕಾರಿಗಳಿಗೆ ಎಷ್ಟು ಲಂಚ ನೀಡಲಾಗುತ್ತಿದೆ ಎಂದು ಮದ್ಯ ಮಾರಾಟಗಾರರ ಸಂಘ ಪತ್ರದಲ್ಲಿ ವಿವರಿಸಿದೆ.

ಮುಖ್ಯಮಂತ್ರಿ, ಕಚೇರಿಯ ಅಧಿಕಾರಿ, ಪಿಎ, ಪಿಎಸ್ ಪಡೆಯುತ್ತಿರುವ ಲಂಚದ ಬಗ್ಗೆಯೂ ವಿವರವಿದೆ. ಸಮಬಾಳು ಸಮಪಾಲು ಎಂಬಂತೆ ಸಚಿವ ತಿಮ್ಮಾಪುರ ಎಲ್ಲರಿಗೂ ಲಂಚ ಹಂಚಿದ್ದಾರೆ. ಬಿಜೆಪಿ ಸರ್ಕಾರವಿದ್ದಾಗ 40 ಪರ್ಸೆಂಟ್ ಎಂದು ಆರೋಪ ಮಾಡಿದ್ದರೂ ಅದಕ್ಕೆ ಸೂಕ್ತ ದಾಖಲೆ ನೀಡಿಲ್ಲ. ಈಗ ಕಾಂಗ್ರೇಸ್ ಸರ್ಕಾರದ ಭ್ರಷ್ಟಾಚಾರದ ಭಿತ್ತಿಪತ್ರ ಅಂಟಿಸುವುದಾದರೆ ನಾನು ಕೂಡ ಬರುತ್ತೇನೆ ಎಂದು ವ್ಯಂಗ್ಯವಾಡಿದರು.

ಮದ್ಯ ಮಾರಾಟಗಾರರು ಈ ಕಿರುಕುಳ ವಿರೋಧಿಸಿ ಒಂದು ದಿನ ಬಂದ್ ಮಾಡಲಿದ್ದಾರೆ. ಈ ಸರ್ಕಾರ ಆದಾಯಕ್ಕೆ ಮದ್ಯವನ್ನೇ ನಂಬಿಕೊಂಡಿದೆ. ಹೀಗೆ ಬಾರ್‌ಗಳನ್ನು ಬಂದ್ ಮಾಡಿದರೆ ಸರ್ಕಾರದ ಖಜಾನೆ ಸಂಪೂರ್ಣ ಖಾಲಿಯಾಗಲಿದೆ ಎಂದರು. ಬೆಳಗಾವಿಯ ಸರ್ಕಾರಿ ಕಚೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕ ರುದ್ರಣ್ಣ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಮೊಬೈಲ್ ನಲ್ಲಿ ಸಂದೇಶ ಕಳುಹಿಸಿದ್ದರು. ಆದರೂ ಹಿರಿಯ ಅಧಿಕಾರಿಗಳು ಇದನ್ನು ಕಡೆಗಣಿಸಿದ್ದಾರೆ. ಇದು ಕರುಣೆಯೇ ಇಲ್ಲದ ಸರ್ಕಾರ. ಸುಮಾರು 2 ಲಕ್ಷ ರೂ. ಲಂಚವನ್ನು ರುದ್ರಣ್ಣ ಅವರಿಂದ ಪಡೆಯಲಾಗಿದೆ. ವಾಲ್ಮೀಕಿ ನಿಗಮದ ಅಧಿಕಾರಿ ಚಂದ್ರಶೇಖರನ್ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಪತ್ರ ಬರೆದ ಮಾದರಿಯಲ್ಲೇ ರುದ್ರಣ್ಣ ಕೂಡ ಭ್ರಷ್ಟಾಚಾರದ ವಿರುದ್ಧ ಹೋರಾಡಿ ಎಂದು ಸಂದೇಶ ಕಳುಹಿಸಿದ್ದಾರೆ. ಪಿಎಸ್‌ಐ ಪರಶುರಾಮ್ ಸತ್ತ ಬಳಿಕ ಯಾರನ್ನೂ ಬಂಧನ ಮಾಡಿಲ್ಲ. ರುದ್ರಣ್ಣ ಅವರ ಪ್ರಕರಣ ಅದೇ ರೀತಿ ಆಗುವ ಸಂಭವವಿದೆ. ಮಾಜಿ ಸಚಿವ ಈಶ್ವರಪ್ಪ ಅವರ ವಿರುದ್ಧ ತೊಡೆ ತಟ್ಟಿ ಹೋರಾಡಿದ್ದ ಸಿಎಂ ಸಿದ್ದರಾಮಯ್ಯ, ಈಗ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

> ಕಾಂಗ್ರೇಸ್ ಸರ್ಕಾರ ಬಂದ ನಂತರ ಒಳ್ಳೆಯ ಕಾಲ ಬರುತ್ತದೆ ಎಂದುಕೊಂಡಿದ್ದೆ. ಆದರೆ ಇದು ಅಧಿಕಾರಿಗಳಿಗೆ ಯಮಗಂಡ ಕಾಲ, ಗುತ್ತಿಗೆದಾರರಿಗೆ ರಾಹುಕಾಲ, ರೈತರಿಗೆ ಕೊನೆಗಾಲ, ಜನರಿಗೆ ವಿನಾಶ ಕಾಲ ಎಂಬಂತಾಗಿದೆ. ವಿಧಾನಸೌಧದ ಮುಂಭಾಗ ಸರ್ಕಾರದ ಕೆಲಸ, ದೇವರ ಕೆಲಸ ಎಂದು ಬರೆಸಲಾಗಿದೆ. ಇನ್ನು ಕಾಂಗ್ರೇಸ್ ಸರ್ಕಾರದ ಜೇಬು ತುಂಬುವ ಕೆಲಸ ಎಂದು ಬದಲಾಯಿಸಿಕೊಳ್ಳಲಿ ಎಂದರು.

> ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬದುಕಿನ ತೆರೆದ ಪುಸ್ತಕದಲ್ಲಿ ಕಪ್ಪು ಚುಕ್ಕೆಗಳೇ ತುಂಬಿದೆ. ಅವರ ಕೈ ಕೆಳಗೆ ಕೆಲಸ ಮಾಡುವ ಪೊಲೀಸ್ ಅಧಿಕಾರಿಯ ಮುಂದೆ ಅವರೇ ಕುಳಿತು ತನಿಖೆ ಎದುರಿಸುವುದೆಂದರೆ ಅವರಿಗೆ ನಾಚಿಕೆಯಾಗಬೇಕು. ಇಲ್ಲಿ ತನಿಖೆಗೂ ನಿರ್ದಿಷ್ಟ ಸಮಯ ನಿಗದಿಪಡಿಸಿದ್ದು, ಇದು ಹೇಗೆ ಸಾಧ್ಯ ಎಂದು ಅಚ್ಚರಿಯಾಗುತ್ತದೆ ಎಂದರು.
> -ಆರ್.ಅಶೋಕ

ಮರ ಕಡಿಯಬಾರದೆಂದು ವೃಕ್ಷ ಬಚಾವೋ ಆಂದೋಲನ ಮುಖ್ಯಸ್ಥ ಪರಿಸರ ಮಂಜು ಆಕ್ರೋಶ

• ಉದಯವಾಹಿನಿ, ಕೆ.ಆರ್.ಪುರ

ಉದಯವಾಹಿನಿ ಚಿತ್ರ

120 ವರ್ಷದ ಹಳೆಯ ಅರಳಿ ಮತ್ತು ನೆರಳೆ ಮರಗಳನ್ನು ಕಡಿಯಬೇಕೆಂದು ಭೂಕಳ್ಳರು ಮುಂದಾಗಿದ್ದು, ಯಾವುದೇ ಕಾರಣಕ್ಕೂ ಮರ ಕಡಿಯಬಾರದೆಂದು ವೃಕ್ಷ ಬಚಾವೋ ಆಂದೋಲನ ಸಮಿತಿ ಮುಖ್ಯಸ್ಥ ಪರಿಸರ ಮಂಜು ಆಕ್ರೋಶ ವ್ಯಕ್ತಪಡಿಸಿದರು.

ಕ್ಷೇತ್ರದ ಹೊರಮಾವು ಅಗರ ಗ್ರಾಮದ ಮುನೇಶ್ವರ ದೇವಸ್ಥಾನದ ಸರ್ವೆ ನಂ.52/3ಬಿ ಗೋಪಾಲ್ ಎಂಬುವವರ ಜಮೀನಿನಲ್ಲಿರುವ 2 ಮರಗಳನ್ನು ಅನಧಿಕೃತವಾಗಿ ಕೆಡವಲು ಕೆಲ ಭೂಕಳ್ಳರು ಮುಂದಾಗಿರುವುದನ್ನು ಖಂಡನಿಯವಾದದ್ದು. ಪರಿಸರ ಸಂರಕ್ಷಣೆಗಾಗಿ ವೃಕ್ಷಗಳನ್ನು ಸಂರಕ್ಷಣೆ ಮಾಡಬೇಕು, ಮರಕ್ಕೆ ಧಾರ್ಮಿಕ ಭಾವನೆಯಿಂದ ಈ ಮರಕ್ಕೆ ನಿತ್ಯ ಪೂಜೆ ಸಹ ಸಲ್ಲುತ್ತಿದೆ.

ಯಾರೋ ಅನಾಮಧೇಯ ವ್ಯಕ್ತಿ ನೀಡಿರುವ ದೂರಿನ್ವಯ ಬಿಬಿಎಂಪಿ ಅರಣ್ಯ ಇಲಾಖೆಯ ಅಧಿಕಾರಿಗಳೆಂದು ಹೇಳಿಕೊಂಡು ಮರವನ್ನು ಕೆಡವಲು ಬಂದಿದ್ದು ಅವರ ವಿರುದ್ಧ ಅರಣ್ಯ ಇಲಾಖೆಗೆ ದೂರು ನೀಡಿಲಾಗಿದೆ ಎಂದರು. ಮರವು ಆರೋಗ್ಯಕಾರವಾಗಿ, ಬಲಿಷ್ಟವಾಗಿದ್ದು ಪಕ್ಷಿಗಳು ಈ ಮರದಲ್ಲಿ ಆಶ್ರಯ ಸಹ ಪಡೆದಿದೆ, ಯಾವುದೇ ಒಂದು ರಂಬೆ ಕೊಂಬೆಗಳು ಸಹ ಹಾನಿಯಾಗಿ ಬೀಳುವ ಸ್ಥಿತಿಯಲ್ಲಿ ಇರುವುದಿಲ್ಲ. ಇವು ನಮ್ಮ ಪಾರಂಪರಿಕ ಮರಗಳಾಗಿದ್ದು ಇಂತಹ ಮರಗಳನ್ನು ಕಲಿಯಲು ಮುಂದಾದ್ದಾರೆ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಫಿಸಿಯೋಥೆರಪಿ ಬದಲಾಗಿ ಸರ್ಜರಿ ಫಿಕ್ಸ್

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ

ರೇಣುಕಾ ಸ್ವಾಮಿ ಕೊಲೆ ಆರೋಪಿ ನಟ ದರ್ಶನ್‌ಗೆ ಬೆನ್ನು ನೋವಿನ ಸಮಸ್ಯೆ. ಹಿನ್ನೆಲೆಯಲ್ಲಿ ಅವರು ಬೆಂಗಳೂರಿನ ಬಿಜಿಎಸ್ ಆಸ್ಪತ್ರೆಯಲ್ಲಿ ಕಳೆದ 6 ದಿನಗಳ ಹಿಂದೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಈ ಹಿಂದೆ ಅವರಿಗೆ ಫಿಸಿಯೋಥೆರಫಿ ಮಾಡಬೇಕು ಎಂದು ವೈದ್ಯರು ತಿಳಿಸಿದ್ದರು. ಇದೀಗ ಈ ಒಂದು ವಿಷಯದಲ್ಲಿ ಬದಲಾಗಿದ್ದು, ಅವರಿಗೆ ಫಿಜಿಯೋಥೆರಫಿ ಬದಲು ಸರ್ಜರಿಯೆ ಬಹುತೇಕ ಫಿಕ್ಸ್ ಆಗಿದೆ

ಕೊನೆ ಕ್ಷಣದಲ್ಲಿ ದರ್ಶನ್ ಚಿಕಿತ್ಸೆ ಪ್ಲ್ಯಾನ್ ಚೇಂಜ್

ಹೌದು ಈಗಾಗಲೇ ದರ್ಶನ್‌ಗೆ ಹಲವು ರೀತಿಯ ತಪಾಸಣೆ ಮಾಡಲಾಗಿದೆ. ಎಂಆರ್‌ಐ ಸ್ಕ್ಯಾನಿಂಗ್, ಸಿಟಿ ಸ್ಕ್ಯಾನಿಂಗ್ ಬ್ಲಡ್ ಟೆಸ್ಟ್ ಸೇರಿದಂತೆ ಅನೇಕ ಪರೀಕ್ಷೆಗಳಿಗೆ ನಟ ದರ್ಶನ್ ಒಳಪಟ್ಟಿದ್ದಾರೆ. ಪರೀಕ್ಷೆಯ ವೇಳೆ ದರ್ಶನ್‌ಗೆ ಭಾರಿ ಸಮಸ್ಯೆ ಪತ್ತೆಯಾಗಿತ್ತು. ಆರೋಗ್ಯದ ದೃಷ್ಟಿಯಿಂದ ಇದೀಗ ಸರ್ಜರಿ ಮಾಡಲು ನಿರ್ಧಾರ ಮಾಡಲಾಗಿದೆ. ನಟ ದರ್ಶನ್‌ಗೆ ಸರ್ಜಿರಿ ಬಹುತೇಕ ಫಿಕ್ಸ್ ಆದಂತೆ ಆಗಿದೆ. ಆಸ್ಪತ್ರೆಯಲ್ಲಿ ದರ್ಶನ್ ಚಿಕಿತ್ಸೆ ಪ್ಲ್ಯಾನ್ ಚೇಂಜ್ ಆಗಿದೆ. ಫಿಜಿಯೋಥೆರಪಿ ಬದಲಿಗೆ ಸರ್ಜರಿಗೆ ದರ್ಶನ್ ಮನಸ್ಸು ಮಾಡಿದ್ದಾರೆ. ಎರಡು ದಿನದಲ್ಲಿ ದರ್ಶನಗೆ ಸರ್ಜರಿ ಮಾಡಲಿದ್ದಾರೆ. ಬೆಂಗಳೂರಿನ ಕೆಂಗೇರಿ ಬಳಿ ಇರುವ ಬಿಜಿಎಸ್ ಆಸ್ಪತ್ರೆಯಲ್ಲಿ ಕಳೆದ 6 ದಿನಗಳಿಂದ ನಟ ದರ್ಶನ್ ಟ್ರೀಟ್ಮೆಂಟ್ ತೆಗೆದು ಕೊಳ್ಳುತ್ತಿದ್ದಾರೆ. ಇದೀಗ ನಟ ದರ್ಶನಿಗೆ ಫಿಸಿಯೋ ಥೆರಪಿ ಬದಲಾಗಿ ಸರ್ಜರಿಗೆ ಫಿಕ್ಸ

ನಿಖಿಲ್ ಪರ ಕುಮಾರಸ್ವಾಮಿ- ಯಡಿಯೂರಪ್ಪ ಜಂಟಿ ಪ್ರಚಾರ

● ನಿಮಗೆ ಕೈ ಜೋಡಿಸಿ ಪ್ರಾರ್ಥಿಸುವೆ ಕುಮಾರಸ್ವಾಮಿ ಅವರ ಪುತ್ರನನ್ನು ಗೆಲ್ಲಿಸಿ ಕೊಡಿ: ಯಡಿಯೂರಪ್ಪ

• ಉದಯವಾಹಿನಿ ಚನ್ನಪಟ್ಟಣ

ಉಪ ಚುನಾವಣೆಯ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರ ಪರವಾಗಿ, ಅವರ ತಂದೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮತ್ತು ಬಿಜೆಪಿಯ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಬುಧವಾರ ಜಂಟಿಯಾಗಿ ಪ್ರಚಾರ ನಡೆಸಿದರು.

ನಿಖಿಲ್‌ಗೆ ಮತ ಹಾಕುವಂತೆ ಮನವಿ

ತಾಲ್ಲೂಕಿನ ಸೋಗಾಲದಲ್ಲಿ ತೆರೆದ ವಾಹನದಲ್ಲಿ ರೋಡ್ ಷೋ ನಡೆಸಿದ ಇಬ್ಬರೂ ನಾಯಕರು, ನಿಖಿಲ್‌ಗೆ ಮತ ಹಾಕುವಂತೆ ಮನವಿ ಮಾಡಿದರು.

ಯಡಿಯೂರಪ್ಪ ಮಾತನಾಡಿ, ನಿಮಗೆ ಕೈ ಜೋಡಿಸಿ ಪ್ರಾರ್ಥಿಸುವೆ. ಕುಮಾರಸ್ವಾಮಿ ಅವರ ಪುತ್ರನನ್ನು ಗೆಲ್ಲಿಸಿ ಕೊಡಿ. ನಾನು ಮತ್ತು ಕುಮಾರಸ್ವಾಮಿ ಒಗ್ಗೂಡಿ ಭಾಗ್ಯಲಕ್ಷ್ಮಿ ಯೋಜನೆ ಜಾರಿಗೆ ತಂದೆವು. ಶಾಲೆಗೆ ಹೋಗುವ ಹೆಣ್ಣು ಮಕ್ಕಳಿಗೆ ಅನುಕೂಲವಾಗಲಿ ಎಂದು ಸೈಕಲ್, ಹಿರಿಯ ಜೀವಗಳಿಗರ ಸಂಧ್ಯಾ ಸುರಕ್ಷಾ ಯೋಜನೆ ತಂದೆವು.

ಕೇಂದ್ರದ ಕಿಸಾನ್‌ಸಮ್ಮಾನ್ ಯೋಜನೆಗೆ ನಾವು ರಾಜ್ಯದಿಂದ 6 ಸಾವಿರ ಕೊಟ್ಟು ರೈತರಿಗೆ ಅನುಕೂಲ ಮಾಡಿಕೊಟ್ಟೆವು. ನಮ್ಮ ಅಧಿಕಾರಾವಧಿಯಲ್ಲಿ ಆದಷ್ಟು ಜನಪರ ಕೆಲಸಗಳನ್ನು ಮಾಡಿದೆವು. ನಿಖಿಲ್ ಅವರಿಗೆ ನೀವು ಆಶೀರ್ವಾದ ಮಾಡಿ, ಸೇವೆಗೆ ಅವಕಾಶ ಕಲ್ಪಿಸಬೇಕು ಎಂದರು. ಕುಮಾರಸ್ವಾಮಿ ಮಾತನಾಡಿ, ನಿಖಿಲ್ ಸ್ಪರ್ಧೆ ದೈವದ ಇಚ್ಛೆ. 2018 ರಲ್ಲಿ ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರ ಒತ್ತಡದಿಂದಾಗಿ ಅವರಿಗೆ ಗೌರವ ಕೊಟ್ಟು ಇಲ್ಲಿಗೆ ಬಂದೆ. ನಾನು ನಾಮಪತ್ರ ಸಲ್ಲಿಸಿದರೂ ನೀವೇ ಚುನಾವಣೆ ಮಾಡಿ ಗೆಲ್ಲಿಸಿದ್ರಿ.

ನನ್ನ ಪರ್ಮನೆಂಟ್ ಟೂರಿಂಗ್ ಟಾಕೀಸ್ ರಾಮನಗರ. ನನಗೆ ಆ ರೀತಿ ಹೇಳಿದ ಸಚಿವಗೆ ತಾಕತ್ತಿದ್ದರೆ ಅವರ ಕ್ಷೇತ್ರ ಬಿಟ್ಟು ಬೇರೆ ಕಡೆ ನಿಂತು ಗೆಲ್ಲಲಿ ಎಂದು ಸವಾಲು ಹಾಕಿದರು. ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ವರಿಷ್ಠರು ದೆಹಲಿಗೆ ಕರೆದಿದ್ದರಿಂದ ಹಾಗೂ ಮಂಡ್ಯದಲ್ಲಿ ಕುಂದಿದ್ದ ಪಕ್ಷವನ್ನು ಮೇಲಕ್ಕೆತ್ತಲು ಅಲ್ಲಿಗೆ ಹೋದೆ. ಅವರು ಅಭಿಮಾನದಿಂದ ಗೆಲ್ಲಿಸಿ ದೆಹಲಿಗೆ ಕಳಿಸಿದರು. ನಾನು ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟ ಬಳಿಕ ಯೋಗೇಶ್ವರ್ ನನ್ನ ಬಳಿ ಬಂದು ಟಿಕೆಟ್ ಕೇಳಿದರು.

ಆಗ, ನಾನು ನಿಖಿಲ್ ನಿಲ್ಲಿಸುವ ಮಾತೇ ಇಲ್ಲ. ನಮ್ಮವರಿಗೆ ನೀನು ತೊಂದರೆ ಕೊಟ್ಟಿದ್ದೀಯಾ. ಕ್ಷೇತ್ರಕ್ಕೆ ಹೋಗಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಲು ಸೂಚಿಸಿದೆ. ಆದರೆ, ಅವರು ನಮಗೆ ವಿಶ್ವಾಸದ್ರೋಹ ಮಾಡಿದರು ಎಂದು ಆಕ್ರೋಶ ವ್ಯಕ್ತಪಡಿಸಿದರು.


ಉದಯವಾಹಿನಿ ಚಿತ್ರ

ನನ್ನ ಕಣ್ಣೀರಿನ ಬಗ್ಗೆ ಕಾಂಗ್ರೇಸ್‌ನವರು ವ್ಯಂಗ್ಯವಾಡುತ್ತಿದ್ದಾರೆ. ಕುಮಾರಸ್ವಾಮಿ ಕಣ್ಣೀರು ಹಾಕಿದ್ದು ಸ್ವಂತಕ್ಕಲ್ಲ. ರೈತರು ಹಾಗೂ ಬಡವರಿಗಾಗಿ. ನಿಖಿಲ್ ಸ್ಪರ್ಧೆಗೆ ಯಡಿಯೂರಪ್ಪ ಅವರ ಆಶೀರ್ವಾದ ಇದೆ. ಅವನನ್ನು ನಿಮ್ಮ ಮಡಿಲಿಗೆ ಹಾಕಿದ್ದೇನೆ. ನಾನು ದೇಶ ಸುತ್ತಿದರೆ ನಿಖಿಲ್ ನಿಮ್ಮ ಜೊತೆ ಇದ್ದು ಸೇವೆ ಮಾಡುತ್ತಾನೆ. ಅವನನ್ನು ಗೆಲ್ಲಿಸಿ ವಿಧಾನಸೌಧಕ್ಕೆ ಕಳಿಸಿ ಕೊಡಿ ಎಂದು ಮನವಿ ಮಾಡಿದರು.

107 ಕೆರೆಗಳಿಗೆ ನೀರು

ಹಿರಿಯರಾದ ಯಡಿಯೂರಪ್ಪ ಅವರ ಆಶೀರ್ವಾದದಿಂದ ಯೋಗೇಶ್ವರ್ ನಾಯಕನಾದರು. ಅವರಿಗೆ ರಕ್ಷಣೆ ಕೊಟ್ಟುಕೊಂಡು ಬಂದು ಬೆಳೆಸಿದರು. ಸದಾನಂದ ಗೌಡರು ಹದಿನೇಳು ಕೆರೆಗಳಿಗೆ ನೀರು ತುಂಬಿಸಲು ಹಣ ಕೊಟ್ಟರು. ಇಗ್ಗಲೂರು ಜಲಾಶಯವನ್ನು ದೇವೇಗೌಡರು ಕಟ್ಟದಿದ್ದರೆ ನೀರು ಹೇಗೆ ಬರುತ್ತಿತ್ತು. ಅವರು 17 ಕೆರೆಗಳಿಗೆ ನೀರು ತುಂಬಿಸಿದರೆ, ನಾನು 107 ಕೆರೆಗಳಿಗೆ ನೀರು ತುಂಬಿಸಿದೆ. ಎಲ್ಲಾ ಊರುಗಳಿಗೆ ಮೂಲಸೌಕರ್ಯ ಕಲ್ಪಿಸಿದೆ. ಸಿ.ಸಿ ರಸ್ತೆ, ಚರಂಡಿ ಸೇರಿದಂತೆ ಹಲವು ಸೌಕರ್ಯಗಳನ್ನು ಒದಗಿಸಿದೆ ಎಂದರು.

ಕಾಂಗ್ರೇಸ್ ಸರ್ಕಾರ ಭಾಗ್ಯ ಲಕ್ಷ್ಮಿ ಬಾಂಡ್ ಹಣ ಕೊಡುತ್ತಿಲ್ಲ. ಹಾಲಿನ ಪ್ರೋತ್ಸಾಹಧನ ಪಾವತಿಸಿಲ್ಲ. ಅಕ್ಕಿ ಕೊಡುತ್ತಿರುವುದರಿಂದ ಕೇಂದ್ರ ಸರ್ಕಾರದ ಮೋದಿ. ಬ್ಯಾಗ್ ಮಾತ್ರ ಕಾಂಗ್ರೇಸ್ ಸರ್ಕಾರದ್ದು. ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ. ಹೀಗೆ ಹಲವು ಸಮಸ್ಯೆಗಳು ರಾಜ್ಯದಲ್ಲಿ ತಾಂಡವಾಡುತ್ತಿವೆ ಎಂದು ರಾಜ್ಯ ಸರ್ಕಾರದ ವಿರುದ್ಧ ಕಿಡಿಕಾರಿದರು.

ನೀರು ಶುದ್ಧೀಕರಣ ಘಟಕ: 2.76 ಕೋಟಿ ಅನುದಾನ

• ಉದಯವಾಹಿನಿ ವಿರಾಜಪೇಟೆ

ಪುರಸಭೆ ವ್ಯಾಪ್ತಿಯಲ್ಲಿ ಬಳಸಿದ ನೀರು ನಿರ್ವಹಣಾ ಘಟಕ ಸ್ಥಾಪನೆಗೆ 2.76 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಯೋಜನೆ ಜಾರಿಗೆ ಪುರಸಭೆಯು ಕಾರ್ಯಪ್ರವೃತ್ತವಾಗಿದೆ ಎಂದು ಪುರಸಭೆ ಅಧ್ಯಕ್ಷೆ ಎಂ.ಕೆ. ದೇಚಮ್ಮ ತಿಳಿಸಿದರು.

ಪಟ್ಟಣ ವ್ಯಾಪ್ತಿಯಲ್ಲಿ ಜನಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ತ್ಯಾಜ್ಯಗಳಿಂದ ಜಲಮೂಲಗಳು ಕಲುಷಿತಗೊಳ್ಳುತ್ತಿವೆ.

ಜನವಸತಿ ಪ್ರದೇಶಗಳು ಹಾಗೂ ವಾಣಿಜ್ಯ ಸಂಕೀರ್ಣಗಳ ಮಲೀನ ನೀರು ನಗರದ ವಿವಿಧ ಭಾಗಗಳಲ್ಲಿ ಹರಿಯುವ ತೋಡು, ಕಿರು ತೋಡು ಹಾಗೂ ನದಿಗಳ ಒಡಲನ್ನು ಸೇರುತ್ತಿದೆ. ಇದರಿಂದ ಜಲಚರಗಳು, ಪ್ರಾಣಿ ಸಂಕುಲ, ಮಾನವನ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ನದಿ ಸೇರಿದಂತೆ ಜಲಮೂಲಗಳ ಸಂರಕ್ಷಣೆಗೆ ಸರ್ಕಾರವು ಮುಂದಾಗಿದ್ದು, ಮುಖ್ಯಮಂತ್ರಿ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಅವರ ವಿಶೇಷ ಪ್ರಯತ್ನದಿಂದ ಪರಿಸರ ಮಾಲಿನ್ಯ ನಿರ್ಮೂಲನ ಮಂಡಳಿಯ ಅಧೀನದಲ್ಲಿ ಬರುವ ಎನ್.ಜಿ.ಟಿ ಹಾಗೂ ಎಸ್.ಬಿ.ಎಂ(ಯು) ನಿಂದ ಜಲಶುದ್ಧಿ ಅಭಿಯಾನದ ಅಡಿಯಲ್ಲಿ ಬಳಸಿದ ನೀರು ನಿರ್ವಹಣಾ ಘಟಕ ಸ್ಥಾಪನೆಗೆ 2.76 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಈ ಯೋಜನೆಯನ್ನು ಕಾರ್ಯಗತಗೊಳಿಸಲು ಪುರಸಭೆ ವ್ಯಾಪ್ತಿಯಲ್ಲಿ 3 ಎಕರೆ ಪ್ರದೇಶದಲ್ಲಿ ಘಟಕ ಸ್ಥಾಪನೆಗೆ ಸ್ಥಳ ನಿಗದಿ ಮಾಡಲು ಪುರಸಭೆ ಮುಂದಾಗಿದೆ' ಎಂದರು.

ಉದಯವಾಹಿನಿ ಚಿತ್ರ

ಗತಕಾಲದ ಇತಿಹಾಸ ಸಾರುವ ಫಿರಂಗಿ

• ಉದಯವಾಹಿನಿ ಶಿಡ್ಲಘಟ್ಟ

ಯುದ್ಧ, ಹಿಂಸೆ, ಶೌರ್ಯ, ಸೋಲು-ಗೆಲುವುಗಳ ಗತಕಾಲದ ಇತಿಹಾಸ ಸಾರುವ ನಂದಿಬೆಟ್ಟದ ಮೇಲಿನ ಈ ಫಿರಂಗಿಗಳು ಈಗ ಮೌನ ಹೊದ್ದು ಮಲಗಿವೆ. ನಂದಿ ಬೆಟ್ಟದ ಮೇಲೆ ಸುಮಾರು 13 ಫಿರಂಗಿಗಳಿದ್ದು, ಅವುಗಳ ಮೌನ ಮುರಿದು, ಮಾತಾದರೆ ಆಂದಿನ ಕಾಲದ ಚಿತ್ರಣಗಳಿಗೆ ಜೀವ ತುಂಬಬಹುದು.

ನಡೆದು ಹೋಗುವುದೇ ಕಷ್ಟಸಾಧ್ಯವಾದ ನಂದಿಬೆಟ್ಟಕ್ಕೆ, ಈ ಭಾರವಾದ ಫಿರಂಗಳನ್ನು ಸಾಗಿಸಿದ ಬಗೆಯನ್ನು ಊಹಿಸಿದರೆ ರೋಮಾಂಚನವಾಗುತ್ತದೆ.

ಭಾರತದ ಗೌರ್ನರ್ ಜನರಲ್ ಲಾರ್ಡ್ ಕಾರ್ನ್‌ವಾಲಿಸ್, ಮೇಜರ್ ಗೌಡಿ ನೇತೃತ್ವದಲ್ಲಿ ನಂದಿದುರ್ಗವನ್ನು ಮುತ್ತಿಗೆ ಹಾಕಿಸಿದ. ಮೂರು ವಾರಗಳ ಕಾಲ ಶತಪ್ರಯತ್ನ ಮಾಡಿದ ಬ್ರಿಟಿಷ್ ಪಡೆ, ತಮ್ಮ ಫಿರಂಗಿಗಳ ಸಹಾಯದಿಂದ ಪಶ್ಚಿಮದ ದಿಕ್ಕಿನ ಕೋಟೆಗೋಡೆಯನ್ನು ಭೇದಿಸಿತು.

1791ರ ಅಕ್ಟೋಬರ್ 19ರ ಮುಂಜಾನೆ ಬೆಳದಿಂಗಳ ಬೆಳಕಿನಲ್ಲಿ ತನ್ನೆಲ್ಲಾ ಶಕ್ತಿಯನ್ನು ಬಳಸಿ ಬ್ರಿಟಿಷ್ ಸೈನ್ಯ, ನಂದಿದುರ್ಗವನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಯಿತು. ನಂದಿಬೆಟ್ಟದ ಮೇಲೆ ಪ್ರವೇಶದ್ವಾರದಲ್ಲಿ, ನೆಹರು ಭವನದ ನಾಲ್ಕು ದಿಕ್ಕುಗಳಲ್ಲಿ, ಟಿಪ್ಪುವಿನ ಮದ್ದಿನ ಮನೆಯ ಬಳಿ... ಹೀಗೆ ಹಲವಾರು ಕಡೆ ಕಂಡು ಬರುವ ಫಿರಂಗಿಗಳಲ್ಲಿ ಕೆಲವು ಟಿಪ್ಪುವಿನ ಸೈನ್ಯದ್ದಾದರೆ, ಇನ್ನು ಕೆಲವು ಬ್ರಿಟಿಷರಿಗೆ ಸೇರಿದ್ದಾಗಿವೆ.

ಉದಯವಾಹಿನಿ ಚಿತ್ರ

ಕಬ್ಬಿಣವನ್ನು ಎರಕ ಹೊಯ್ದು ತಯಾರಿಸಿದ್ದ ಫಿರಂಗಿಗಳು

ಪ್ರತಿಯೊಂದು ಫಿರಂಗಿಯೂ ಚರಿತ್ರೆಯ ನಿರ್ಮಾಣದಲ್ಲಿ ತನ್ನದೇ ಪಾತ್ರ ವಹಿಸಿದ್ದಿದೆ. 1526 ರಲ್ಲಿ ಮೊಘಲ್ ಸಾಮ್ರಾಜ್ಯ ದೆಹಲಿಯಲ್ಲಿ ಸ್ಥಾಪಿಸಲು ಕಾರಣವಾಗಿದ್ದು ಫಿರಂಗಿಗಳೇ. 1757ರಲ್ಲಿ ಈಸ್ಟ್ ಇಂಡಿಯಾ ಕಂಪೆನಿ ತನ್ನ ಪ್ರಭುತ್ವ ಸ್ಥಾಪಿಸಲು ಕಾರಣವಾದ ಪ್ಲಾಸಿ ಕದನವನ್ನು ರಾಬರ್ಟ್ ಕ್ಲೈವ್ ಗೆಲ್ಲಲು ಕಾರಣವಾಗಿದ್ದು ಅವರ ಬಳಿ ಇದ್ದ, ಕಬ್ಬಿಣವನ್ನು ಎರಕ ಹೊಯ್ದು ತಯಾರಿಸಿದ್ದ ಫಿರಂಗಿಗಳು.

ಶ್ರೀ ಚಿತ್ತಾನಳ್ಳಿ ಪಟ್ಟಲದಮ್ಮ ದೇಗುಲದಲ್ಲಿ ಪ್ರತಿಷ್ಠಾಪನಾ ಮಹೋತ್ಸವ

• ಉದಯವಾಹಿನಿ, ಮಂಡ್ಯ

ಶ್ರೀ ಚಿತ್ರನಾಳಮ್ಮ ಪಟ್ಟಲದಮ್ಮ ದೇವಸ್ಥಾನ ಹೊಳಲು ನೂತನವಾಗಿ ನಿರ್ಮಿಸಿರುವ ನಾಗರಕಟ್ಟೆ, ಅರಳಿಕಟ್ಟೆ, ರಾಜಗೋಪುರ, 52 ದೇವತೆಗಳ ಶಕ್ತಿಪೀಠ, ಬಲಿಪೀಠ, ಗರುಡಗಂಭ, ಅಮ್ಮನವರ ಪಾದುಕೆ, ಸಿಂಹಾವಾಹನ, ಮಹಾದ್ವಾರ ಕಲ್ಲಿನ ಜೋಡಿ ಆನೆಗಳ ಪ್ರತಿಮೆ ಹಾಗೂ ವಿಮಾನ ಗೋಪುರ ಕಳಸ ಪ್ರತಿಷ್ಠಾಪನೆಯ ಉದ್ಘಾಟನಾ ಸಮಾರಂಭ ಅದ್ದೂರಿಯಾಗಿ ನಡೆಯುತ್ತಿದ್ದು, ಇಡೀ ಗ್ರಾಮ ಸಂಭ್ರಮದಲ್ಲಿ ತೇಲಾಡುತ್ತಿದೆ.

ಹಿಂಗಾರು ಹಂಗಾಮಿನಲ್ಲಿ ಮಳೆ ಕೊರತೆ

ಕಾರ್ಯಕ್ರಮ ಮೂರು ದಿನಗಳ ಕಾಲ ನಡೆಯಲಿದ್ದು, ನ.,6 ರ ಬುಧವಾರ ಬೆಳಿಗ್ಗೆ 6, ರಿಂದ ಪಲಾನ್ಯಾಸ, ದೇವತಾರಾಧನೆ, ಪ್ರಾರ್ಥನೆ, ನಾಗಸನ್ನಿಧಿಯಲ್ಲಿ ಬಿಂಬಸುದ್ದಿ, ಸ್ಥಳಶುದ್ಧಿ, ಧಾನ್ಯದಿವಸ, ಸೋಬಾನೆ, ಕಳಸ ಪ್ರತಿಷ್ಠಾಪಿಸುವ ಮೂಲಕ ಗಂಗೆಸಮೇತ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲಾಗುವುದು. ನ.7 ರ ಗುರುವಾರದಂದು ಬೆಳಿಗ್ಗೆ ನಾಗಸನ್ನಿಧಿಯಲ್ಲಿ ನಾಗಪ್ರತಿಷ್ಠೆ, ದೇವಾಲಯದಲ್ಲಿ ಗಣಪತಿಹವನ, ಬಿಂಬಸುದ್ದಿ, ಸಂಜೆ ಕಳಸಾ ಪ್ರಸ್ತಾಪನೆ, ಸುಮಂಗಲಿಯರಿಂದ ರಾತ್ರಿ 10ಗಂಟೆಗೆ ಸಾಮೂಹಿಕ ಕುಂಕುಮಾರ್ಚನೆ, ರಾತ್ರಿ 8 ಗಂಟೆಗೆ ದೊಡ್ಡಯ್ಯ-ಬೀರೇಶ್ವರ 8 ಕೂಟಗಳ ಬಸವ ಪೂಜೆ, ಹೂ ಹೊಂಬಾಳೆ ಮಾಡಲಾಗುವುದು. ನಂತರ ಹೊಳಲು ಗ್ರಾಮದಿಂದ ದೇವಸ್ಥಾನದವರೆಗೆ ದೇವರ ಮೆರವಣಿಗೆ ಮಾಡಲಾಗುವುದು.

ನ.8 ರ ಶುಕ್ರವಾರ ಬೆಳಿಗ್ಗೆ 7ಗಂಟೆಗೆ ಕಲಾ ಹೋಮ, ನವಚಂಡಿಕಾಹವನ ಇತರೆ ಹೋಮಗಳನ್ನು ನೆರವೇರಿಸಿದ ನಂತರ ಶ್ರೀಬಲಮುರಿ ಗಣಪತಿ ದೇವಾಲಯದ ಆವರಣದಿಂದ ಕಳಶ ಪೂಜಿಸಿಕೊಂಡು ನಂತರ 12ದೇವರ ಪೂಜಾ ಕೂಟ, 201 ಮಹಿಳೆಯರಿಂದ ಆದಿಚುಂಚನಗಿರಿ ಪೀಠಾಧ್ಯಕ್ಷರಾದ ಪರಮಪೂಜ್ಯ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ಪುರುಷೋತ್ತಮ ಸ್ವಾಮೀಜಿಯವರನ್ನು ಭವ್ಯ ಮೆರವಣಿಗೆಯೊಂದಿಗೆ ಚಿತ್ತನಳಿಯಮ್ಮ ದೇವಾಲಯಕ್ಕೆ ಕರೆತರಲಾಗುವುದು.

ಉದಯವಾಹಿನಿ ಚಿತ್ರ

ಗ್ರಾಮದಲ್ಲಿ ಹಬ್ಬದ ವಾತಾವರಣ

ಆ ನಂತರ ಉದ್ಘಾಟನಾ ಕಾರ್ಯಕ್ರಮ ನಡೆಯಲಿದ್ದು, ಬೆಳಿಗ್ಗೆ 10 ಗಂಟೆಗೆ ಸುಮಾರು 15 ಸಾವಿರ ಭಕ್ತಾಧಿಗಳಿಗೆ ಕಜ್ಜಾಯದೊಂದಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಹೊಳಲು ಗ್ರಾಮದಿಂದ ಪ್ರಮುಖ ರಸ್ತೆಯಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗಿದ್ದು, ಗ್ರಾಮದಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಿದೆ.

5 ದಿನದಲ್ಲಿ 2.24 ಕೋಟಿ ಒಡೆಯನಾದ ಮಲೆ ಮಾದಪ್ಪ

• ಉದಯವಾಹಿನಿ, ಹನೂರು

ತಾಲ್ಲೂಕಿನಲ್ಲಿರುವ ಶ್ರೀ ಮಲೆ ಮಹದೇಶ್ವರ ಬೆಟ್ಟ ಪ್ರಸಿದ್ಧ ಪ್ರವಾಸಿ ತಾಣಗಳಲ್ಲಿ ಒಂದಾಗಿದೆ. ಇನ್ನು ಈ ಬೆಟ್ಟಕ್ಕೆ ದೀಪಾವಳಿ ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ್ದ ಲಕ್ಷಾಂತರ ಭಕ್ತಾದಿಗಳಿಂದ ಕೇವಲ 5 ದಿನಗಳ ಅವಧಿಯಲ್ಲಿ 2.24 ಕೋಟಿ ರೂಪಾಯಿ ಆದಾಯ ಹರಿದು ಬಂದಿದೆ ಎನ್ನವ ಮಾಹಿತಿ ಲಭ್ಯವಾಗಿದೆ.

ದೀಪಾವಳಿ ಜಾತ್ರಾ ಮಹೋತ್ಸವ ದಿನಗಳಲ್ಲಿ ಹೆಚ್ಚಿನ ಭಕ್ತಾದಿಗಳು ಆಗಮಿಸಿ ಚಿನ್ನದ ರಥೋತ್ಸವ, ಬೆಳ್ಳಿ ರಥೋತ್ಸವ ಹುಲಿ ವಾಹನ, ರುದ್ರಾಕ್ಷಿ ವಾಹನ ಬಸವ ಮಂಟಪ, ಲಾಡು ಮಾರಾಟ, ವಿವಿಧ ಸೇವೆಗಳು ಅಕ್ಕಿ ಸೇವೆ, ಮಿಶ್ರ ಪ್ರಸಾದ, ಪುದುವಟ್ಟು, ಮಾಹಿತಿ ಕೇಂದ್ರ ಹಾಗೂ ತಾಳಬೆಟ್ಟ ಭವನಗಳಿಂದ, ಪಾರ್ಕಿಂಗ್, ಕಲ್ಲು ಸಕ್ಕರೆ ,ತೀರ್ಥ, ಬ್ಯಾಗ್ ಮಾರಾಟದಿಂದ 2,24,91,122 ರೂಪಾಯಿ ಆದಾಯ ಬಂದಿದೆ.

5 ದಿನಗಳ ಅವಧಿಯಲ್ಲಿ 7 ಲಕ್ಷಕ್ಕೂ ಅಧಿಕ ಮಂದಿ ಭೇಟಿ ಕೊಟ್ಟಿದ್ದು, ವಿವಿಧ ಉತ್ಸವಗಳಾದ 1,825 ಚಿನ್ನದ ರಥೋತ್ಸವ, 111 ಬೆಳ್ಳಿ ರಥೋತ್ಸವ, 1,279 ಬಸವ ವಾಹನ, 9,558 ಹುಲಿ ವಾಹನ, 427 ರುದ್ರಾಕ್ಷಿ ವಾಹನದ ಹರಕೆ ಸಲ್ಲಿಕೆ ಮೂಲಕ ಹೆಚ್ಚು ಆದಾಯ ಬಂದಿದೆ ಎಂದು ಪ್ರಾಧಿಕಾರದ ಕಾರ್ಯದರ್ಶಿ ರಘು ಮಂಗಳವಾರ ಮಾಹಿತಿ ನೀಡಿದ್ದಾರೆ.

ಹೆಚ್ಚಿನ ಆದಾಯ ನಿರೀಕ್ಷೆ

ನವೆಂಬರ್ 4ರಿಂದ ಕಾರ್ತಿಕ ಮಾಸ ಪ್ರಾರಂಭವಾಗಿದ್ದು, ಅಯ್ಯಪ್ಪ ಭಕ್ತಾದಿಗಳು ಶ್ರೀ ಕ್ಷೇತ್ರಕ್ಕೆ ಆಗಮಿಸುವ ನಿರೀಕ್ಷೆ ಇರುವುದರಿಂದ ಇನ್ನು ಹೆಚ್ಚಿನ ಆದಾಯ ನಿರೀಕ್ಷಿಸಲಾಗಿದೆ. ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ಮಹಾಶಿವರಾತ್ರಿ, ಯುಗಾದಿ ಹಾಗೂ ದೀಪಾವಳಿ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ನಡೆಯಲಿದೆ. ಮಾರ್ಚ್ ತಿಂಗಳಲ್ಲಿ ನಡೆದ ಮಹಾಶಿವರಾತ್ರಿ ಜಾತ್ರೆ ಸಂದರ್ಭದಲ್ಲಿ ಆರು ದಿನಗಳ ಅವಧಿಯಲ್ಲಿ 3.24 ಕೋಟಿ ರೂಪಾಯಿ ಆದಾಯ ಹರಿದುಬಂದಿತ್ತು.

ಕೆಆರ್‌ಎಸ್ ಹಿನ್ನೀರಿನಲ್ಲಿ ಇದೇ ಮೊದಲ ಬಾರಿಗೆ ಸೀಪ್ಲೇನ್ ಪ್ರದರ್ಶನ: ಭಾರತದ 4 ನಗರಗಳಲ್ಲಿ ಟ್ರಯಲ್ ರನ್

• ಉದಯವಾಹಿನಿ, ಮೈಸೂರು

ಕೆಆರ್‌ಎಸ್ ಹಿನ್ನೀರಿನಲ್ಲಿ ಐತಿಹಾಸಿಕ ಸೀಪ್ಲೇನ್ ಪ್ರದರ್ಶನ ನಡೆಯಲಿದೆ. ಭಾರತದಲ್ಲಿ ಒಟ್ಟು ನಾಲ್ಕು ಸ್ಥಳಗಳಲ್ಲಿ ಈ ಪ್ರಾಯೋಗಿಕ ಓಡಾಟ ನಡೆಯುತ್ತಿದೆ.

ವಿಜಯವಾಡ, ಮೈಸೂರು, ಲಕ್ಷದ್ವೀಪ ಮತ್ತು ಶಿಲ್ಲಾಂಗ್‌ನಲ್ಲಿ ಸೀಪ್ಲೇನ್ ಪ್ರದರ್ಶನ ನಡೆಯುತ್ತಿದ್ದು, ಇದಕ್ಕಾಗಿ ಕೆನಡಾದ ಡಿ ಹ್ಯಾವಿಲ್ಯಾಂಡ್ ಟ್ವಿನ್ ಆಟರ್ ಕ್ಲಾಸಿಕ್ 300 ವಿಮಾನ ಭಾರತಕ್ಕೆ ಆಗಮಿಸಿದೆ.

ಕ್ಲಾಸಿಕ್ 300 ವಿಮಾನ

ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕಿಂಜರಾಪು ರಾಮಮೋಹನ್ ನಾಯ್ಡು ಅವರು, ಭಾರತದಲ್ಲಿ ಸೀಪ್ಲೇನ್ ಕಾರ್ಯಾಚರಣೆಗೆ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದ, ಸುಮಾರು ಎರಡೂವರೆ ತಿಂಗಳ ನಂತರ, ಕರ್ನಾಟಕದಲ್ಲೂ ಸೀಪ್ಲೇನ್ ಪ್ರದರ್ಶನ ನಡೆಯಲಿದೆ. ನವೆಂಬರ್ 10ರ ಭಾನುವಾರ ಪ್ರದರ್ಶನ ನಡೆಯಲಿದೆ.

ಮೂಲಗಳ ಪ್ರಕಾರ, ಈ ಪ್ರದರ್ಶನ ಸ್ಥಳವು ಕೆಆರ್‌ಎಸ್ ಅಣೆಕಟ್ಟಿನಿಂದ ಸುಮಾರು 2 ಕಿಮೀ ದೂರದಲ್ಲಿದೆ. ಸೀಪ್ಲೇನ್ ಕಾರ್ಯಾಚರಣೆಗೆ ಸೂಕ್ತ ಸ್ಥಳ ಎಂದು ಪರಿಗಣಿಸಲಾಗಿದೆ. ಇಲ್ಲಿ ವರ್ಷವಿಡೀ ನೀರಿನ ಲಭ್ಯತೆ, ನೀರಿನ ಆಳ ಮತ್ತು ಅಲೆಗಳ ಆಧಾರದ ಮೇಲೆ ಸ್ಥಳವನ್ನು ಅಂತಿಮಗೊಳಿಸಲಾಗಿದೆ. ಅಣೆಕಟ್ಟಿನ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಸ್ಥಳವನ್ನು ಅಂತಿಮಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕರ್ನಾಟಕದಲ್ಲಿ ಇದೇ ಮೊದಲ ಬಾರಿಗೆ ಸೀಪ್ಲೇನ್ ಪ್ರ

ಅಂತರಾಳದಿಂದ... EDITORIAL

ಆಯುಷ್ಮಾನ್ ಭಾರತ: ವಿಸ್ತರಣೆಗೆ ತಕ್ಕಂತೆ ಸೌಲಭ್ಯವೂ ಹೆಚ್ಚಲಿ

ಆಯುಷ್ಮಾನ್ ಭಾರತ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ'ಯನ್ನು (ಎಬಿ- ಪಿಎಂಜಿಎವೈ) 70 ವರ್ಷ ದಾಟಿದ ಎಲ್ಲ ಪ್ರಜೆಗಳಿಗೂ ವಿಸ್ತರಿಸುವ ಕೇಂದ್ರ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಈ ಕ್ರಮವು ಈಗ ಇರುವುದಕ್ಕಿಂತ ಹೆಚ್ಚಿನ ಜನರಿಗೆ ಆರೋಗ್ಯ ಸೇವೆ ಪಡೆಯುವ ಹಕ್ಕು ನಿಜಾರ್ಥದಲ್ಲಿ ಕಾರ್ಯರೂಪಕ್ಕೆ ಬರುವಂತೆ ಮಾಡಲಿದೆ. ಯಾವುದೇ ಆದಾಯ ಮಿತಿ ಇಲ್ಲದೆ, 70 ವರ್ಷ ಮೇಲ್ಪಟ್ಟ ಎಲ್ಲರಿಗೂ ಈ ಯೋಜನೆಯ ಸೌಲಭ್ಯ ಈಗ ಲಭ್ಯವಾಗಲಿದೆ. ಯೋಜನೆಯು ವಾರ್ಷಿಕ ರೂ.5 ಲಕ್ಷದವರೆಗೆ ವಿಮಾ ಸೌಲಭ್ಯ ಕಲ್ಪಿಸಲಿದೆ. 4.5 ಕೋಟಿ ಕುಟುಂಬಗಳ ಸುಮಾರು 6 ಕೋಟಿ ಜನರು, ಅಂದರೆ ಜನಸಂಖ್ಯೆಯ ಶೇ 5ರಷ್ಟು ಮಂದಿ ಹೊಸದಾಗಿ ಯೋಜನೆಯ ವ್ಯಾಪ್ತಿಗೆ ಒಳಪಡಲಿದ್ದಾರೆ. 2050ರ ವೇಳೆಗೆ ಜನಸಂಖ್ಯೆಯ ಶೇ 20ರಷ್ಟು ಮಂದಿ 70 ವರ್ಷಕ್ಕಿಂತ ಹೆಚ್ಚು ವಯಸ್ಸಿನವರಾಗಿರುತ್ತಾರೆ. ಇವರಲ್ಲಿ ಹಲವರಿಗೆ ಆರೋಗ್ಯ ಸೌಲಭ್ಯ ಸೇರಿದಂತೆ ಕಲ್ಯಾಣ ಯೋಜನೆಗಳ ಬೆಂಬಲದ ಅಗತ್ಯ ಇರುತ್ತದೆ. ಪ್ರಸ್ತುತ ಹಿರಿಯ ನಾಗರಿಕರಲ್ಲಿ ಶೇ 20ಕ್ಕಿಂತಲೂ ಕಡಿಮೆ ಪ್ರಮಾಣದಷ್ಟು ಜನರಷ್ಟೇ ವಿವಿಧ ಬಗೆಯ ಆರೋಗ್ಯ ಸುರಕ್ಷಾ ಕಾರ್ಯಕ್ರಮಗಳ ಪರಿಧಿಗೆ ಒಳಪಟ್ಟಿದ್ದಾರೆ.

> ಯೋಜನೆ ಜಾರಿಯ ವಿಷಯದಲ್ಲಿ ರಾಜಕೀಯದ ನೆರಳು ಇಣುಕಿರುವುದು ದುರದೃಷ್ಟಕರ. ಬಿಜೆಪಿಯನ್ನು ವಿರೋಧಿಸುವ ಪಕ್ಷಗಳ ನೇತೃತ್ವದ ಸರ್ಕಾರ ಇರುವ ರಾಜ್ಯಗಳಾದ ಪಶ್ಚಿಮ ಬಂಗಾಳ ಮತ್ತು ದೆಹಲಿಯು ಈ ಯೋಜನೆಯಿಂದ ಹೊರಗುಳಿಯಲು ನಿರ್ಧರಿಸಿವೆ. ರಾಜಕೀಯ ಹಿತಾಸಕ್ತಿಯ ಕಾರಣದಿಂದ ಅವು ಇಂತಹ ನಿರ್ಧಾರಕ್ಕೆ ಬಂದಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಯೋಜನೆಯ ವಿಸ್ತರಣೆಯ ಜೊತೆಗೆ ಉದ್ಭವವಾಗಬಹುದಾದ ಕೆಲವು ಪ್ರಮುಖ ಸಮಸ್ಯೆಗಳನ್ನು ಪರಿಹರಿಸುವುದು ಮುಖ್ಯವಾಗುತ್ತದೆ.

ಪ್ರಸಕ್ತ ಯೋಜನೆಯಡಿ ಚಿಕಿತ್ಸೆ ನೀಡುತ್ತಿರುವ ಆಸ್ಪತ್ರೆಗಳು ಸೌಲಭ್ಯಗಳನ್ನು ಶಕ್ತಿಮೀರಿ ಒದಗಿಸುತ್ತಿವೆ. ಉದ್ದೇಶಿತ ವಿಸ್ತರಣೆಯು ಅವುಗಳ ಮೇಲೆ ಇನ್ನಷ್ಟು ಒತ್ತಡ ಹೇರಲಿದೆ. 13,582 ಖಾಸಗಿ ಸಂಸ್ಥೆಗಳೂ ಸೇರಿದಂತೆ 30 ಸಾವಿರಕ್ಕೂ ಹೆಚ್ಚು ಆಸ್ಪತ್ರೆಗಳು ಹಾಗೂ ಆರೋಗ್ಯ ಕೇಂದ್ರಗಳು ಆಯುಷ್ಮಾನ್ ಭಾರತ್ ಯೋಜನೆಯಡಿ ಚಿಕಿತ್ಸೆ ನೀಡುವ ಪಟ್ಟಿಯಲ್ಲಿ ಸೇರಿವೆ. ಹಲವು ರಾಜ್ಯಗಳಲ್ಲಿ ಪ್ರತಿ 1 ಲಕ್ಷ ಜನರಿಗೆ ಎರಡರಿಂದ ಹತ್ತು ಆಸ್ಪತ್ರೆಗಳಲ್ಲಷ್ಟೇ ಈ ಯೋಜನೆಯಡಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಮಹಾಲೇಖಪಾಲರ (ಸಿಎಜಿ) ವರದಿ ಹೇಳಿದೆ. ಇದು ಅತ್ಯಂತ ಅಸಮರ್ಪಕ. ಹೀಗಾಗಿ, ಈಗ ಹೊಸ ಬೇಡಿಕೆಗೆ ತಕ್ಕಂತೆ ಸರ್ಕಾರವು ಆರೋಗ್ಯ ಮೂಲಸೌಕರ್ಯ ಹಾಗೂ ಸೌಲಭ್ಯಗಳನ್ನು ಹೆಚ್ಚಿಸಬೇಕಾಗಿದೆ. ಯೋಜನೆಯು ಉಚಿತ ಆರೋಗ್ಯ ಸೇವೆ ನೀಡುವುದರ ಹೊರತಾಗಿಯೂ ಕೈಯಿಂದ ಮಾಡಬೇಕಾದ ಖರ್ಚಿನ ಸಮಸ್ಯೆಯು ಬಗೆಹರಿಯುವುದಿಲ್ಲ. ರೋಗಿಗಳು ಮತ್ತು ಅವರ ಕುಟುಂಬದವರು ಭರಿಸಬೇಕಾದ ಇಂತಹ ಖರ್ಚು ಅವರ ಮೇಲೆ ಬೀಳುವ ಒಂದು ಗಂಭೀರವಾದ ಹೊರೆಯೇ ಹೌದು. ಭಾರತದಲ್ಲಿನ ಈ ಖರ್ಚುವೆಚ್ಚವು ವಿಶ್ವದಲ್ಲಿ ಮಾಡುವ ಈ ಬಗೆಯ ಖರ್ಚಿನ ಸರಾಸರಿಗಿಂತ ಎರಡು ಪಟ್ಟಿಗೂ ಹೆಚ್ಚು. ಯೋಜನೆಯ ಅನುಷ್ಠಾನದಲ್ಲೂ ಕೆಲವು ಲೋಪಗಳು ಕಂಡುಬಂದಿವೆ. ಚಿಕಿತ್ಸೆಗಾಗಿ ನಿಗದಿಪಡಿಸಿರುವ ದರ ಕಡಿಮೆ ಮತ್ತು ಈ ಸಂಬಂಧದ ಹಣ ಬಿಡುಗಡೆಯೂ ವಿಳಂಬವಾಗುತ್ತಿದೆ ಎಂದು ಹಲವು ಆಸ್ಪತ್ರೆಗಳು ದೂರಿವೆ. ಪಾಲಿಸಬೇಕಾದ ಔಪಚಾರಿಕ ಕ್ರಮಗಳು ಹಾಗೂ ಹೆಚ್ಚುವರಿ ಕೆಲಸಗಳ ಕಾರಣದಿಂದ, ಈ ಯೋಜನೆಯಡಿ ಚಿಕಿತ್ಸೆ ಪಡೆಯುವುದನ್ನು ವೈದ್ಯರು ಸೇರಿದಂತೆ ಆಸ್ಪತ್ರೆಯ ಆಡಳಿತ ಮಂಡಳಿಯವರು ರೋಗಿಗಳು ಮತ್ತು ಅವರ ಕುಟುಂಬದವರನ್ನು ಪ್ರೋತ್ಸಾಹಿಸುವುದಿಲ್ಲ ಎಂಬ ವರದಿಗಳೂ ಇವೆ. ಇಂತಹ ಸಮಸ್ಯೆಗಳನ್ನು ಬಗೆಹರಿಸಬೇಕಾಗಿದೆ. ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದು, ಅಗತ್ಯವಿರುವ ಎಲ್ಲರಿಗೂ ಅದರ ಸೌಲಭ್ಯ ದೊರಕುವಂತೆ ಮಾಡಬೇಕಾದ ಹೊಣೆ ಸರ್ಕಾರದ ಮೇಲಿದೆ. ತಾವು ತಮ್ಮ ನಾಗರಿಕರಿಗೆ ಉತ್ತಮ ಆರೋಗ್ಯ ಸೇವಾ ಯೋಜನೆಗಳನ್ನು ಒದಗಿಸುತ್ತಿರುವುದಾಗಿ ಈ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಪ್ರತಿಪಾದಿಸಿದ್ದಾರೆ. ಅದರಲ್ಲೂ ದೆಹಲಿಯಲ್ಲಿನ ಆರೋಗ್ಯ ಸೇವೆಯು ಮಾದರಿ ಎನಿಸಿಕೊಂಡಿದ್ದು, ಅಂತರರಾಷ್ಟ್ರೀಯವಾಗಿ ಪ್ರಶಂಸೆಗೂ ಒಳಗಾಗಿದೆ. ಆದರೆ, ಬಿಜೆಪಿಯೇತರ ಪಕ್ಷಗಳ ಆಡಳಿತವಿರುವ ಕೇರಳ ಮತ್ತು ತಮಿಳುನಾಡು ತಮ್ಮ ನಾಗರಿಕರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುತ್ತಿರುವುದರ ನಡುವೆಯೂ ತಮ್ಮ ರಾಜ್ಯಗಳಲ್ಲಿ ಎಬಿ- ಪಿಎಂಜಿಎವೈ ಯೋಜನೆಯ ಕಾರ್ಯಾಚರಣೆಗೆ ಅನುವು ಮಾಡಿಕೊಟ್ಟಿರುವುದು ಗಮನಾರ್ಹ.

5 ರಾಶಿಯವರಿಗೆ ವಿಷ್ಣು ಆಶೀರ್ವಾದಿಂದ ಧನ ಪ್ರಾಪ್ತಿ..

• ಉದಯವಾಹಿನಿ, ವಿಶೇಷ

ನವೆಂಬರ್ 7 ಗುರುವಾರ ಕಾರ್ತಿಕ ಮಾಸದ ಶುಕ್ಲಪಕ್ಷದ ಷಷ್ಠಿ ತಿಥಿಯಂದು ಛತ್ ಪೂಜೆಯಂದು ಸೂರ್ಯಾಸ್ತಮಾನಕ್ಕೆ ಅರ್ಘ್ಯವನ್ನು ಅರ್ಪಿಸಲಾಗುತ್ತದೆ. ಈ ದಿನ ಸೂರ್ಯ ಷಷ್ಠಿ ಹಬ್ಬವನ್ನು ಆಚರಿಸಲಾಗುತ್ತದೆ. ಜೊತೆಗೆ ಶುಕ್ರನು ಗುರುವಿನ ರಾಶಿಯಾದ ಧನು ರಾಶಿಯಲ್ಲಿ ಮತ್ತು ಗುರು ಶುಕ್ರನ ರಾಶಿಯ ವೃಷಭ ರಾಶಿಯಲ್ಲಿ ಸಾಗಲಿದ್ದಾನೆ. ಹೀಗಾಗಿ ಇಂದು ಪರಿವರ್ತನ ಯೋಗದೊಂದಿಗೆ ರವಿ ಯೋಗವೂ ಸಂಭವಿಸಲಿದೆ. ಈ ಸಂಕ್ರಮಣ ದ್ವಾದಶಿ ರಾಶಿಗಳ ಮೇಲೆ ಪರಿಣಾಮ ಬೀರಲಿದೆ. ಜಾತಕದಲ್ಲಿ ಗುರು ಹಾಗೂ ಶುಕ್ರ ಬಲವಿದ್ದರೆ ಅಂತಹ ರಾಶಿಯವರ ಸಂಪತ್ತು ಮತ್ತು ಅದೃಷ್ಟ ಹೆಚ್ಚಾಗಲಿದೆ. ಜೀವನದಲ್ಲಿ ಬರುವ ಸಮಸ್ಯೆಗಳು ಅಡೆತಡೆಗಳು ದೂರವಾಗಲಿದೆ. ಜೊತೆಗೆ ಬ್ರಹ್ಮಾಂಡದ ಸೃಷ್ಟಿಕರ್ತ ವಿಷ್ಣುವಿನ ವಿಶೇಷ ಅನುಗ್ರಹವೂ ಸಿಗಲಿದೆ. ಜೀವನ ಸಂತೋಷ ಮತ್ತು ಶಾಂತಿಯಿಂದ ಕೂಡಿರುತ್ತದೆ. ಆದರೆ ಜಾತಕದಲ್ಲಿ ಗುರು ಹಾಗೂ ಶುಕ್ರ ದುರ್ಬಲವಾಗಿದ್ದರೆ ರಾಶಿಗಳ ಮೇಲೆ ಅಶುಭ ಪರಿಣಾಮ ಬೀರಲಿದೆ. ಹಾಗಾದರೆ ಗುರು ಶುಕ್ರನಿಂದ ಉಂಟಾದ ಪರಿವರ್ತನ ಯೋಗ ಯಾವ ರಾಶಿಗೆ ಮಂಗಳಕರವಾಗಿದೆ ಎಂದು ತಿಳಿಯೋಣ.

ನ. 7ರಂದು ಪರಿವರ್ತನ ಯೋಗ

ಕನ್ಯಾ ರಾಶಿ: ಕನ್ಯಾ ರಾಶಿಯವರಿಗೆ ಪರಿವರ್ತನ ಯೋಗ ಶುಭಕರವಾಗಿರುತ್ತದೆ. ಉದ್ಯೋಗ ಮಾಡುವವರು ಅಧಿಕಾರಿಗಳಿಂದ ಮೆಚ್ಚುಗೆ ಪಡೆಯುವರು. ಅವಿವಾಹಿತರಿಗೆ ಒಳ್ಳೆಯ ಮದುವೆ ಸಂಬಂಧ ಬರಬಹುದು. ಈ ಕಾರಣದಿಂದಾಗಿ ಎಲ್ಲಾ ಕುಟುಂಬ ಸದಸ್ಯರು ತುಂಬಾ ಸಂತೋಷದಿಂದ ಇರುತ್ತಾರೆ. ಕನ್ಯಾ ರಾಶಿಯ ಜನರು ಅದೃಷ್ಟಲಕ್ಷ್ಮೀಯ ಆಶೀರ್ವಾದವನ್ನು ಪಡೆಯುತ್ತಾರೆ. ಹಣದ ಕಾರಣ ಮುಗಿಯದ ಕಾರ್ಯಗಳು ಪೂರ್ಣಗೊಳ್ಳುವುದನ್ನು ನೀವು ಕಾಣಬಹುದು. ಪ್ರೇಮ ಜೀವನದಲ್ಲಿ ನಡೆಯುತ್ತಿರುವ ತಪ್ಪುಗ್ರಹಿಕೆಗಳು ಬಗೆಹರಿಯುತ್ತವೆ.

ಹೂಡಿಕೆಯಲ್ಲಿ ಲಾಭ ಸಿಗಲಿದೆ. ವ್ಯಾಪಾರ ಮಾಡುವವರು ಲಾಭವನ್ನು ಪಡೆಯುತ್ತಾರೆ.

ತುಲಾ ರಾಶಿ: ತುಲಾ ರಾಶಿಯವರಿಗೆ ಪರಿವರ್ತನ ಯೋಗದಿಂದ ಸಾಕಷ್ಟು ಪ್ರಯೋಜನವಿದೆ. ನಿಮ್ಮ ಕೆಲಸದ ಸಾಮರ್ಥ್ಯವು ಅಭಿವೃದ್ಧಿಗೊಳ್ಳುತ್ತದೆ. ಇದರಿಂದಾಗಿ ನೀವು ಹೆಚ್ಚು ಸೃಜನಶೀಲರಾಗಿರುತ್ತೀರಿ. ಮಕ್ಕಳ ಪ್ರಗತಿ ಸಂತೋಷ ತರಲಿದೆ. ಸಮಾಜದಲ್ಲಿ ನಿಮ್ಮ ಗೌರವವೂ ಹೆಚ್ಚುತ್ತದೆ. ವಿದ್ಯಾರ್ಥಿಗಳು ಬಹಳ ಸಮಯದ ನಂತರ ಉತ್ತಮ ಫಲಿತಾಂಶಗಳನ್ನು ಪಡೆಯುತ್ತಾರೆ. ಕುಟುಂಬ ಸದಸ್ಯರಲ್ಲಿ ಪರಸ್ಪರ ಪ್ರೀತಿ ಇರುತ್ತದೆ.

ತುಲಾ ರಾಶಿಯ ಜನರು ಹಳೆಯ ರೋಗಗಳಿಂದ ಮುಕ್ತರಾಗುತ್ತಾರೆ. ನಿಮ್ಮ ಮನಸ್ಸು ಉಲ್ಲಾಸದಿಂದ ಕೂಡಿರುತ್ತದೆ. ಮಹಾವಿಷ್ಣುವಿನ ಕೃಪೆಯಿಂದ ಹಣ ಸಂಪಾದನೆಯ ಹೊಸ ಮಾರ್ಗಗಳು ಕಂಡುಕೊಳ್ಳುವಿರಿ. ಇದರಿಂದ ಆರ್ಥಿಕ ಸ್ಥಿತಿ ಸುಧಾರಿಸಲಿದೆ. ನೀವು ಯಾವುದೇ ಭೂಮಿ ಮತ್ತು ಆಸ್ತಿಯಲ್ಲಿ ಹೂಡಿಕೆ ಮಾಡಲು ಬಯಸಿದರೆ ಲಾಭ ಖಚಿತ.

ಧನು ರಾಶಿ: ಧನು ರಾಶಿಯವರಿಗೆ ಪರಿವರ್ತನ ಯೋಗ ಬಹಳ ವಿಶೇಷವಾಗಿದೆ. ನ್ಯಾಯಾಲಯದ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರೆ ನೀವು ವಿಷ್ಣುವಿನ ಕೃಪೆಯಿಂದ ಪರಿಹಾರವನ್ನು ಪಡೆಯುತ್ತೀರಿ. ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು, ನೀವು ಯಾವುದಾದರೂ ಒಳ್ಳೆಯ ಸ್ಥಳದಲ್ಲಿ ಹೂಡಿಕೆ ಮಾಡಬಹುದು. ಉದ್ಯೋಗ ಮತ್ತು ವ್ಯಾಪಾರ ಮಾಡುವವರು ಲಾಭವನ್ನು ಪಡೆಯುತ್ತಾರೆ.

ಕೆಲಸದ ಸ್ಥಳದಲ್ಲಿ ನಿಮ್ಮ ಕೆಲಸವನ್ನು ಪ್ರಶಂಸಿಸಲಾಗುತ್ತದೆ. ಧನು ರಾಶಿಯ ಜನರು ತಮ್ಮ ಕೆಲಸದಲ್ಲಿ ನಡೆಯುತ್ತಿರುವ ತೊಂದರೆಗಳು ಮತ್ತು ಸಮಸ್ಯೆಗಳಿಂದ ಪರಿಹಾರವನ್ನು ಪಡೆಯುತ್ತಾರೆ. ನಿಮ್ಮ ಸಂಗಾತಿಯೊಂದಿಗೆ ಪ್ರೀತಿಯ ಮಾತುಕತೆಗಳನ್ನು ಆಡುವಿರಿ.

ಮೀನ ರಾಶಿ: ಮೀನ ರಾಶಿಯವರಿಗೆ ಈ ದಿನ ಪ್ರಯೋಜನಕಾರಿಯಾಗಲಿದೆ. ಮೀನ ರಾಶಿಯವರು ತಮ್ಮ ಕೆಲಸದ ಜೊತೆಗೆ ತಮ್ಮ ಕುಟುಂಬದ ಸದಸ್ಯರೊಂದಿಗೆ ಗುಣಮಟ್ಟದ ಸಮಯವನ್ನು ಕಳೆಯುತ್ತಾರೆ.

ಪ್ರೀತಿಯಲ್ಲಿ ಇರುವವರಿಗೆ ಮದುವೆಗೆ ಸಮಯವು ಅನುಕೂಲಕರವಾಗಿರುತ್ತದೆ. ನೀವು ಯಾರನ್ನಾದರೂ ಇಷ್ಟಪಟ್ಟರೆ, ಅವರೊಂದಿಗೆ ಮತ್ತು ಅವರ ಕುಟುಂಬದೊಂದಿಗೆ ಮಾತನಾಡಲು ಸಮಯ ಸೂಕ್ತವಾಗಿದೆ. ವ್ಯಾಪಾರ ಮಾಡುವವರು ವ್ಯವಹಾರವನ್ನು ವಿಸ್ತರಿಸುತ್ತಾರೆ.

ಉದ್ಯೋಗದಲ್ಲಿರುವವರು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಲು, ಉನ್ನತ ಮಟ್ಟದಲ್ಲಿ ಸಾಧನೆ ಮಾಡಲು ಅವಕಾಶವನ್ನು ಪಡೆಯುತ್ತಾರೆ.

ಮೇಷ ರಾಶಿ

ಮೇಷ ರಾಶಿಯವರಿಗೆ ಪರಿವರ್ತನ ಯೋಗ ಜೀವನದಲ್ಲಿ ಹೊಸ ಪರಿವರ್ತನೆಯನ್ನು ತರಲಿದೆ. ಮಹಾವಿಷ್ಣುವಿನ ಕೃಪೆಯಿಂದ ಮೇಷ ರಾಶಿಯವರ ಹಲವಾರು ಆಸೆಗಳು ನೆರವೇರುತ್ತವೆ. ತಾಳ್ಮೆಯಿಂದ ಯಾವುದೇ ಕೆಲಸ ಮಾಡಿದರೂ ಅದರಲ್ಲಿ ಯಶಸ್ಸು ಖಂಡಿತ ಸಿಗುತ್ತದೆ. ವ್ಯಾಪಾರದಲ್ಲಿ ಪ್ರಯಾಣ ಹೆಚ್ಚಾಗಲಿದೆ. ಶಿಕ್ಷಣ ಅಥವಾ ಉದ್ಯೋಗ ಕ್ಕಾಗಿ ವಿದೇಶಕ್ಕೆ ಹೋಗಲು ಬಯಸುವ ಈ ರಾಶಿಚಕ್ರದ ಜನರು ಒಳ್ಳೆಯ ಸುದ್ದಿ ಪಡೆಯಬಹುದು. ವೃತ್ತಿಜೀವನದಲ್ಲಿ ಅತ್ಯುತ್ತಮ ಅವಕಾಶಗಳು ನಿಮ್ಮ ಮುಂದೆ ಬರಲಿದೆ. ಇದು ಸಂಬಳವನ್ನು ಹೆಚ್ಚಿಸುವುದು ಮಾತ್ರವಲ್ಲದೆ ನಿಮ್ಮ ಪ್ರಭಾವವೂ ಹೆಚ್ಚಿಸುತ್ತದೆ.

ಭಾರತರತ್ನ ಹಾಗೂ ನೊಬೆಲ್ ಪ್ರಶಸ್ತಿ ಪುರಸ್ಕೃತರು

ಸರ್ ಸಿ ವಿ ರಾಮನ್ ರವರ 136ನೇ ವರ್ಷದ ಜನ್ಮಜಯಂತಿ

ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

• ಉದಯವಾಹಿನಿ, ವಿಶೇಷ

ವಿಶ್ವಪ್ರಸಿದ್ಧ ಭೌತವಿಜ್ಞಾನಿ ಸರ್ ಸಿವಿ ರಾಮನ್ ರವರು 1888 ನವಂಬರ್ 7 ರಂದು ಜನಿಸಿ,ತಂದೆ ತಾಯಿಗಳಿಂದ ಉತ್ತಮ ಸಂಸ್ಕಾರ,ಶಿಸ್ತು,ಸನ್ಮಾರ್ಗ ಜೊತೆಗೆ ಗುರುಹಿರಿಯರಿಂದ ಉತ್ತಮ ಗುಣಮಟ್ಟದ ಶಿಕ್ಷಣ ಪಡೆದು, ಒಳ್ಳೆಯ ವಾತಾವರಣ ಮತ್ತು ಉತ್ತಮ ಪರಿಸರದಲ್ಲಿ ಬೆಳೆದು ಜಗತ್ತಿನ ವಿಜ್ಞಾನ ಕ್ಷೇತ್ರದಲ್ಲಿ ವಿಸ್ಮಯ ಮೂಡಿಸಿದರು.

ಭೌತಶಾಸ್ತ್ರದ ಪ್ರಾಧ್ಯಾಪಕರಾಗಿ ವಿಜ್ಞಾನ ವಿಷಯಗಳ ಬಗ್ಗೆ ವೈಜ್ಞಾನಿಕ ಸಂಶೋಧನೆಗಳನ್ನು ನಡೆಸುತ್ತಾ ಬೆಳಕು ಮತ್ತು ಕ್ಷಕಿರಣಗಳನ್ನು ಕುರಿತು ಹೆಚ್ಚಿನ ಸಂಶೋಧನೆ ನಡೆಸಿದರು.ಇವರ ಅನನ್ಯವಾದ ವೈಜ್ಞಾನಿಕ ಸಂಶೋಧನೆಗಳಿಗೆ ವಿಶ್ವಮಾನ್ಯತೆ ಪಡೆದು ಭೌತಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ದೊರೆಯಿತು. ನಂತರ ಭಾರತೀಯ ವಿಜ್ಞಾನ ಸಂಸ್ಥೆಗೆ ನಿರ್ದೇಶಕರಾಗಿ ನೇಮಕವಾದರು.

ಭೌತಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಮಹತ್ವ ಪೂರ್ಣ ಕೃತಿಗಳನ್ನು ಬರೆದರು. ಬೆಂಗಳೂರಿನಲ್ಲಿ ರಾಮನ್ ಸಂಶೋ ಧನಾ ಸಂಸ್ಥೆಯನ್ನು ಸ್ಥಾಪಿಸಿದರು. ಅನೇಕ ಪ್ರತಿಷ್ಠಿತ ಪ್ರಶಸ್ತಿಗಳೊಂದಿಗೆ ಭಾರತ ಸರ್ಕಾರವೂ ಕೂಡ ಭಾರತರತ್ನ ಪ್ರಶಸ್ತಿ ನೀಡಿ ಗೌರವಿಸಿತು. ಇವರು ವಿಜ್ಞಾನ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರ ಹಾಗೂ ಒಂದು ಮೈಲಿಗಲ್ಲು. ಸರ್ ಸಿ ವಿ ರಾಮನ್ ಅವರು 1970 ನವಂಬರ್ 21 ರಂದು ಇಹಲೋಕ ಯಾತ್ರೆ ಮುಗಿಸಿದರು. ಆದರೆ ಜಗತ್ತಿನ ವಿಜ್ಞಾನ ಕ್ಷೇತ್ರದಲ್ಲಿ ಅಮರರಾದರು ಅದರಲ್ಲೂ ಯುವ ವಿಜ್ಞಾನಿಗಳಿಗೆ ಸ್ಫೂರ್ತಿದಾಯಕರಾದರು.

ಇಂತಹ ಮಹನೀಯರನ್ನು ಸ್ಮರಿಸಿ, ನೆನೆದು ಅವರ ಆತ್ಮಕ್ಕೆ ಶಾಂತಿ ಕೋರುತ್ತಾ ಇಂದು ಅವರ 136 ನೇ ವರ್ಷದ ಜನ್ಮದಿನವನ್ನು ಆಚರಿಸುವುದು ನಮ್ಮ-ನಿಮ್ಮೆಲ್ಲರ ಹಾಗೂ ಅದರಲ್ಲೂ ವಿಜ್ಞಾನ ಕ್ಷೇತ್ರದಲ್ಲಿ ಇರುವವರ ಆದ್ಯ ಕರ್ತವ್ಯ, ಜವಾಬ್ದಾರಿ ಹಾಗೂ ಹೊಣೆಗಾರಿಕೆ.

ಮುಂದಿನ 4 ದಿನ ಗುಡುಗು ಸಹಿತ ಭಾರೀ ಮಳೆ ಮುನ್ಸೂಚನೆ

• ಉದಯವಾಹಿನಿ, ಬೆಂಗಳೂರು

ಈಗಾಗಲೇ ದೇಶಾದ್ಯಂತ ಮುಂಗಾರು ಮಳೆ ಆರ್ಭಟಿಸಿ ದೊಡ್ಡ ದೊಡ್ಡ ಅವಾಂತರಗಳನ್ನೇ ಸೃಷ್ಟಿಸಿದೆ. ಕೆಲವು ದಿನಗಳ ಬಳಿಕ ಮತ್ತೆ ಮಳೆ ಚುರುಕು ಪಡೆದು, ಮತ್ತೆ ಇದೀಗ ತಗ್ಗಿದೆ. ಇನ್ನು ಮುಂದಿನ 4 ದಿನಗಳ ಕಾಲ ಈ ಭಾಗಗಳಲ್ಲಿ ಗುಡುಗು ಸಹಿತ ಭಾರೀ ಮಳೆ ಸುರಿಯಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಭಾರತದ ಹಲವು ರಾಜ್ಯಗಳಲ್ಲಿ ಮಳೆ ಸುರಿಯಲಿದೆ. ಮತ್ತೊಂದೆಡೆ ಪೂರ್ವ ಉತ್ತರ ಪ್ರದೇಶದಲ್ಲಿ ಮೋಡ ಕವಿದ ವಾತಾವರಣ ಇರಲಿದೆ ಎಂದು ಮುನ್ಸೂಚನೆ ನೀಡಿದೆ. ಅಲ್ಲದೆ, ರಾಷ್ಟ್ರದಾದ್ಯಂತ ಗಾಳಿಯ ಗುಣಮಟ್ಟ ಕಳಪೆ ಮಟ್ಟಕ್ಕೆ ತಲುಪುವ ಸಾಧ್ಯತೆಯಿದೆ ಅಂತಲೂ ತಿಳಿಸಿದೆ.

ನವೆಂಬರ್ 7ರಂದು ಈಶಾನ್ಯ ಭಾರತದ ದಕ್ಷಿಣ ಭಾಗದಲ್ಲಿ ಅಲ್ಲಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಪೂರ್ವ ಉತ್ತರ ಪ್ರದೇಶದಲ್ಲಿ ಬೆಳಗಿನ ಸಮಯದಲ್ಲಿ ಮಂಜು ಕವಿದ ವಾತಾವರಣ ನಿರ್ಮಾಣವಾಗುವ ಸಾಧ್ಯತೆಯಿದೆ ಎಂದು ತಿಳಿಸಿದೆ. ಇನಗನು ಚಂಡಮಾರುತದ ಪರಿಚಲನೆಯು ಪ್ರಸ್ತುತ ಆಗ್ನೇಯ ಬಂಗಾಳ ಕೊಲ್ಲಿಯಲ್ಲಿ ನೆಲೆಗೊಂಡಿದೆ. ಈ ಹಿನ್ನೆಲೆ ದಕ್ಷಿಣ ತಮಿಳುನಾಡಿಗೆ ಮಳೆಯಾಗುವ ಸಾಧ್ಯತೆ ಹೆಚ್ಚಿದೆ ಎಂದು ಎಚ್ಚರಿಕೆ ಸಂದೇಶವನ್ನು ರವಾನಿಸಿದೆ. ನವೆಂಬರ್ 5ರಿಂದ 6ರ ವರೆಗೆ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಪ್ರತ್ಯೇಕವಾದ ಅಲ್ಲಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದೆ. ನವೆಂಬರ್ 8 ಮತ್ತು 10ರ ವರೆಗೆ ತಮಿಳುನಾಡು, ಪುದುಚೇರಿ ಮತ್ತು ಕಾರೈಕಲ್, ಕೇರಳ ಮತ್ತು ಮಾಹೆ, ಕರ್ನಾಟಕದ ದಕ್ಷಿಣ ಒಳನಾಡಿನಲ್ಲಿ ಅಲ್ಲಲ್ಲಿ ಪ್ರತ್ಯೇಕವಾದ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಿದೆ.

ಉದಯವಾಹಿನಿ ಚಿತ್ರ

ಸಾಮಾಜಿಕ ಕಳಕಳಿ
ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ

• ಉದಯವಾಹಿನಿ, ವಿಶೇಷ

ನೋವಿನಲು ನಗುವಿಹುದು ಹೇಳಲದು ಆಗದದು
ಮಾವಿನಲಿ ಹುಳಿಯಂತೆ ರುಚಿಯಿರಲದು
ಸಾವಿನದೆ ನೆನಪದುವೆ ಬಯಸದಲೆ ಬರುತಿರಲು
ಕಾವನಲಿ ಇರುವಂತೆ ಲಕ್

ಕಾರ್ಕಳ ತಾಲ್ಲೂಕಿನಲ್ಲಿ ಮೃತಪಟ್ಟವರ ಹೆಸರಲ್ಲಿದೆ ಸಾವಿರಾರು ಎಕರೆ ಆಸ್ತಿ

ಕೆಲವೊಂದು ವಿದ್ಯಮಾನಗಳಲ್ಲಿ ಆಸ್ತಿಯ ಮಾಲೀಕತ್ವವನ್ನು ವರ್ಗಾವಣೆ ಮಾಡಿಸಿಕೊಳ್ಳುವಲ್ಲಿ ಉದಾಸೀನ ಭಾವ

• ಉದಯವಾಹಿನಿ, ಕಾರ್ಕಳ


ಉದಯವಾಹಿನಿ ಚಿತ್ರ

ತಂದೆ-ತಾಯಿಯ ನಿಧನದ ಅನಂತರ ಅವರ ಜಮೀನನ್ನು ಮಕ್ಕಳ ಹೆಸರಿಗೆ ವರ್ಗಾವಣೆ ಮಾಡಿಸಿಕೊಳ್ಳುವುದು ಸಾಮಾನ್ಯ ಪ್ರಕ್ರಿಯೆ. ಕೆಲವೊಂದು ಕುಟುಂಬಗಳಲ್ಲಿ ಮೊದಲೇ ಆಸ್ತಿ ವಿಭಜನೆ ಆಗಿರಲೂ ಬಹುದು. ಆದರೆ, ಕೆಲವೊಂದು ವಿದ್ಯಮಾನಗಳಲ್ಲಿ ಆಸ್ತಿಯ ಮಾಲೀಕತ್ವವನ್ನು ವರ್ಗಾವಣೆ ಮಾಡಿಸಿಕೊಳ್ಳುವಲ್ಲಿ ಉದಾಸೀನ ಭಾವ ತೋರಲಾಗುತ್ತದೆ.

ಮುಂದೆ ಮಾಡಿಸಿಕೊಡರಾಯಿತು ಎಂಬ ಈ ನಿರ್ಲಕ್ಷ್ಯದಿಂದ ಮುಂದೆ ದೊಡ್ಡ ಸಮಸ್ಯೆಗಳು ಎದುರಾಗುತ್ತವೆ. ಎಲ್ಲಾ ಕಡೆಗಳಲ್ಲಿಯೂ ಸಮಸ್ಯೆ ದೊಡ್ಡ ಮಟ್ಟದಲ್ಲಿದೆ. ದಾಖಲೆಗಳನ್ನು ಹುಡುಕ ಹೊರಟರೆ ಅದರ ಮೂಲ ಹಿರಿಯರ ಹೆಸರಲ್ಲೇ ಇರು ವುದು ಕಂಡುಬರುತ್ತದೆ. ವರ್ಷಗಳು ಕಳೆದಂತೆ ಈ ಆಸ್ತಿ ವರ್ಗಾವಣೆ ಪ್ರಕ್ರಿಯೆ ಸಂಕೀರ್ಣವಾಗುತ್ತಾ ಹೋಗುತ್ತದೆ. ಕಾರ್ಕಳ ತಾಲ್ಲೂಕಿನಲ್ಲೂ ಈ ಸಮಸ್ಯೆ ತೀವ್ರವಾಗಿದೆ. ಕಾರ್ಕಳ ತಾಲ್ಲೂಕು ಒಂದರಲ್ಲಿಯೇ ಸಾವಿರಾರು ಎಕ್ರೆ ಆಸ್ತಿ ಮೃತಪಟ್ಟವರ ಹೆಸರಲ್ಲಿದೆ. ಈ ಸಮಸ್ಯೆಯನ್ನು ಸರಿಪಡಿಸಲು ಹತ್ತಾರು ದಾಖಲೆ, ಹಲವು ಇಲಾಖೆಗಳ ಮೆಟ್ಟಲು ಹತ್ತಬೇಕಾದ ಪರಿಸ್ಥಿತಿ ಇದೆ. ಈ ನಿಟ್ಟಿನಲ್ಲಿ ಕಂದಾಯ ಇಲಾಖೆಯು ಜನ ಸಮಾನ್ಯರಿಗೆ ಒಂದೆ ವೇದಿಕೆಯಡಿ ಪ್ರಕ್ರಿಯೆ ಸರಳಗೊಳಿಸುವ ಉದ್ದೇಶದಿಂದ ಪೌತಿ ಖಾತೆ ಆಂದೋಲನ ಹಮ್ಮಿಕೊಂಡಿದೆ. ಕಾರ್ಕಳ ತಾಲ್ಲೂಕಿನಲ್ಲಿ ನವೆಂಬರ್ 11ರಂದು ಪೌತಿ ಖಾತೆ ಆಂದೋಲನ ನಡೆಯಲಿದೆ. ಮರಣ ಹೊಂದಿದ ವ್ಯಕ್ತಿ ಹೆಸರಿನಲ್ಲಿರುವ ಆಸ್ತಿ ಯನ್ನು ತಮ್ಮ ವಾರಸುದಾರರ ಅಥವಾ ಕುಟುಂಬಸ್ಥರ ಹೆಸರಿಗೆ ಖಾತೆ ವರ್ಗಾವಣೆ ಮಾಡು ವುದು 'ಪೌತಿ ಖಾತೆ' ಎನ್ನಲಾಗುತ್ತದೆ. ಜಮೀನು ಮಾಲಕ ನಿಧನ ಹೊಂದಿದ ಅನಂತರ ಸರಕಾರದ ಸೂಚಿಸಿರುವ ಮೂಲ ಗಳ ಪ್ರಕಾರ ಮರಣ ಹೊಂದಿದ ಮಾಲಕ ಪ್ರಮಾಣ ಪತ್ರ ಮತ್ತು ವಂಶವೃಕ್ಷ ಪಡೆದು ನಮೂನೆ-1 ರಲ್ಲಿ ಅರ್ಜಿ ಸಲ್ಲಿಸಬೇಕು. ಪೌತಿ ಖಾತೆ ಮಾಡಿಕೊಳ್ಳಲು ಅರ್ಜಿ ನಮೂನೆ-1 ಅರ್ಜಿ ನಾಡಕಚೇರಿಗಳಲ್ಲಿ ಸಿಗುತ್ತದೆ. ವಂಶ ವೃಕ್ಷ ಇಲ್ಲದಿದ್ದರೆ ಅರ್ಜಿದಾರರು ಕುಟುಂಬದ ಮಾಹಿತಿ ನೋಟರಿ ಮಾಡಿ ಅಟಲ್ ಜನಸ್ನೇಹಿ ಕೇಂದ್ರದಲ್ಲಿ ದಾಖಲಿಸಬಹುದು. ಉದಾಹರಣೆಗೆ, ಒಂದು ಕುಟುಂಬದಲ್ಲಿ ಮೂರ್ನಾಲ್ಕು ಮಕ್ಕಳಿದ್ದರೆ ಯಾರ ಹೆಸರಿನ ಮೇಲೆ ಎಷ್ಟು ಜಮೀನು ವರ್ಗಾವಣೆ ಮಾಡಬೇಕೆಂಬ ವಿವರ ಅರ್ಜಿಯಲ್ಲಿರಬೇಕು.

ಜಮೀನು ದಾಖಲೆಗಳಲ್ಲಿ ಹೆಸರು, ಹಿಸ್ಸಾ ನಂಬರ್ ತಪ್ಪಾಗಿದ್ದರೆ ಅರ್ಜಿ ಸಲ್ಲಿಸಿ ಸರಿಪಡಿಸಿಕೊಳ್ಳಬಹುದು.

ಆಸ್ತಿಯ ಮೂಲ ಮಾಲಕರ ಮರಣ ಪ್ರಮಾಣ ಪತ್ರ ಇಲ್ಲದೇ ಜಮೀನಿನ ಖಾತೆ ವರ್ಗಾವಣೆ ಆಗುವುದಿಲ್ಲ, ಪೂರ್ವಿಕರ ಮರಣ ಪ್ರಮಾಣ ಪತ್ರಗಳು ಸಿಗದೆ ಆಸ್ತಿ ವರ್ಗಾವಣೆ ಮಾಡಿಕೊಂಡಿಲ್ಲ ಎಂದು ಕೆಲವರು ಅಸಹಾಯಕತೆ ವ್ಯಕ್ತಪಡಿಸುತ್ತಾರೆ. ನಿಯಮದ ಪ್ರಕಾರ ಗ್ರಾಮಗಳಲ್ಲಿ ವ್ಯಕ್ತಿ ನಿಧನರಾದ 28 ದಿನದೊಳಗೆ ಸಂಬಂಧಪಟ್ಟ ಗ್ರಾಮ ಲೆಕ್ಕಿಗರೇ ಮರಣ ಪ್ರಮಾಣ ಪತ್ರ ನೀಡಬೇಕು.

ಒಂದು ವರ್ಷದೊಳಗಿದ್ದರೆ ತಹಶೀಲ್ದಾರ್ ನೀಡಬಹುದು. ಒಂದು ವರ್ಷ ಮೇಲ್ಪಟ್ಟ ಪ್ರಕರಣಗಳಿದ್ದರೆ ಜೆಎಂಎಫ್ ನ್ಯಾಯಾಲಯದ ಮೂಲಕ ದಾವೆ ಹೂಡಿ ಮರಣ ಪ್ರಮಾಣ ಪತ್ರ ಪಡೆದು ಪೌತಿ ಖಾತೆಗೆ ಅರ್ಜಿ ಸಲ್ಲಿಸಬೇಕು.

ಮೂರ್ನಾಲ್ಕು ಹೆಸರಿರುವ ಸಾಧ್ಯತೆ

ಬಹಳಷ್ಟು ರೈತರು ಪಿತ್ರಾರ್ಜಿತ ಆಸ್ತಿಯನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಂಡಿಲ್ಲ ಎಂಬುದು ಇತ್ತೀಚೆಗೆ ಸರಕಾರ ನಡೆಸಿದ ಆಧಾರ್ ಸೀಡಿಂಗ್ ಪರಿಶೀಲನೆ ವೇಳೆ ಕಂದಾಯ ಇಲಾಖೆ ಪತ್ತೆ ಮಾಡಿದೆ. ಕಾರ್ಕಳ ತಾಲ್ಲೂಕು ವ್ಯಾಪ್ತಿಯಲ್ಲಿ 53,783 ಖಾತೆಗಳು ಮೃತರ ಹೆಸರಿನಲ್ಲೇ ಇವೆ. ಇದರಲ್ಲಿ ಒಂದು ಆರ್‌ಟಿಸಿಯಲ್ಲಿ ಒಬ್ಬರ ಹೆಸರು ಇದ್ದರೂ ಇರಬಹುದು, ಮೂರ್ನಾಲ್ಕು ಹೆಸರಿರುವ ಸಾಧ್ಯತೆಯೂ ಇದೆ.

> ತಾಲ್ಲೂಕಿಗೆ ಸಂಬಂಧಿಸಿದ ಮರಣ ಹೊಂದಿದ ಖಾತದಾರರ ಹೆಸರಿನ ಪಹಣಿಗಳ ಪೌತಿ ಖಾತೆಯ ಬಗ್ಗೆ ಸ್ಥಳದಲ್ಲೆ ಇತ್ಯರ್ಥಪಡಿಸಲು ನ. 11ರಂದು ಕಾರ್ಕಳ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆಗೆ ಕುಂದಾಪುರ ಸಹಾಯಕ ಆಯುಕ್ತರ ಅಧ್ಯಕ್ಷತೆಯಲ್ಲಿ ಪೌತಿ ಖಾತೆ ಆಂದೋಲನ ನಡೆಯಲಿದೆ. ಬಹುತೇಕರು ಅನುಭವಿಸುತ್ತಿರುವ ಕಿರಿಕಿರಿ ತಪ್ಪಿಸಲು ಆಂದೋಲನ ಹಮ್ಮಿಕೊಳ್ಳಲಾಗಿದೆ
> -ಡಾ. ಪ್ರತಿಭಾ ಆರ್.
> ತಹಶೀಲ್ದಾರ್, ಕಾರ್ಕಳ

> ಮುಂದೆ ಹೊಸ ಕಾನೂನು, ಭೂ ದಾಖಲೆ ನಿಯಮಾವಳಿಗಳು ಬಂದು ಕಚೇರಿಗಳಿಗೆ ಅಲೆದಾಡಬೇಕಾಗುತ್ತದೆ. ಹಾಗಾಗಿ ಆಸ್ತಿಯನ್ನು ಪೌತಿ ಖಾತೆಯಡಿ ಬದಲಾವಣೆ ಮಾಡಿಕೊಳ್ಳಲು ಮುತುವರ್ಜಿ ವಹಿಸಬೇಕಿದೆ
> -ಕಂದಾಯ ಇಲಾಖೆ ಅಧಿಕಾರಿಗಳು

ಚೇಂಗಟಾ ಗ್ರಾಪಂ.ಗೆ ಅಕ್ರಂ ಇನಾಂದಾರ ಅಧ್ಯಕ್ಷರಾಗಿ ಅವಿರೋಧ ಆಯ್ಕೆ

• ಉದಯವಾಹಿನಿ, ಚಿಂಚೋಳಿ


ಉದಯವಾಹಿನಿ ಚಿತ್ರ

ವಿಧಾನಸಭಾ ಮತಕ್ಷೇತ್ರದ ಚೇಂಗಟಾ ಗ್ರಾಮ ಪಂಚಾಯತ್ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆಯು ಸೋಮವಾರ ಜರುಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಒಂದೊಂದು ನಾಮಪತ್ರ ಸಲ್ಲಿಕೆ ಆಗಿರುವುದರಿಂದ ಅಧ್ಯಕ್ಷರಾಗಿ ಅಕ್ರಂ ಇನಾಂದಾರ ಮತ್ತು ಉಪಾಧ್ಯಕ್ಷರಾಗಿ ಅವಮ್ಮ ರಮೇಶ ಕಾಂಬಳೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಕಮಲಾಪುರ ತಹಶೀಲ್ದಾರ್ ಮಹ್ಮದ್ ಮೋಸಿನ್ ಘೋಷಣೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಚುನಾವಣೆ ಪ್ರಕ್ರಿಯೆ ಮುಗಿದ ನಂತರ ಅಧ್ಯಕ್ಷ ಉಪಾಧ್ಯಕ್ಷರ ಬೆಂಬಲಿಗರು ಪಕ್ಷದ ಮುಖಂಡರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ನೂತನ ಗ್ರಾಪಂ ಅಧ್ಯಕ್ಷ ಅಕ್ರಮ್ ಇನಾಂದಾರ ಅವರು, ಚೇಂಗಟಾ, ದುತ್ತರಗಾ, ಪಂಗರಗಾ ಎರಡು ತಾಂಡಾಗಳು ಸೇರಿದಂತೆ 19 ಸದಸ್ಯರು ಇದ್ದು ನನ್ನ ಮೇಲೆ ಎಲ್ಲಾ ಸದಸ್ಯರು ವಿಶ್ವಾಸವಿಟ್ಟು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಿದ್ದು ಅತ್ಯಂತ ಸಂತೋಷ ತಂದಿದೆ ಬರುವ ದಿನಗಳಲ್ಲಿ ಚೇಂಗಟಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ಸಮಸ್ಯೆಗಳು ಮೂಲ ಭೂತ ಸೌಕರ್ಯಗಳು ಪರಿಹರಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ.

ಯಾವುದೇ ಜಾತಿ ಧರ್ಮ ಪಕ್ಷಬೇಧ ಮರೆತು ಎಲ್ಲಾ ಸದಸ್ಯರ ವಾರ್ಡ್ ಗಳು ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ, ಪಂಚಾಯಿತಿ ಅಭಿವೃದ್ಧಿಯೇ ನನ್ನ ಮೂಲಮಂತ್ರವಾಗಿದ್ದು ನಿಷ್ಠೆಯಿಂದ ಕೆಲಸ ಮಾಡುತ್ತೇನೆ ಎಂದರು.

ಈ ಸಂದರ್ಭದಲ್ಲಿ ಕಾಂಗ್ರೇಸ್ ಮುಖಂಡ ಕಮಲಾಪುರ ಗ್ರಾಪಂ.ಮಾಜಿ ಅಧ್ಯಕ್ಷ ಅಬ್ದುಲ್ ಸತ್ತಾರ, ಬಾಬುರಾವ ಭೋವಿ, ಪ್ರಕಾಶ ಭೋವಿ, ರವಿ ಯರನಳ್ಳಿ, ಅಶೋಕ ಜಾಜಿ, ಇಮ್ರಾನ್ ನಾಗೂರ, ಜಫರ್ ಇನಾಂದಾರ, ಇಮಾಮ್ ಸಾಬ ಜೀಲಾನಿಸಾಬ, ರಮೇಶ ಕಾಂಬ್ಳೆ, ಮಸ್ತಾನಸಾಬ ಖಾದಿಮ್, ವಿಶ್ವನಾಥ ಜಾಧವ, ಗುಂಡೆರಾವ ಜಾಧವ, ಮಂಜುನಾಥ್ ಕಾಬಾ, ಪ್ರಲಾದ್, ಮಸ್ತಾನ ಮುಲ್ಲಾ, ರೌಫ್ ಗುಲ್ಬರ್ಗ, ಪಾಷ ಬೇಲೂರ, ಇದ್ದರು.

ಅಪ್ರಾಪ್ತ ವಯಸ್ಕಳ ಜತೆ ಸಂಪರ್ಕ ಮದುವೆಯಾಗುವುದಾಗಿ ಮೋಸ; 20 ವರ್ಷ ಶಿಕ್ಷೆ

• ಉದಯವಾಹಿನಿ, ಕುಂದಾಪುರ

ಸ್ಥಳೀಯ ಠಾಣೆ ವ್ಯಾಪ್ತಿಯ ಅಪ್ರಾಪ್ತ ವಯಸ್ಕಳನ್ನು ಮದುವೆಯಾಗುವುದಾಗಿ ನಂಬಿಸಿ ದೈಹಿಕ ಸಂಪರ್ಕ ಮಾಡಿ ವಂಚಿಸಿದ ಆರೋಪಿಗೆ ನ್ಯಾಯಾಲಯ 20 ವರ್ಷ ಕಠಿನ ಸಜೆ ನೀಡಿದೆ. 17ರ ಹರೆಯದ ನೊಂದ ಬಾಲಕಿಯನ್ನು ಕಾಲೇಜಿಗೆ ಹೋಗುವಾಗ ಸಂಪರ್ಕಿಸಿದ ಮಿಥುನ್ (21) ಮದುವೆಯಾಗುವುದಾಗಿ ನಂಬಿಸಿ ಮನೆಗೆ ಕರೆದೊಯ್ದು ಆಕೆಯ ಇಚ್ಛೆಗೆ ವಿರುದ್ಧವಾಗಿ ದೈಹಿಕ ಸಂಪರ್ಕ ನಡೆಸಿದ್ದ. ಬಾಲಕಿಯ ಆರೋಗ್ಯದಲ್ಲಿ ಏರುಪೇರಾಗಿ ಆಸ್ಪತ್ರೆಗೆ ಕರೆದೊಯ್ದಾಗ ಗರ್ಭಿಣಿ ಎಂದು ಗೊತ್ತಾಗಿತ್ತು. ಆಕೆಯ ತಂದೆ ನೀಡಿದ್ದ ದೂರಿನ ಮೇಲೆ ಕುಂದಾಪುರ ಇನ್‌ಸ್ಪೆಕ್ಟರ್ ನಂದಕುಮಾರ್ ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಾಧೀಶ ಶ್ರೀನಿವಾಸ ಸುವರ್ಣ, ಅಭಿಯೋಜನೆ ಪರ ಸಲ್ಲಿಸಿದ 30 ಸಾಕ್ಷಿಗಳ ಪೈಕಿ 16 ಸಾಕ್ಷಿಗಳನ್ನು ವಿಚಾರಿಸಿ, ವಾದ ಆಲಿಸಿ, ಡಿಎನ್‌ಎ ಸಾಕ್ಷ್ಯವನ್ನು ಪರಿಗಣಿಸಿ ಆರೋಪಿ ದೋಷಿ ಎಂದು ತೀರ್ಪು ನೀಡಿದ್ದಾರೆ. ಅಪರಾಧಿಗೆ 20 ವರ್ಷಗಳ ಸಜೆ, 21 ಸಾವಿರ ರೂ. ದಂಡ ವಿಧಿಸಿದ್ದಾರೆ. ದಂಡದ ಮೊತ್ತದಲ್ಲಿ 15 ಸಾವಿರ ರೂ. ಬಾಲಕಿಗೆ, 6 ಸಾವಿರ ರೂ. ಸರಕಾರಕ್ಕೆ ಸಲ್ಲಿಸುವಂತೆಯೂ ನೊಂದ ಬಾಲಕಿಗೆ ಸರಕಾರದಿಂದ 2 ಲಕ್ಷ ರೂ. ನೀಡುವಂತೆಯೂ ಆದೇಶಿಸಿದ್ದಾರೆ. ಸರಕಾರದ ಪರ ವಿಶೇಷ ಸರಕಾರಿ ಅಭಿಯೋಜಕ ವೈ.ಟಿ. ರಾಘವೇಂದ್ರ ವಾದಿಸಿದ್ದರು.

ಸಿಂಧನೂರು ನಗರ ಸಭೆ ದಾಖಲೆ ಅಧಿಕಾರಿಯ ತಂಡ ಪರಿಶೀಲನೆ

• ಉದಯವಾಹಿನಿ, ಸಿಂಧನೂರು

ಉದಯವಾಹಿನಿ ಚಿತ್ರ

ಸ್ಥಳೀಯ ನಗರ ಸಭೆ ಯಲ್ಲಿ ಕಾಮಗಾರಿಗಳು ವಿಚಾರದಲ್ಲಿ ಅಕ್ರಮ ನಡೆಯುತ್ತಿದೆ ಎಂಬುದನ್ನು ಅರಿತು ಮತ್ತು ಸಾರ್ವಜನಿಕರಿಗೆ ಮಾಹಿತಿ ನೀಡಿದ ವಿಚಾರದಲ್ಲಿ ಸಹ ಎಲ್ಲೋ ಒಂದು ಕಡೆ ಕಾಮಗಾರಿಗಳು ಅಕ್ರಮ ದಂಧೆ ನಡೆದಿದೆ ಎನ್ನಲಾಗಿದೆ ಸಾರ್ವಜನಿಕರು ದೂರಿನ ಆದರಿಸಿ ಕೆಲ ಅಧಿಕಾರಿಗಳು ತಂಡ ಸಿಂಧನೂರು ನಗರ ಸಭೆಗೆ ಆಗಮಿಸಿ. ಅಲ್ಲಿರುವ ನಗರ ಸಭೆಯ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ನಡೆಸಲಾಯಿತು.

ಪರಿಶೀಲಿಸಿ ಕೆಲವು ದಾಖಲೆಗಳ ವಶ

ಸ್ಥಳೀಯ ನಗರ ಸಭೆಯಲ್ಲಿ ಕಳೆದ ಮೂರು ವರ್ಷಗಳಿಂದ (ಅಂದಾಜು) ನಗರ ಸಭೆ ಅಧ್ಯಕ್ಷರು ಇಲ್ಲದೆ. ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನಡೆಯಲಿರುವ ಪೌರಾಯುಕ್ತ ಮಂಜುನಾಥ್ ಗುಂಡೂರ ಅವರು ಅವಧಿಯಲ್ಲಿ ಸಿಂಧನೂರು ನಗರ ಸಭೆ ಇತ್ತೀಚೆಗೆ ದಿನಮಾನಗಳಲ್ಲಿ ಅಕ್ರಮ ಕಾಮಗಾರಿಗಳು ನಡೆದಿರಬಹುದು ಎಂಬು ವೇದಾಂತ ಸಾರ್ವಜನಿಕರು ಬಾಯಲ್ಲಿ ಹರಿದಾಡಿತ್ತು.

ಅಕ್ರಮ ದಾಖಲೆಗಳು ನಡೆದಿರಬಹುದು ಎನ್ನುವ ಉದ್ದೇಶ ದಿಂದ ಮತ್ತು ಸಾರ್ವಜನಿಕರು ಮೇಲಾಧಿಕಾರಿಗಳಿಗೆ ದೂರಿನ ನೀಡಿದ್ದಾರೆ.

ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ತಂಡವನ್ನು ನಗರ ಸಭೆಗೆ ಆಗಮಿಸಿ ಕೆಲವು ದಾಖಲೆಗಳನ್ನು ಪರಿಶೀಲಿಸಿ ಕೆಲವು ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ ಎನ್ನಲಾಗಿದೆ.

ಈ ಸಂದರ್ಭದಲ್ಲಿ ಪೌರಾಯುಕ್ತ ಮಂಜು ನಾಥ ಗುಂಡೂರು, ಮನ್ಸೂರ್ ಅಹ್ಮದ್ ಎಇಇ ಅಧಿಕಾರಿ ಮಾಧುರಿ, ಜೆಇ ಶಾಂತಕುಮಾರ್ ಸೇರಿದಂತೆ ಇತರರು ಸಿಬ್ಬಂದಿ ಗಳು ಇದ್ದರು.

ಕನ್ನಡ ಸಾಹಿತ್ಯ ಸಮ್ಮೇಳನವು ಯಶಸ್ವಿಗೊಳಿಸಿ: ಪೂಜ್ಯರು

• ಉದಯವಾಹಿನಿ, ಚಿಂಚೋಳಿ

ಉದಯವಾಹಿನಿ ಚಿತ್ರ

ತಾಲ್ಲೂಕಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ 10ನೇ ತಾಲ್ಲೂಕಾ ಕನ್ನಡ ಸಾಹಿತ್ಯ ಸಮ್ಮೇಳನವು ಇದೆ ನವೆಂಬರ್ 08ರಂದು ಹಮ್ಮಿಕೊಂಡಿದ್ದು ಎಲ್ಲಾ ಕನ್ನಡ ಅಭಿಮಾನಿಗಳು ಸಂಘ ಸಂಸ್ಥೆಗಳು ಕನ್ನಡ ಪರ ಸಂಘಟನೆಗಳು ಸಾಹಿತಿಗಳು ಕವಿಗಳು ಶಿಕ್ಷಕರು ಜನಪ್ರತಿನಿಧಿಗಳು ಎಲ್ಲೋರು ಒಗ್ಗೂಡಿ ಕನ್ನಡ ಸಾಹಿತ್ಯ ಸಮ್ಮೇಳನವು ಯಶಸ್ವಿಗೊಳಿಸಬೇಕು ಎಂದು ನರನಾಳ ಸುಕ್ಷೇತ್ರದ ಪೂಜ್ಯ ಶ್ರೀ ಷ.ಬ್ರ. ಶಿವಕುಮಾರ ಶಿವಾಚಾರ್ಯರು ಕರೆ ನೀಡಿದರು.

ತಾಲ್ಲೂಕಿನ ನರನಾಳದ ಮಠದಲ್ಲಿ ಆಮಂತ್ರಣ ಪತ್ರ ಬಿಡುಗಡೆ ಮಾಡಿ ಮಾತನಾಡಿದ ಅವರು, ಚಿಂಚೋಳಿ ತಾಲ್ಲೂಕಾವು ಆಂದ್ರಪ್ರದೇಶ, ತೆಲಂಗಾಣ ಗಡಿಭಾಗವಾಗಿದ್ದು ಇಲ್ಲಿ ಬಹಳಷ್ಟು ತೆಲುಗು ಭಾಷೆಯ ಪ್ರಭಾವ ಹೆಚ್ಚಿದ್ದು ಕಾರಣ ಕನ್ನಡ ಸಾಹಿತ್ಯ ಸಮ್ಮೇಳನ ಅತ್ಯಂತ ವಿಜೃಂಭಣೆಯಿಂದ ಆಚರಣೆ ಮಾಡಿ ಕನ್ನಡವೇ ನಿತ್ಯ ಕನ್ನಡವೇ ಸತ್ಯ ಕನ್ನಡದ ಹಿರಿಮೆ ಬೆಳೆಸಬೇಕು ಎಂದರು.

> ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಲು ತಾಲ್ಲೂಕಾ ಆಡಳಿತದಿಂದ ಹಿಡಿದು ಕ್ಷೇತ್ರದ ಪ್ರತಿಯೊಬ್ಬರು ಒಗ್ಗಟ್ಟಾಗಿ ಕನ್ನಡದ ಹಿರಿಮೆ ಕನ್ನಡ ನಾಡು ನುಡಿ ಪಸರಿಸುವಂತೆ ಮಾಡಿ ಕನ್ನಡ ಸಾಹಿತ್ಯ ಸಮ್ಮೇಳನವು ಜಾತ್ರೆಯಂತೆ ಮಾಡಬೇಕು ಎಂದರು.

ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಾತನಾಡಿ ಈಗಾಗಲೇ ಕನ್ನಡ ಸಾಹಿತ್ಯ ಸಮ್ಮೇಳ ಕಾರ್ಯಕ್ರಮ ನಡೆಸಲು ಎಲ್ಲಾ ಸಿದ್ಧತೆಕಾರ್ಯಗಳು ಕೈಗೊಳ್ಳಲಾಗಿದ್ದು ಈ ಬಾರಿ ಅತ್ಯಂತ ಅರ್ಥಪೂರ್ಣವಾಗಿ ಆಚರಣೆ ಮಾಡಲು ಸಿದ್ಧತೆ ಮಾಡಿದ್ದು ಪೂಜ್ಯರಾದ ತಾವು ಕಾರ್ಯಕ್ರಮಕ್ಕೆ ತಪ್ಪದೆ ಆಗಮಿಸಬೇಕು ಎಂದರು.

ಪೂಜ್ಯರಿಗೆ ಆಮಂತ್ರಣ ಪತ್ರ ನೀಡಿ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸಂಘ ಸಂಸ್ಥೆಗಳ ಪ್ರತಿನಿಧಿ ಲಕ್ಷ್ಮಣ ಆವುಂಟಿ, ಕಸಾಪ ಪ್ರಧಾನ ಕಾರ್ಯ ದರ್ಶಿ ಶಿವರಾಜ ವಾಲಿ, ಯಲ್ಲಾಲಿಂಗ ದಂಡಿನ್, ಚಾಂದಪಾಷ, ಮಲ್ಲಯ್ಯಸ್ವಾಮಿ, ನಾಗಯ್ಯ, ಸಿದ್ದಯ್ಯಸ್ವಾಮಿ, ರಾಜೇಂದ್ರ ತಾಜಲಾಪೂರ, ಸಂತೋಷ ಪಟರಡ್ಡಿ ಅನೇಕರಿದ್ದರು.

ಉಮೇಶ್ ಕೆ. ಮುದ್ನಾಳ್ ಹೋರಾಟಕ್ಕೆ ಸ್ಪಂದಿಸಿದ ಜಿಲ್ಲಾಡಳಿತ

• ಉದಯವಾಹಿನಿ, ಯಾದಗಿರಿ

ಉದಯವಾಹಿನಿ ಚಿತ್ರ



ಈ ಇಂದೇ ಧಾರಾಕಾರ ಸುರಿದ ಮಳೆಗೆ ಕುಸಿದ ಪಗಲಾಪುರ್ ಸೇತುವೆ ಸೇತುವೆಯ ಮೇಲೆ ಜನತೆ ನಿತ್ಯ ಸಂಚಾರ ಮಾಡುತ್ತಿದ್ದಾರೆ. ಈದೀಗ ಮಳೆಗೂ ಸಹ ಸೇತುವೆ ಇನ್ನಷ್ಟು ಕೊಚ್ಚಿಕೊಂಡು ಹೋಗುತ್ತಲೇ ಇದೆ ಎಂದು ಪ್ರಾದೇಶಿಕ ಕೋಲಿ ಸಮಾಜದ ರಾಜ್ಯ ಸಂಘಟನಾ ಕಾರ್ಯದರ್ಶಿ ಹಾಗೂ ಸಾಮಾಜಿಕ ಹೋರಾಟಗಾರ ಉಮೇಶ ಕೆ. ಮುದ್ನಾಳ್ ಆಕ್ರೋಶ ವ್ಯಕ್ತಪಡಿಸಿದ್ದ ಇನ್ನಲ್ಲೆಯಲ್ಲಿ ಸೇತುವೆ ದುಸ್ಥಿಗೆ ಮುಂದಾದ ಜಿಲ್ಲಾಡಳಿತಕ್ಕೆ ಹರ್ಷ ವ್ಯಕ್ತಪಡಿಸಿದರು. ದಸರಾ ಹಬ್ಬದ ನಿಮಿತ್ಯ ತಾತ್ಕಾಲಿಕ ವಾಗಿ ಮಾರಾಮ್ ನಿಂದ ರಸ್ತೆ ನಿರ್ಮಿಸಲಾಹಿತು ಇದರಿಂದ ಜನರಿಗೆ ಅನುಕೂಲಕ್ಕಿಂತ ಅನಾನುಕೂಲ ಜಾಸ್ತಿಯಾಗಿತ್ತು ಆದರೆ ಅದನ್ನು ನಾನು ಕಣ್ಣಾರೆ ನೋಡಿ ಲೋಕಪಯೋಗಿ ಇಲಾಖೆಗೆ ತಿಳಿಸಿದಾಗ ಹಳೆ ಸೇತುವೆ ದುರಸ್ಥಿ ಮಾಡಲು ಮುಂದಾಗಿರೋದು ಒಳ್ಳೆ ಬೆಳವಣಿಗೆ ಹಳೆ ಸೇತುವೆ ದುರಸ್ಥಿ ಮಾಡಿ ಸಾರ್ವಜನಿಕರಿಗೆ ಮತ್ತು ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಹೇಳಿದರು.

ಸೇತುವೆ ದುರಸ್ತಿಗೆ ಮುಂದಾದ ಲೋಕೋಪಯೋಗಿ ಇಲಾಖೆ

ಯಾದಗಿರಿ ಜಿಲ್ಲಾ ಕೇಂದ್ರದಿಂದ ಕೂಗಳತೆ ಎಲ್ಲಿರುವ ಯಾದಗಿರಿ ಹಿಂದ ಸೈದಾಪುರಗೆ

ದಿನ ಭವಿಷ್ಯ

ರಾಹುಕಾಲ	ಮಧ್ಯಾಹ್ನ	01:30 ರಿಂದ 03:00
ಗುಳಿಕ ಕಾಲ	ಬೆಳಿಗ್ಗೆ	09:00 ರಿಂದ 10:30
ಯಮಗಂಡ ಕಾಲ	ಬೆಳಿಗ್ಗೆ	06:00 ರಿಂದ 07:30

ಮೇಷ ಹೊರಾಂಗಣ ಚಟುವಟಿಕೆಗಳು ನಿಮಗೆ ಉಪಯುಕ್ತವಾಗುತ್ತವೆ. ಜೀವನ ಶೈಲಿ ಮತ್ತು ಯಾವಾಗಲೂ ಭದ್ರತೆಯ ಬಗ್ಗೆ ಯೋಚಿಸುವುದು ನಿಮ್ಮ ದೈಹಿಕ ಹಾಗೂ ನಿಮ್ಮ ಮಾನಸಿಕ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ.

ವೃಷಭ ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸಗಳನ್ನು ಮಾಡಲು ಒಂದು ಅದ್ಭುತ ದಿನ. ಇಂದು ಸುಮ್ಮನೆ ಕುಳಿತುಕೊಳ್ಳುವ ಬದಲು –ಏಕೆ ಏನನ್ನಾದರೂ ಮಾಡಬಾರದು.

ಮಿಥುನ ಮನೆಯಲ್ಲಿನ ಕೆಲವು ಒತ್ತಡ ನಿಮ್ಮ ಸಹನೆಯನ್ನು ಪರೀಕ್ಷಿಸುತ್ತದೆ. ತಮ್ಮ ವ್ಯಾಪರಕ್ಕಾಗಿ ಮನೆಯಿಂದ ಹೊರಗೆ ಹೋಗಿರುವ ವ್ಯಾಪಾರಿಗಳು, ತನ್ನ ಹಣವನ್ನು ಜಾಗರೂಕವಾಗಿಡಿ, ಹಣದ ಕಳ್ಳತನವಾಗುವ ಸಾಧ್ಯತೆ ಇದೆ.

ಕರ್ಕಾಟಕ ನಿಮ್ಮ ತೂಕದ ಮೇಲೆ ಒಂದು ಕಣ್ಣಿಟ್ಟಿರಿ ಮತ್ತು ಅತಿಯಾಗಿ ತಿನ್ನಬೇಡಿ. ನಿಮ್ಮ ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ. ಜನರು ಮತ್ತು ಅವರ ಉದ್ದೇಶಗಳ ಬಗ್ಗೆ ಅವಸರದ ತೀರ್ಮಾನ ಕೈಗೊಳ್ಳಬೇಡಿ.

ಸಿಂಹ ನಿಮ್ಮ ಕುಟುಂಬ ಸದಸ್ಯರೆಡೆಗೆ ನಿಮ್ಮ ಸರ್ವಾಧಿಕಾರಿ ಧೋರಣೆ ಕೇವಲ ಅನುಪಯುಕ್ತ ವಾದಗಳನ್ನು ಪ್ರಾರಂಭಿಸುತ್ತದೆ ಮತ್ತು ಇದು ಟೀಕೆಯನ್ನೂ ತರಬಹುದು. ಪ್ರೀತಿ ಮಿತಿಯಿಲ್ಲದ್ದಾಗಿದೆ, ಅಪಾರವಾಗಿದೆ.

ಕನ್ಯಾ ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ ಮತ್ತು ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ಸಹೋದರ–ಸಹೋದರಿಯರ ಸಹಾಯದಿಂದ ಇಂದು ನೀವು ಅರ್ಹಿತಕವಾಗಿ ಲಾಭವನ್ನು ಪಡೆಯಬಹುದು.

ತುಲಾ ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ಯಾರ ಹತ್ತಿರ ವಾದರು ಸಾಲವನ್ನು ತೆಗೆದುಕೊಂಡಿರುವ ಜನರು, ಇಂದು ಯಾವುದೇ ಪರಿಸ್ಥಿತಿಯಲ್ಲೂ ಸಾಲವನ್ನು ಮರುಪಾವತಿಸಬೇಕಾಗುತ್ತದೆ.

ವೃಶ್ಚಿಕ ರಾತ್ರಿಯನ್ನು ವಿಶೇಷವಾಗಿಸಲು ಮೋಂಬತ್ತಿಯ ಬೆಳಕಿನಲ್ಲಿ ನಿಮ್ಮ ಕುಟುಂಬದೊಂದಿಗೆ ಭೋಜನ ಮಾಡಿ. ಯಾರಿಗಾದರೂ ಅವರ ಪ್ರೀತಿಯಶಸ್ವಿಯಾಗುವುದನ್ನು ಸ್ವತಃ ದೃಶ್ಯೀಕರಿಸುವುದು ಸಹಾಯ ಮಾಡಿ.

ಧನಸ್ಸು ನಿಮ್ಮ ಸಾಮಾನ್ಯ ಜ್ಞಾನದ ಜೊತೆಗೆ ನಿಮ್ಮ ನಿರಂತರ ಪ್ರಯತ್ನ ಖಂಡಿತವಾಗಿಯೂ ಯಶಸ್ಸು ತರುವುದರಿಂದ ತಾಳ್ಮೆಯಿಂದಿರಿ. ನೀವು ನಿಮ್ಮನ್ನು ಒಂದು ರೋಮಾಂಚಕಾರಿ ಪರಿಸ್ಥಿತಿಯಲ್ಲಿ ಕಂಡುಕೊಳ್ಳಬಹುದು.

ಮಕರ ಇಂದು ನೀವು ಹಲವಾರು ಒತ್ತಡಗಳು ಮತ್ತು ಭಿನ್ನಾಭಿಪ್ರಾಯಗಳನ್ನು ಎದುರಿಸಬೇಕಾಗಬಹುದು ಹಾಗೂ ಇದು ನಿಮಗೆ ಕಿರಿಕಿರಿ ಹಾಗೂ ಆತಂಕದ ಭಾವನೆಗಳನ್ನು ಉಂಟುಮಾಡಬಹುದು.

ಕುಂಭ ಆರೋಗ್ಯ ಸಂಬಂಧಿತ ಸಮಸ್ಯೆಗಳು ಅಸ್ವಸ್ಥತೆಯನ್ನು ತರಬಹುದು. ಸಂಬಂಧಿಕರಿಂದ ಹಣದ ಸಾಲವನ್ನು ತೆಗೆದುಕೊಂಡಿರುವ ಜನರು, ಯಾವುದೇ ಪರಿಸ್ಥಿತಿಯಲ್ಲಿಯೂ ಸಾಲವನ್ನು ಮರುಪಾವತಿ ಮಾಡಬೇಕಾಗುತ್ತದೆ.

ಮೀನ ನೀವು ಇಂದು ಪ್ರಣಯದ ಕಚಗುಳಿಯನ್ನು ಅನುಭವಿಸುತ್ತೀರಿ. ಸೃಜನಶೀಲ ಕೆಲಸದಲ್ಲಿ ತೊಡಗಿರುವ ಈ ರಾಶಿಚಕ್ರದ ಜನರು, ಇಂದು ಅವರು ತೊಂದರೆಗಳನ್ನು ಎದುರಿಸಬೇಕಾಗಬಹುದು.

ಉದಯವಾಹಿನಿ ಪತ್ರಿಕಾ ವರದಿಗೆ ಎಚ್ಚೆತ್ತ ಅಧಿಕಾರಿಗಳು

• ನೂತನ ವಿವಿಐಪಿ ಗೆಸ್ಟ್ ಹೌಸ್ ಉದ್ಘಾಟನಾ ಭಾಗ್ಯವಿಲ್ಲದೆ ಸಂಪೂರ್ಣ ಕಸ ತಾಜ್ಯಗಳಿಂದ ಗೆಸ್ಟ್ ಹೌಸ್ ಕಾಣದಂತೆ ಮುಚ್ಚಿತ್ತು

• ಉದಯವಾಹಿನಿ, ಮುದ್ದೇಬಿಹಾಳ

ಅಕ್ಟೋಬರ್ 8 ರಂದು ನಮ್ಮ ಪತ್ರಿಕೆಯಲ್ಲಿ ವಿವಿಐಪಿ ಗೆಸ್ಟ್ ಹೌಸ್‌ಗೆ ಉದ್ಘಾಟನಾ ಭಾಗ್ಯ ಎಂದು ಶೀರ್ಷಿಕೆ ಅಡಿಯಲ್ಲಿ ಮುದ್ದೇಬಿಹಾಳ ಪಟ್ಟಣದ ನ್ಯಾಯಾಲಯದ ಹಿಂಭಾಗದಲ್ಲಿ ಲೋಕೋಪಯೋಗಿ ಇಲಾಖೆಯಿಂದ 1.5 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡ ನೂತನ ವಿವಿಐಪಿ ಗೆಸ್ಟ್ ಹೌಸ್ ಉದ್ಘಾಟನಾ ಭಾಗ್ಯವಿಲ್ಲದೆ ಸಂಪೂರ್ಣ ಕಸ ತಾಜ್ಯಗಳಿಂದ ಗೆಸ್ಟ್ ಹೌಸ್ ಕಾಣದಂತೆ ಮುಚ್ಚಿತ್ತು ಈ ಕುರಿತು ನಾವು ಮಾಡಿದ ವರದಿ ಅಧಿಕಾರಿಗಳ ಗಮನ ಸಳೆದರು.

ಅಧಿಕಾರಿಗಳು ಕಸ ಸ್ವಚ್ಚತೆಗೆ ಮುಂದಾದ್ದು ಒಂದು ತಿಂಗಳ ನಂತರದಲ್ಲಿ ಇದು ಸರಕಾರಿ ಅಧಿಕಾರಿಗಳ ಕಾರ್ಯವೈಖರಿಯಾಗಿದೆ ಎಂದು ತಾಲ್ಲೂಕಿನ ಸಾರ್ವಜನಿಕರು ಆಡಿಕೊಳ್ಳುತ್ತಿದ್ದಾರೆ.

ಉದಯವಾಹಿನಿ ಚಿತ್ರ

ವಿವಿಐಪಿ ಗೆಸ್ಟ್‌ಹೌಸ್ ಸ್ವಚ್ಚತೆ

ಹೃದಯ ಭಾಗದಲ್ಲಿರುವ ವಿವಿಐಪಿ ಗೆಸ್ಟ್ ಹೌಸ್ ಲೋಕಾರ್ಪಣೆಗೂಡರೆ ಮತಕ್ಷೇತ್ರದ ಶಾಸಕರು ಮತಕ್ಷೇತ್ರದ ಸಾರ್ವಜನಿಕರ ಅಹವಾಲು ಸ್ವೀಕರಿಸಲು ಮತ್ತು ವಿವಿಧ ಸರಕಾರಿ ಇಲಾಖೆಗಳ ಅಧಿಕಾರಿಗಳ ಸಭೆ ನಡೆಸಲು ಇದು ಸಹಕಾರಿಯಾಗುತ್ತದೆ, ಮಾಧ್ಯಮಗಳು ಮಾಡಿದ ವರದಿಯ ನಂತರ ಗೆಸ್ಟ್ ಅಂಗಳದ ತಾಜ್ಯ ಸ್ವಚ್ಚತೆ ಮಾಡಿದಂತೆ ಕಟ್ಟಡ ಲೋಕಾರ್ಪಣೆ ಸಹ ಬೇಗ ಆಗಲಿ ಎಂಬುದು ಸಾರ್ವಜನಿಕರ ಒತ್ತಾಸೆಯಾಗಿದೆ.

ವಿವಿಐಪಿ ಗೆಸ್ಟ್‌ಹೌಸ್‌ಗೆ ಉದ್ಘಾಟನೆ ಭಾಗ್ಯ ಯಾವಾಗ ?

ಉದಯವಾಹಿನಿ ಚಿತ್ರ

ಮುದ್ದೇಬಿಹಾಳ
ಮುದ್ದೇ... ಯಾಲಯ ಹಿಂಭಾಗದಲ್ಲಿ ಲೋ... ದೆ 1.5 ಕೋಟಿ ವೆಚ್ಚದಲ್ಲಿ ನಿರ್ಮಾ... ಐಪಿ ಗೆಸ್ಟ್ ಹೌಸ ಗೆ ಉದ್ಘಾಟನಾ ಭಾಗ್ಯ ಇನ್ನೂ ಕೂಡಿ... ಈ ಹಿಂದಿನ ಶಾಸಕರ ಅವಧಿಯಲ್ಲಿ ಕಾಮಗಾರಿ ಸಂ... ತು ಈಗ ಹೊಸ ಸರಕಾರ, ಹೊ ಸ ಶಾಸಕರು ... ಸ್ ಮಾತ್ರ ಲೋಕಾರ್ಪಣೆ ಆಗಿಲ್ಲ, ಸದ್ಯ ... ಮುಂದೆ ಗೆಸ್ಟ್ ಹೌಸ ಕಾಣದಂತೆ ಕ ಸ ಬೆಳೆದಿದೆ ಆ ... ಸ ತಾಜ್ಯಗಳಿಂದ ತುಂಬಿದ್ದರೆ ಕಟ್ಟಡದ ಒಳಗೆ ಸಂಪೂರ್ಣ ಧೂಳಿನಿಂದ ಕೂಡಿದೆ. ಪಟ್ಟಣದ ಹೃದಯ ಭಾ ಗದಲ್ಲಿರುವ ಈ ವಿವಿಐಪಿ ಗೆಸ್ಟ್ ಹೌಸ್ ಆದಷ್ಟು ಬೇಗ ಲೋಕಾರ್ಪ ಣೆಯಾಗಬೇಕು ಮತ್ತು ಶಾಸಕರು ಸಾರ್ವಜನಿಕರ ಅಹವಾಲು ಸ್ವೀಕರಿಸಲು, ವಿವಿಧ ಇಲಾಖೆ ಅಧಿಕಾರಿಗಳ ಸಭೆ ನಡೆಸಲು ಸೂಕ್ತವಾದ ಸ್ಥಳವಾಗಿದ್ದು ಆದಷ್ಟು ಬೇ...

ಸದ್ಯ ವಿವಿಐಪಿ ಗೆಸ್ಟ್ ಹೌಸ್ ಕಟ್ಟಡ ಕಾಮಗಾರಿ ಸಂಪೂರ್ಣ ಮುಗಿದಿದೆ ಇನ್ನೂ ಕಟ್ಟಡ ಸುತ್ತಲಿನ ಕಾಂಪೌಂಡ್ ಹಾಗೂ ಗೆಸ್ಟ್ ಹೌಸ್ ಒಳಗೆ ಪರ್ನಿಚರ್ಸ್ ಕೆಲಸ ಆಗಬೇಕಿದೆ ಡಿಸೆಂಬರ್ ಒಳಗೆ ಎಲ್ಲಾ ಕಾಮಗಾರಿ ಮುಗಿಯಲಿದ್ದು ನಂತರ ಗೆಸ್ಟ್ ಹೌಸ್ ಲೋಕಾರ್ಪಣೆಗೊಳ್ಳಲಿದೆ

– ಎ.ಬಿ ರೆಡ್ಡಿ , ಸಹಾಯಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಮುದ್ದೇಬಿಹಾಳ

ನ.18ರಂದು ಜಿಲ್ಲಾದ್ಯಂತ ಅರ್ಥಪೂರ್ಣ ಕನಕ ಜಯಂತಿ ಆಚರಣೆ

• ಉದಯವಾಹಿನಿ, ಚಿತ್ರದುರ್ಗ

ಸರ್ಕಾರ ನಿರ್ದೇಶನದಂತೆ ಬರುವ ನವೆಂಬರ್ 18ರಂದು ಜಿಲ್ಲಾದ್ಯಂತ ಅರ್ಥಪೂರ್ಣವಾಗಿ ಕನಕ ಜಯಂತಿ ಆಚರಣೆ ಮಾಡಲಾಗುವುದು. ಎಲ್ಲಾ ಸರ್ಕಾರಿ ಕಚೇರಿ, ಶಾಲಾ, ಕಾಲೇಜು, ಹಾಸ್ಟೆಲ್‌ಗಳಲ್ಲಿ ಕನಕದಾಸರ ಭಾವಚಿತ್ರ ಇರಿಸಿ ಗೌರವ ಸಮರ್ಪಿಸುವುದರೊಂದಿಗೆ ಜಯಂತಿ ಆಚರಿಸುವಂತೆ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಕನಕ ಜಯಂತಿ ಆಚರಣೆ ಸಂಬಂಧ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕನಕ ಜಯಂತಿ ಅಂಗವಾಗಿ ನ. 18 ರಂದು ಬೆಳಿಗ್ಗೆ 9:30ಕ್ಕೆ ನಗರದ ಹೊಳಲ್ಕೆರೆ ರಸ್ತೆಯ ಕನಕ ವೃತ್ತದಿಂದ ಕನಕದಾಸರ ಭಾವಚಿತ್ರದ ಮೆರವಣಿಗೆ ಪ್ರಾರಂಭವಾಗಿ, ಸಂಗೊಳ್ಳಿ ರಾಯಣ್ಣ ವೃತ್ತ, ಗಾಂಧಿವೃತ್ತ, ಎಸ್‌ಬಿಐ ವೃತ್ತ, ಪ್ರವಾಸಿ ಮಂದಿರ ಮಾರ್ಗವಾಗಿ ಅಂಬೇಡ್ಕರ್ ವೃತ್ತ, ಮದಕರಿ ನಾಯಕರ ವೃತ್ತದ ಮೂಲಕ ತರಾಸು ರಂಗಮಂದಿರ ತಲುಪಲಿದೆ. ಅಂದು ಮಧ್ಯಾಹ್ನ 12:30 ಕ್ಕೆ ನಗರದ ತ.ರಾ.ಸು ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಡೊಳ್ಳು, ವೀರಗಾಸೆ ಸೇರಿದಂತೆ ವಿವಿಧ

ಉದಯವಾಹಿನಿ ಚಿತ್ರ

ಜಾನಪದ ಕಲಾತಂಡಗಳು ಮೆರವಣಿಗೆಯಲ್ಲಿ ಭಾಗವಹಿಸಲಿವೆ. ಸರ್ಕಾರದ ಶಿಷ್ಟಾಚಾರದ ಅನುಸಾರ ಆಹ್ವಾನ ಪತ್ರಿಕೆ ಮುದ್ರಿಸಿ, ಜನಪ್ರತಿನಿಧಿಗಳನ್ನು ಜಯಂತಿಗೆ ಆಹ್ವಾನಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಹೇಳಿದರು.

ಜಯಂತಿ ಅಂಗವಾಗಿ ಕನಕದಾಸರ ಕೀರ್ತನೆಗಳ ಗೀತಗಾಯನ ಹಾಗೂ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗುವುದು. ಜಯಂತಿ ಅಂಗವಾಗಿ ಒಂದು ದಿನ ಮುಂಚಿತವಾಗಿ ಕನಕದಾಸರ ಪ್ರತಿಮೆ ಸೇರಿದಂತೆ ನಗರದ ಎಲ್ಲಾ ಪ್ರತಿಮೆ ಹಾಗೂ ವೃತ್ತಗಳಿಗೂ ದೀಪಾಲಂಕಾರ ಹಾಗೂ ಪುಷ್ಪಾಲಂಕಾರ ಮಾಡಬೇಕು. ಜಿಲ್ಲಾಡಳಿತದ ವತಿಯಿಂದ ನಡೆಯುವ ಕನಕ ಜಯಂತಿ ಕಾರ್ಯಕ್ರಮಕ್ಕೆ ಸರ್ಕಾರಿ ಅಧಿಕಾರಿಗಳು, ನೌಕರರು ಕಡ್ಡಾಯವಾಗಿ ಭಾಗವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಾಧಕರಿಗೆ ಸನ್ಮಾನ

ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ತೋರಿದ ಕುರುಬ ಸಮಾಜದ ಐವರಿಗೆ ಹಾಗೂ ಇತರೆ ಐವರಿಗೆ ಸಮಾಜದ ವತಿಯಿಂದ ಕನಕ ಜಯಂತಿ ಕಾರ್ಯಕ್ರಮದಲ್ಲಿ ಸನ್ಮಾನ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಸಮಾಜದ ಮುಖಂಡರು ಸಭೆಯಲ್ಲಿ ಮನವಿ ಮಾಡಿದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜೆ.ಕುಮಾರಸ್ವಾಮಿ, ಜಿ.ಪಂ.ಸಿಪಿಓ ಗಾಯಿತ್ರಿ, ನಗರಸಭೆ ಪೌರಾಯುಕ್ತೆ ರೇಣುಕಾ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಜಗದೀಶ್ ಹೆಬ್ಬಳ್ಳಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಭಾರತಿ ಬಣಕಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಸ್.ಕೆ.ಮಲ್ಲಿಕಾರ್ಜುನ್, ಜಿಲ್ಲಾ ಕುರುಬ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಶ್ರೀರಾಮ್, ನಗರಸಭೆ ಸದಸ್ಯೆ ಪಿ.ಕೆ.ಮೀನಾಕ್ಷಿ, ಸೇರಿದಂತೆ ಸಮಾಜದ ಮುಖಂಡರಾದ ಪೈಲ್ವಾನ್ ತಿಪ್ಪೇಸ್ವಾಮಿ, ಚಂದ್ರಶೇಖರ್, ಓಂಕಾರಮೂರ್ತಿ ಕುಮಾರ್ ಗೌಡ್ರು, ಮಂಜುನಾಥ, ಮಂಜಪ್ಪ ಸೇರಿದಂತೆ ಮತ್ತಿತರ ಗಣ್ಯರು, ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

ಸಂತೆ ವ್ಯಾಪಾರ ನಡೆಸಲು ಸೂಕ್ತ ವ್ಯವಸ್ಥೆ ಕಲ್ಪಿಸಲಾಗುವುದು: ಎಂ ಶಮಿವುಲ್ಲಾ

• ಉದಯವಾಹಿನಿ, ಅರಸೀಕೆರೆ

ಉದಯವಾಹಿನಿ ಚಿತ್ರ

ಕೆಲವು ಕಿಡಿಗೇಡಿಗಳಿಂದ ವ್ಯಾಪಾರಿಗಳಿಗೆ ತೊಂದರೆ

ನಗರದಲ್ಲಿ ನಡೆಯುತ್ತಿರುವ ಸಂತೆ ಮೈದಾನದಲ್ಲಿ ಸಂತೆ ಜಾಗಕ್ಕೆ ಕಾಂಪೌಂಡ್ ಹಾಕಲಾಗುವುದು ಎಂದು ಕೆಲವು ಕಿಡಿಗೇಡಿಗಳು ವಿಡಿಯೋ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿ ಬಿಟ್ಟಿದ್ದು ಇದರಿಂದ ಸಂತೆ ವ್ಯಾಪಾರಸ್ಥರು ರೈತರು ತಾವು ಬೆಳೆದ ತರಕಾರಿ ದಿನಸಿಗಳನ್ನು ಪ್ರತಿ ಶುಕ್ರವಾರ ಸಂತೆ ನಡೆಯುವುದಲ್ಲದೆ ಪ್ರತಿದಿನವೂ ಸಹ ತಮ್ಮ ವ್ಯಾಪಾರವಹಿವಾಟುಗಳನ್ನು ನಡೆಸಿಕೊಂಡು ಹೋಗಬಹುದು.

ಅಲ್ಲಿಯೂ ಸಹ ರಸ್ತೆ ಬದಿಗಳಲ್ಲಿ ವ್ಯಾಪಾರ ನಡೆಸಲು ತೊಂದರೆ ಉಂಟಾದರೆ ಸಂತೆ ಮೈದಾನದ ಒಳಗಡೆ ತಮ್ಮ ವ್ಯಾಪಾರಗಳನ್ನು ನಡೆಸಬಹುದು.

ಇದರಿಂದ ರೈತರು ವ್ಯಾಪಾರಿಗಳು ಯಾವುದೇ ಗೊಂದಲಕ್ಕೀಡಾಗಬಾರದೆಂದು ಅರಸೀಕೆರೆ ನಗರಸಭೆ ಅಧ್ಯಕ್ಷರಾದ ಎಂ ಶಮಿಉಲ್ಲಾ ಪ್ರತಿಕ್ರಿಯೆಸಿದರು .

ಕೆಲವು ಕಿಡಿಗೇಡಿಗಳು ವ್ಯಾಪಾರಿಗಳಿಗೆ ತೊಂದರೆಯಾಗುವಂತೆ ನಗರಸಭೆ ವತಿಯಿಂದ ಕಾಂಪೌಂಡ್ ನಿರ್ಮಾಣ ಆಗುತ್ತದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ ನಗರಸಭೆಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು ಇನ್ನು ಮುಂದೆಯೂ ಸಹ ನಿರಂತರವಾಗಿ ಪ್ರತಿ ಶುಕ್ರವಾರದ ಸಂತೆ ನಡೆಯುವುದು.

ದಿನವಹಿ ವರ್ತಕರು ರೈತರು ವ್ಯಾಪಾರಿಗಳು ತಮ್ಮ ವ್ಯಾಪಾರವನ್ನು ಸುಲಲಿತವಾಗಿ ನಡೆಸಿಕೊಂಡು ಹೋಗಬಹುದು ಎಂದು ಶಮಿವುಲ್ಲಾ ತಿಳಿಸಿದರು.

ಹೆಚ್ಚುವರಿ 'ಹೆಸರು' ಕಾಳು ಖರೀದಿಗೆ ಆದೇಶ

• ಉದಯವಾಹಿನಿ, ಹುಬ್ಬಳ್ಳಿ

ಕೇಂದ್ರ ಕೃಷಿ ಸಚಿವರಿಗೆ ಮನವಿ

ಉದಯವಾಹಿನಿ ಚಿತ್ರ

ಕರ್ನಾಟಕದ ರೈತರು ಉತ್ಪಾದಿಸುವ ಹಿಂಗಾರು ವಿವಿಧ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಘೋಷಿಸಿದ್ದ ಕೇಂದ್ರ ಬಿಜೆಪಿ ಸರ್ಕಾರ ಇದೀಗ ರೈತರಿಗೆ ಮತ್ತೊಂದು ಸಿಹಿ ಸುದ್ದಿ ನೀಡಿದೆ. ರೈತರಿಂದ ಹೆಚ್ಚುವರಿ 'ಹೆಸರು ಕಾಳು' ಖರೀದಿಗೆ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ ಎಂದು ಕೇಂದ್ರ ಆಹಾರ ಮತ್ತು ಸಾರ್ವಜನಿಕ ಸರಬರಾಜು ಸಚಿವ ಪ್ರಹ್ಲಾದ್ ಜೋಶಿಯವರು ಮಾಹಿತಿ ನೀಡಿದ್ದಾರೆ.

ಈ ಕುರಿತು ಹುಬ್ಬಳ್ಳಿಯಲ್ಲಿ ಬುಧವಾರ ಮಾಹಿತಿ ನೀಡಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿನಲ್ಲಿ 22215 ಮೆಟ್ರಿಕ್ ಟನ್ ಹೆಸರುಕಾಳನ್ನು ಬೆಂಬಲ ಬೆಲೆ ಅಡಿಯಲ್ಲಿ ಖರೀದಿಸಲಾಗಿದೆ. ಕರ್ನಾಟಕದಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ರೈತರ ಹೆಸರು ಕಾಳು ಬೆಳೆ ರೈತರ ಕೈ ಸೇರಿದೆ. ಈ ಬಾರಿ ಉತ್ತಮ ಬೆಳೆ ಬೆಳೆಯಲಾಗಿದೆ. ಆದ್ದರಿಂದ ಕೇಂದ್ರವು ಹೆಚ್ಚುವರಿಯಾಗಿ ಸುಮಾರು 16,105 ಸಾವಿರ ಮೆಟ್ರಿಕ್ ಟನ್ ಹೆಸರು ಖರೀದಿಸಲು ಮುಂದಾಗಿದೆ. ಇಷ್ಟು ಹೆಸರನ್ನು ಸರ್ಕಾರ ಬೆಂಬಲ ಬೆಲೆ ಅಡಿಯಲ್ಲಿ ಖರೀದಿಸಲಿದೆ ಎಂದು ತಿಳಿಸಿದರು.

ಮೊದಲು ಮತ್ತು ಇಂದಿನ ಖರೀದಿ ಸೇರಿ ಒಟ್ಟು 38.320 ಮೆಟ್ರಿಕ್ ಟನ್ ಹೆಸರು ಕಾಳು ಖರೀದಿ ಕೇಂದ್ರ ಒಪ್ಪಿಗೆ ನೀಡಿದಂತಾಗಿದೆ.

ರಾಜ್ಯದ ರೈತರ ಹಿತದೃಷ್ಟಿಯಿಂದ ಇತ್ತೀಚೆಗೆ ಹೆಸರು ಖರೀದಿಸುವಂತೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರು ಕೇಂದ್ರ ಕೃಷಿ ಸಚಿವರಿಗೆ ಮನವಿ ಮಾಡಿಕೊಂಡಿದ್ದರು. ಅದರ ಬೆನ್ನಲ್ಲೆ ಕೇಂದ್ರ ಹೆಸರು ಖರೀದಿಗೆ ಮುಂದಾಗಿದೆ.

ಶೀಘ್ರದಲ್ಲಿ ಹನಿ ನಿರಾವರಿ ಯೋಜನೆ ಕಾಮಗಾರಿ ಆರಂಭ: ಕಟಕಧೋಂಡ

• ಉದಯವಾಹಿನಿ, ಚಡಚಣ

ಉದಯವಾಹಿನಿ ಚಿತ್ರ

ಸರಕಾರಿ ಐಟಿಐ ಕಾಲೇಜು ಉದ್ಘಾಟನೆ

ಭಾಗದ ರೈತರ ಬಹುದಿನಗಳ ಬೇಡಿಕೆಯಾದ ಚಡಚಣ ಹನಿ ನೀರಾವರಿ ಯೋಜನೆಯ ಕಾಮಗಾರಿ ಒಂದು ತಿಂಗಳಲ್ಲಿ ಆರಂಭಗೊಳ್ಳಲಿದೆ ಎಂದು ಶಾಸಕ ವಿಠ್ಠಲ ಕಟಕಧೋಂಡ ಹೇಳಿದರು.

ಪಟ್ಟಣದಲ್ಲಿ ಮಂಗಳವಾರ ಆರಂಭಗೊಂಡ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ(ಐಟಿಐ) ಉದ್ಘಾಟಿಸಿ ಅವರು ಮಾತನಾಡಿದರು.

ಹನಿ ನಿರಾವರಿ ಯೋಜನೆಯಿಂದ ಚಡಚಣ ಭಾಗದ 9 ಹಳ್ಳಿಗಳ 17722 ಹೆಕ್ಟರ್ ಪ್ರದೇಶ ನಿರಾವರಿಗೆ ಒಳಪಡಲಿದೆ. ಪಟ್ಟಣದಲ್ಲಿ ಮಿನಿ ವಿಧಾನಸೌಧ ನಿರ್ಮಾಣಕ್ಕೆ 8.5 ಕೋಟಿ ಹಣ ಮಂಜೂರಾಗಿದೆ. ಗಾಣಗಾಪೂರ–ಪಂಢರಪೂರ ರಾಜ್ಯ ಹೆದ್ದಾರಿ ಚತುರ್ಪಥವಾಗಿಸವ ಯೋಜನೆಗೂ ಮಂಜೂರಾತಿ ದೊರಕಿದ್ದು, ಕೂಡಲೇ ಟೆಂಡರ್ ಪ್ರಕ್ರಿಯೆ ಮುಗಿಲಿದೆ ಎಂದ ಅವರು, ಐಟಿಐ ತರಬೇತಿ ಯುವಕರಿಗೆ ವರದಾನವಾಗಿದೆ ಎಂದರು. ಪಟ್ಟಣ ಪಂಚಾಯ್ತಿ ಸದಸ್ಯ ಚೇತನ ನಿರಳೆ ಮಾತನಾಡಿ, ಪಟ್ಟಣದಲ್ಲಿ ಸರಕಾರಿ ಪ್ರೌಢ ಶಾಲೆ, ಪದವಿಪೂರ್ವ ಕಾಲೇಜು ಆರಂಭಿಸಲು ಶಾಸ

ಉತ್ತರ ಭಾರತ ರಾಜ್ಯಗಳಲ್ಲಿ ವಾಯುಮಾಲಿನ್ಯ ಪ್ರಮಾಣ ಹೆಚ್ಚಳ

ಹೊಲಗಳಲ್ಲಿ ತುಂಬಿರುವ ಕೃಷಿ ತ್ಯಾಜ್ಯಗಳನ್ನು ಸುಡುತ್ತಿರುವ ರೈತರು, ಇದು ವಾಯುಮಾಲಿನ್ಯ ಏರಿಕೆಯಾಗಲು ಕಾರಣ

ನವದೆಹಲಿ: ಉತ್ತರ ಭಾರತ ರಾಜ್ಯಗಳಲ್ಲಿ ದಿನದಿಂದ ದಿನಕ್ಕೆ ವಾಯುಮಾಲಿನ್ಯ ಪ್ರಮಾಣ ಹೆಚ್ಚುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ದೆಹಲಿ, ಪಂಜಾಬ್, ಹರಿಯಾಣ ಸೇರಿದಂತೆ ಅಕ್ಕಪಕ್ಕದ ರಾಜ್ಯಗಳಲ್ಲಿ ಅಕ್ಟೋಬರ್ ನಂತರ ಏಕಾಏಕಿ ವಾಯುಮಾಲಿನ್ಯ ಪ್ರಮಾಣ ಏರಿಕೆಯಾಗುತ್ತಿದೆ.

ಉತ್ತರ ಭಾರತದಲ್ಲಿ ರೈತರು ತಮ್ಮ ಹೊಲಗಳಲ್ಲಿರುವ ಕಳೆ ಗಿಡ ನಾಶಕ್ಕಾಗಿ ಹಾಗೂ ಕೃಷಿ ತ್ಯಾಜ್ಯಗಳನ್ನು ಒಂದೆಡೆ ರಾಶಿ ಹಾಕಿ ಸುಡುತ್ತಾರೆ.

ಇದು ಉತ್ತರದ ರಾಜ್ಯಗಳಲ್ಲಿ ವಾಯುಮಾಲಿನ್ಯ ಏರಿಕೆಯಾಗಲು ಪ್ರಮುಖ ಕಾರಣವಾಗಿದೆ. ಅದರಲ್ಲೂ ಪಂಜಾಬ್ ಹಾಗೂ ಹರಿಯಾಣ ರಾಜ್ಯಗಳಲ್ಲಿ ಇಂತಹ ಪ್ರಕರಣಗಳು ಸಾಮಾನ್ಯ ಎಂಬಂತಾಗಿವೆ. ಎಷ್ಟೇ ಕಠಿಣ ನಿಯಮಗಳನ್ನು ಜಾರಿಗೊಳಿಸಿದರೂ, ಅಧಿಕ ಪ್ರಮಾಣದಲ್ಲಿ ಕೃಷಿ ತ್ಯಾಜ್ಯಗಳನ್ನು ಸುಡುವ ಪ್ರಕ್ರಿಯೆಯನ್ನು ನಿಯಂತ್ರಿಸುವುದು ಕಷ್ಟಸಾಧ್ಯವಾಗಿದೆ.

10 ಸಾವಿರಕ್ಕೂ ಅಧಿಕ ಪ್ರಕರಣ ದಾಖಲು

ಪಂಜಾಬ್ ಹಾಗೂ ಹರಿಯಾಣದಲ್ಲಿ ಕೃಷಿ ತ್ಯಾಜ್ಯಗಳಿಗೆ ಬೆಂಕಿ ಹಾಕುತ್ತಿರುವ ಪ್ರಕರಣಗಳನ್ನು ನಿಯಂತ್ರಿಸುವುದು ಸರ್ಕಾರಗಳಿಗೆ ದೊಡ್ಡ ಸವಾಲಾಗಿದೆ. ಈ ಬಾರಿ ಮಧ್ಯಪ್ರದೇಶ, ರಾಜಸ್ಥಾನ ಹಾಗೂ ಉತ್ತರ ಪ್ರದೇಶದಲ್ಲಿ ಪ್ರಕರಣಗಳ ಸಂಖ್ಯೆ ಗಮನಾರ್ಹವಾಗಿ ಏರಿಕೆಯಾಗಿರುವುದು ಚಿಂತಿಗೀಡು ಮಾಡಿದೆ. ಒಟ್ಟಾರೆ ದೇಶಾದ್ಯಂತ ಈಗಾಗಲೇ 10 ಸಾವಿರ ಪ್ರಕರಣಗಳು ದಾಖಲಾಗಿವೆ.

ಬಹುದೊಡ್ಡ ಸವಾಲು

ಉತ್ತರ ಭಾರತ ರಾಜ್ಯಗಳಲ್ಲಿ ದಿನದಿಂದ ದಿನಕ್ಕೆ ವಾಯುಮಾಲಿನ್ಯ ಪ್ರಮಾಣ ಹೆಚ್ಚುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ದೆಹಲಿ, ಪಂಜಾಬ್, ಹರಿಯಾಣ ಸೇರಿದಂತೆ ಅಕ್ಕಪಕ್ಕದ ರಾಜ್ಯಗಳಲ್ಲಿ ಅಕ್ಟೋಬರ್ ನಂತರ ಏಕಾಏಕಿ ವಾಯುಮಾಲಿನ್ಯ ಪ್ರಮಾಣ ಏರಿಕೆಯಾಗುತ್ತಿದೆ. ಪ್ರಸ್ತುತ ಸಮಸ್ಯೆ ನಿಯಂತ್ರಿಸುವುದು ಆಯಾ ರಾಜ್ಯ ಸರ್ಕಾರಗಳಿಗೆ ಬಹುದೊಡ್ಡ ಸವಾಲಾಗಿದೆ.

ತ್ಯಾಜ್ಯ ಸುಡುತ್ತಿರುವ ಪ್ರಮಾಣ ಇಳಿಕೆ

ಇನ್ನು ಮಧ್ಯಪ್ರದೇಶದಲ್ಲಿ ಕಳೆದ ಸೋಮವಾರ 506 ಕಡೆಗಳಲ್ಲಿ ಗಣನೀಯ ಪ್ರಮಾಣದಲ್ಲಿ ತ್ಯಾಜ್ಯಗಳನ್ನು ಸುಡಲಾಗಿದೆ. ಉತ್ತರ ಪ್ರದೇಶ ಹಾಗೂ ರಾಜಸ್ಥಾನದಲ್ಲೂ ಹೆಚ್ಚು ಹೆಚ್ಚು ಪ್ರಕರಣಗಳು ದಾಖಲಾಗುತ್ತಿವೆ. ಈ ಮೂರು ರಾಜ್ಯಗಳಿಗೆ ಹೋಲಿಸಿದರೆ ಹರಿಯಾಣದಲ್ಲಿ ತ್ಯಾಜ್ಯ ಸುಡುತ್ತಿರುವ ಪ್ರಮಾಣ ಇಳಿಕೆಯಾಗಿರುವುದು ವರದಿಯಾಗಿದೆ.

ಜನವರಿ ವೇಳೆಗೆ ಈ ಸಂಖ್ಯೆ ದ್ವಿಗುಣಗೊಳ್ಳುವುದು ಖಂಡಿತ ಎಂದು ಹೇಳಲಾಗುತ್ತಿದೆ. ಕೃಷಿ ತ್ಯಾಜ್ಯ ಸುಡುವುದರಿಂದ ಸುತ್ತಲ ಪ್ರದೇಶಗಳಿಗೆ ದಟ್ಟವಾದ ಹೊಗೆ ಹಬ್ಬುತ್ತಿದೆ. ಇದರಿಂದ ಉತ್ತರ ಭಾರತದಲ್ಲಿ ದಿನದಿಂದ ದಿನಕ್ಕೆ ವಾಯುಮಾಲಿನ್ಯ ಪ್ರಮಾಣ ಏರಿಕೆಯಾಗುತ್ತಿದೆ. ಪಂಜಾಬ್‌ನಲ್ಲಿ ನ.1 ರಿಂದ ನ.4 ಅವಧಿಯಲ್ಲಿ ಸರಾಸರಿ 700 ಪ್ರಕರಣಗಳು ದಾಖಲಾಗಿವೆ.

ಒಟ್ಟಾರೆ ದೇಶಾದ್ಯಂತ ಕೃಷಿ ತ್ಯಾಜ್ಯಗಳನ್ನು ಸುಡುತ್ತಿರುವ ಪ್ರಕರಣಗಳ ಸಂಖ್ಯೆ 10,693 ಸಾವಿರದ ಗಡಿ ದಾಡಿದೆ. ಪಂಜಾಬ್‌ನಲ್ಲಿ 4,394 ಹಾಗೂ ಮಧ್ಯಪ್ರದೇಶದಲ್ಲಿ 2,875 ಪ್ರಕರಣಗಳು ದಾಖಲಾಗಿರುವುದು ವರದಿಯಾಗಿದೆ. ಪಂಜಾಬ್, ಹರಿಯಾಣ ರಾಜ್ಯಗಳಲ್ಲಿ ಕೃಷಿ ತ್ಯಾಜ್ಯ ಸುಡುವುದರಿಂದ ದೆಹಲಿಯಲ್ಲಿ ವಾಯುಮಾಲಿನ್ಯ ಸಮಸ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಸಮಸ್ಯೆ ನಿಯಂತ್ರಿಸುವುದು ಸರ್ಕಾರಕ್ಕೆ ದೊಡ್ಡ ಸವಾಲಾಗಿದೆ.

ಗ್ಯಾಲಂಟ್ ವಜಾ ಖಂಡಿಸಿ ಇಸ್ರೇಲ್‌ನಲ್ಲಿ ಪ್ರತಿಭಟನೆ

ಟೆಲ್ ಅವೀವಾ: ಇಸ್ರೇಲ್ ರಕ್ಷಣಾ ಸಚಿವ ಯೋವ್ ಗ್ಯಾಲಂಟ್ ಅವರನ್ನು ವಜಾಗೊಳಿಸುವ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ನಿರ್ಧಾರ ಪ್ರತಿಭಟಿಸಿ ಸಾವಿರಾರು ಮಂದಿ ತಡರಾತ್ರಿ ಬೀದಿಗಿಳಿದು ಪ್ರಧಾನಿ ನಿರ್ಧಾರವನ್ನು ತೀವ್ರವಾಗಿ ಖಂಡಿಸಿದ್ದಾರೆ. ರಾಜಧಾನಿ ಟೆಲ್ ಅವಿವ್‌ನಲ್ಲಿ ಸಾವಿರಾರು ಪ್ರತಿಭಟನಾಕಾರರು ಜಮಾಯಿಸಿ ರಕ್ಷಣಾ ಸಚಿವರನ್ನು ವಜಾಗೊಳಿಸುವಿಕೆ ಕ್ರಮ ಸರಿಯಲ್ಲ ಎಂದು ಆರೋಪಿಸಿದ್ದಾರೆ. ರಕ್ಷಣಾ ಸಚಿವ ಯೋವ್ ಗ್ಯಾಲಂಟ್‌ನ ಬದಲಿಗೆ ಇಸ್ರೇಲ್ ಕಾಟ್ಜ್ ಅವರನ್ನು ರಕ್ಷಣಾ ಸಚಿವರನ್ನಾಗಿ ನಿಯೋಜನೆ ಮಾಡಿದ್ದು ಗಾಜಾದಿಂದ ಒತ್ತೆಯಾಳು ಬಿಡುಗಡೆ ಮಾಡಿಸಲು ಈ ಪ್ರಯತ್ನ ಮಾಡಲಾಗಿದೆ ಎನ್ನುವ ಸಮಜಾಯಿಷಿ ನೀಡಿದ್ದರೂ ಪ್ರತಿಭಟನಾಕಾರರು ಆಕ್ರೋಶ ಹೊರಹಾಕಿದ್ದಾರೆ.

ಪ್ರತಿಭಟನಾಕಾರರು, ಇಸ್ರೇಲಿ ಧ್ವಜಗಳನ್ನು ಹಿಡಿದು, ಟೆಲ್ ಅವಿವ್‌ನ ಅಯಾಲೋನ್ ಹೆದ್ದಾರಿಯಲ್ಲಿ ಜಮಾಯಿಸಿ ಪ್ರಧಾನಿ ಬೆಂಜಮಿನ್ ಅವರ ವಿರುದ್ಧ ಆಕ್ರೋಶ ಹೊರಹಾಕಿದರು. ಈ ವೇಳೆ ಸಂಚಾರ ದಟ್ಟಣೆ ಎದುರಾಗಿತ್ತು. ಪ್ರತಿಭಟನಾಕಾರರು ರಸ್ತೆಯಲ್ಲಿ ಟೈಯರ್ಗೆ ಬೆಂಕಿ ಹಚ್ಚಿ ಆಕ್ರೋಶ ಹೊರಹಾಕಿದರು.

ಅನೇಕ ಪ್ರತಿಭಟನಾಕಾರರು ಪ್ರಧಾನಿ ನಿರ್ಧಾರವನ್ನು ಪ್ರತಿಭಟಿಸಿ ಮರಳಿ ಯೋವ್ ಗ್ಯಾಲಂಟ್ ಅವರನ್ನು ರಕ್ಷಣಾ ಸಚಿವರನ್ನಾಗಿ ನಿಯೋಜಿಸುವಂತೆ ಒತ್ತಡ ಹಾಕಿದ್ದಾರೆ.

ಗಾಜಾದಲ್ಲಿ ಇಸ್ರೇಲಿ ಒತ್ತೆಯಾಳುಗಳನ್ನು ಉಲ್ಲೇಖಿಸಿ, ಮತ್ತು ಕಳೆದ ವರ್ಷದ ಹಮಾಸ್ ದಾಳಿಯಿಂದ ದೇಶವನ್ನು ರಕ್ಷಿಸಲು ನೆತನ್ಯಾಹು ಅವರು ವಿಫಲರಾಗಿದ್ದಾರೆ ಎಂದು ಪ್ರತಿಭಟನಾಕಾರರು ಟೀಕಿಸಿದ್ದಾರೆ. ಗಾಜಾದೊಂದಿಗೆ ನಡೆಯುತ್ತಿರುವ ಮಿಲಿಟರಿ ಸಂಘರ್ಷದ ಮಧ್ಯೆ ಇಸ್ರೇಲ್ ಸರ್ಕಾರದ ಸ್ಥಿರತೆಯ ಬಗ್ಗೆ ಪ್ರಶ್ನೆಗಳೊಂದಿಗೆ ಗ್ಯಾಲಂಟ್ ವಜಾಗೊಳಿಸುವಿಕೆಯು ಅಂತರರಾಷ್ಟ್ರೀಯ ಮಟ್ಟದಲ್ಲಿ ಕಳವಳ ಉಂಟುಮಾಡಿದೆ ಎಂದು ಅಮೇರಿಕಾ ಹೇಳಿದೆ.

ಅನೇಕ ಇಸ್ರೇಲಿಗಳು ಗಾಜಾದಲ್ಲಿ ಇನ್ನೂ ಒತ್ತೆಯಾಳುಗಳ ಬಗ್ಗೆ ವಿಶೇಷವಾಗಿ ಕಾಳಜಿ ವಹಿಸುತ್ತಾರೆ, ಅವರ ಸುರಕ್ಷಿತ ವಾಪಸಾತಿಗೆ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ನಡೆಸಲಾಗಿದೆ. ಪ್ರತಿಭಟನಕಾರ ಮತ್ತು ಶಿಕ್ಷಕ ಸ್ಯಾಮ್ಯುಯೆಲ್ ಮಿಲ್ಲರ್, ''ಸರ್ಕಾರದಲ್ಲಿ ಗ್ಯಾಲಂಟ್ ಮಾತ್ರ ಸಾಮಾನ್ಯ ವ್ಯಕ್ತಿ'' ಅವರನ್ನು ವಜಾ ಮಾಡಿದ ಕ್ರಮ ಸರಿಯಲ್ಲ ಎಂದರು.

ಮತದಾನ ರಗಳೆ- ಯುವತಿಯಿಂದ ನಿಶ್ಚಿತಾರ್ಥ ರದ್ದು

ನ್ಯೂಯಾರ್ಕ್: ಯುಎಸ್ ಅಧ್ಯಕ್ಷೀಯ ಚುನಾವಣೆಯ ಫಲಿತಾಂಶಗಳು ಬರಲು ಪ್ರಾರಂಭಿಸಿವೆ, ಡೊನಾಲ್ಡ್ ಟ್ರಂಪ್ ಗೆಲುವಿನ ಸಮೀಪದಲ್ಲಿದ್ದಾರೆ. ಅಮೆರಿಕದಲ್ಲಿ ಚುನಾವಣೆಯ ಬಗ್ಗೆ ಜನರಲ್ಲಿ ಎಷ್ಟು ಉತ್ಸಾಹವಿದೆಯೆಂದರೆ ಅವರು ತಮ್ಮ ವೈಯಕ್ತಿಕ ಸಂಬಂಧಗಳನ್ನು ಸಹ ಪಣಕ್ಕಿಡುತ್ತಿದ್ದಾರೆ.

26 ವರ್ಷದ ತನ್ನ ಭಾವಿ ಪತಿ ಯುವತಿ ಮತದಾನ ಮಾಡಲಿಲ್ಲ ಎಂಬ ಕಾರಣಕ್ಕೆ ತನ್ನ ನಿಶ್ಚಿತಾರ್ಥವನ್ನು ಮುರಿದು ಕೊಂಡಿರುವ ಘಟನೆ ನಡೆದಿದೆ. ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್ ರೆಡ್ಡಿಟ್‌ನಲ್ಲಿನ ಪೋಸ್ಟ್‌ನಲ್ಲಿ ಮಹಿಳೆ ಮಹಿಳೆ ನನ್ನ ನಿಶ್ಚಿತ ವರ ಅಧ್ಯಕ್ಷೀಯ ಚುನಾವಣೆಯಲ್ಲಿ ಮತ ಹಾಕಲು ಯಾವುದೇ ಯೋಜನೆಯನ್ನು ಮಾಡಿಲ್ಲ. ನಾನು ನೈತಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದೇನೆ. ಇದಕ್ಕಾಗಿ ನಿಶ್ಚಿತಾರ್ಥವನ್ನು ಮುರಿದರೆ ತಪ್ಪೇ? ಎಂದು ಬರೆದಿದ್ದಾರೆ. ನಾವು ಫ್ಲೋರಿಡಾದಲ್ಲಿ ವಾಸಿಸುತ್ತಿದ್ದೇವೆ ಎಂದು ಮಹಿಳೆ ಹೇಳಿದ್ದಾರೆ. ನನ್ನ ಭಾವಿ ಪತಿ ಮತದಾನ ಮಾಡಲು ನಿರಾಕರಿಸಿದ್ದಾರೆ. ನನಗೆ ಯಾವ ಅಭ್ಯರ್ಥಿಯೂ ಇಷ್ಟವಿಲ್ಲ ಎನ್ನುತ್ತಾರೆ. ನಾನು ಮತ್ತು ಅವರ ಭಾವಿ ಪತಿ ಒಂದೇ ರೀತಿಯ ಸಿದ್ಧಾಂತಗಳನ್ನು ಹೊಂದಿದ್ದೇವೆ, ಆದರೆ ಅವರು ಮತದಾನದ ಬಗ್ಗೆ ಏಕೆ ಅಸಡ್ಡೆ ಹೊಂದಿದ್ದಾರೆಂದು ನನಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಮಹಿಳೆ ಹೇಳಿದರು. ಅಷ್ಟಕ್ಕೂ ಮತದಾನದಿಂದ ದೂರ ಉಳಿಯುವ ಅಗತ್ಯ ಏನಿದೆ? ಎಂದು ಯುವತಿ ಪ್ರಶ್ನಿಸಿದ್ದಾರೆ.



ಮಹಿಳೆಯ ನಡೆಯನ್ನು ಕೆಲವರು ಬೆಂಬಲಿಸಿದ್ದಾರೆ, ಆದರೆ ಅನೇಕ ಜನರು ತನ್ನ ನಿಶ್ಚಿತ ವರನೊಂದಿಗಿನ ಸಂಬಂಧವನ್ನು ಮುರಿದುಕೊಳ್ಳುವುದು ತಪ್ಪು ನಿರ್ಧಾರ ಎಂದು ಹೇಳಿದ್ದಾರೆ. ಈ ಜನರು ಮತ ಚಲಾಯಿಸುವುದು ವೈಯಕ್ತಿಕ ನಿರ್ಧಾರ ಎಂದು ಹೇಳಿದ್ದಾರೆ. ಅವನು ಮತ ಚಲಾಯಿಸಲಿ ಅಥವಾ ಇಲ್ಲದಿರಲಿ, ಅಥವಾ ಅವನು ಯಾರಿಗೆ ಮತ ಹಾಕುತ್ತಾನೆ. ಈ ಆಧಾರದ ಮೇಲೆ ಸಂಬಂಧವನ್ನು ಉಳಿಸಿಕೊಳ್ಳಲು ಅಥವಾ ಮುರಿಯಲು ನಿರ್ಧರಿಸಬಾರದು ಎಂದು ತಿಳಿ ಹೇಳಿದ್ದಾರೆ.

ಅಧ್ಯಾತ್ಮದಿಂದ ವೈಷಮ್ಯ ಹಿಮ್ಮೆಟ್ಟಿಸಲು ಗಡ್ಕರಿ ಕರೆ

ಪುಣೆ: ಭಾರತೀಯ ಅಧ್ಯಾತ್ಮಿಕ ಪರಂಪರೆಯನ್ನು ಮುಂದುವರೆಸಿ ಮಾನವೀಯ ಮೌಲ್ಯಗಳನ್ನು ಆಳವಡಿಸಿ ಎತ್ತಿಹಿಡಿಯುವುದು ಅತ್ಯಂತ ಅಗತ್ಯವಾಗಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ತಿಳಿಸಿದರು. ದೇಶದಲ್ಲಿ ಅಶಾಂತಿ ವೈಷಮ್ಯ ಮೂಡಿಸುವ ಶಕ್ತಿಗಳನ್ನು ಸಹನೆ, ಅಧ್ಯಾತ್ಮಿಕ ಅಂಶಗಳ ಮೂಲಕ ಹಿಮ್ಮೆಟ್ಟಿಸಬೇಕು ಎಂದು ಹೇಳಿದರು.



ನಗರದ ಬಳಿ ಭಾರತದ ಆಧ್ಯಾತ್ಮಿಕ ಪರಂಪರೆಯ ಸಂರಕ್ಷಣೆ ಹಾಗೂ ಉತ್ತೇಜನ ನೀಡುವ ಜೈನ ಸಂಪ್ರದಾಯದ ಮೂಲಕ ಭಾರತೀಯ ಮೌಲ್ಯಗಳನ್ನು ಬಿಂಬಿಸುವ ವಸ್ತು ಸಂಗ್ರಹಾಲಯವನ್ನು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಉದ್ಘಾಟಿಸಿ ಮಾತನಾಡಿದರು. ಅತ್ಯಂತ ನಿರೀಕ್ಷೆ ಮತ್ತು ಆಸಕ್ತಿಗಳೊಂದಿಗೆ ಜೈನ ತತ್ವ, ಭಾರತೀಯ ಪರಂಪರೆಗೆ ಮೀಸಲಾದ ಅತ್ಯಂತ ದೊಡ್ಡ ಚಿಂತನೆಗಳ ಅಭಯ್ ಪ್ರಭಾವನಾ ವಸ್ತು ಸಂಗ್ರಹಾಲಯವು ಭಾರತದ ಆಧ್ಯಾತ್ಮಿಕ ಪರಂಪರೆಯ ಸಂರಕ್ಷಣೆ, ಉತ್ತೇಜನಕ್ಕೆ ಪರಿಣಾಮಕಾರಿಯಾಗಿ ಕೆಲಸ ಮಾಡಲಿದೆ ಎಂದರು. ಅಮರ್ ಪ್ರೇರಣಾ ಟ್ರಸ್ಟ್ ಅಧ್ಯಕ್ಷ ಅಭಯ್ ಫಿರೋಡಿಯಾ ಅವರು ಬಹಳಷ್ಟು ಶ್ರಮವಹಿಸಿ ಸ್ಥಾಪಿಸಿರುವ ವಸ್ತು ಸಂಗ್ರಹಾಲಯವು ಜೈನರ ಮೌಲ್ಯಗಳ ಆಳವಾದ ಅರಿವು, ಭಾರತದ ಮೌಲ್ಯ ವ್ಯವಸ್ಥೆಯಲ್ಲಿ ಅವುಗಳ ಪ್ರಮುಖ ಪರಿಣಾಮ, ಸಮಕಾಲೀನ ಸಮಾಜಕ್ಕೆ ಅದರ ಪ್ರಸ್ತುತತೆಯನ್ನು ಆಳವಾಗಿ ಅರಿಯುವ ಧ್ಯೇಯೋದ್ದೇಶ ಹೊಂದಿದೆ ಎಂದರು. ಸುಮಾರು 3.5 ಲಕ್ಷ ಚದರ ಅಡಿಯ ಹವಾ ನಿಯಂತ್ರಿತ ಸ್ಥಳಾವಕಾಶ ಹೊಂದಿರುವ ಮ್ಯೂಸಿಯಂನ ಪ್ರಶಾಂತ ಪರಿಸರ ಮತ್ತು ಆವಿಷ್ಕಾರಕ ತಂತ್ರಜ್ಞಾನವು ಭಾರತದ ಶ್ರೀಮಂತ ಪರಂಪರೆಯನ್ನು ಉನ್ನತಗೊಳಿಸುವ ಸಾಂಸ್ಕೃತಿಕ ಶ್ರೀಮಂತಿಕೆಯ ಅನುಭವ ಸೃಷ್ಟಿಸುತ್ತದೆ ಎಂದು ತಿಳಿಸಿದರು. ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧ್ಯಾ ನ್ಯಾಯಮೂರ್ತಿ ದಲ್ವೀರ್ ಭಂಡಾರಿ ಮೇವಾರ್ ಮಹಾರಾಜ ಕುಮಾರ್ ಲಕ್ಷ್ಯರಾಜ್ ಸಿಂಗ್, ಪದ್ಮಭೂಷಣ ಅಣ್ಣಾ ಹಜಾರೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಗಾಜಾ ಮೇಲೆ ಮುಂದುವರೆದ ಇಸ್ರೇಲ್ ದಾಳಿ

ಗಾಜಾ: ಗಾಜಾದಲ್ಲಿ ಇಸ್ರೇಲಿ ರಕ್ಷಣಾ ಪಡೆಗಳ ದಾಳಿ ಮುಂದುವರಿದಿದೆ. ಪ್ರತಿದಿನ ಹೆಚ್ಚಿನ ಸಂಖ್ಯೆಯ ಜನರು ಕೊಲ್ಲಲ್ಪಡುತ್ತಿದ್ದಾರೆ, ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಮತ್ತು ಮಕ್ಕಳು ಇದ್ದಾರೆ. ಇತ್ತೀಚಿನ ವೈಮಾನಿಕ ದಾಳಿಯಲ್ಲಿ 17 ಪ್ಯಾಲೆಸ್ತೀನಿಯರು ಸಾವನ್ನಪ್ಪಿದ್ದರೆ, 86 ಜನರು ಗಾಯಗೊಂಡಿದ್ದಾರೆ.

ಉತ್ತರ ಗಾಜಾದ ಭಾಗಶಃ ಕಾರ್ಯನಿರ್ವಹಿಸುತ್ತಿದ್ದ ಕಮಲ್ ಅಡ್ವಾನ್ ಆಸ್ಪತ್ರೆ ಮೇಲೆ ಈ ದಾಳಿ ನಡೆದಿದೆ. ಇದಕ್ಕೂ ಮುನ್ನ ಬೀತ್ ಲಾಹಿಯಾ ಪ್ರದೇಶದಲ್ಲಿ ನಡೆದ ದಾಳಿಯಲ್ಲಿ 7 ಮಂದಿ ಸಾವನ್ನಪ್ಪಿದ್ದಾರೆ. ಇಲ್ಲಿ ಇಸ್ರೇಲ್ ಸೇನೆಯ ದಾಳಿ ಎಷ್ಟು ಭಯಂಕರವಾಗಿದೆ ಎಂದರೆ ಎಲ್ಲೆಂದರಲ್ಲಿ ಸರ್ವನಾಶದ ದೃಶ್ಯಗಳು ಕಾಣಿಸಿವೆ. ಗಾಜಾದಲ್ಲಿ ಇಸ್ರೇಲ್‌ನ ವೈಮಾನಿಕ ದಾಳಿಯಲ್ಲಿ ಕನಿಷ್ಠ 30 ಜನರು, ಹೆಚ್ಚಾಗಿ ಮಹಿಳೆಯರು ಮತ್ತು ಮಕ್ಕಳು ಸಾವನ್ನಪ್ಪಿದ್ದಾರೆ ಎಂದು ಪ್ಯಾಲೇಸ್ಟಿನಿಯನ್ ವೈದ್ಯಕೀಯ ಅಧಿಕಾರಿಗಳು ಹೇಳಿದ್ದಾರೆ.

ಮಂಗಳವಾರದ ದಾಳಿಯಲ್ಲಿ ಗಾಜಾ ಪಟ್ಟಿಯಲ್ಲಿ ನಾಲ್ವರು ಮಕ್ಕಳು ಮತ್ತು ಇಬ್ಬರು ಮಹಿಳೆಯರು ಸೇರಿದಂತೆ 10 ಜನರು ಸಾವನ್ನಪ್ಪಿದ್ದರೆ, ಸೋಮವಾರ ತಡರಾತ್ರಿ ನಡೆದ ದಾಳಿಯಲ್ಲಿ ಬೀಟ್ ಲಾಹಿಯಾ ನಗರದಲ್ಲಿ ಕನಿಷ್ಠ 20 ಜನರು ಸಾವನ್ನಪ್ಪಿದ್ದಾರೆ ಎಂದು ಅವರು ಹೇಳಿದ್ದಾರೆ.

ತಕ್ಷಣದ ಪ್ರತಿಕ್ರಿಯೆ ಬಂದಿಲ್ಲ

ಗಾಜಾದ ಆರೋಗ್ಯ ಸಚಿವಾಲಯದ ತುರ್ತು ಸೇವೆ ಬಿಡುಗಡೆ ಮಾಡಿದ ಸತ್ತವರ ಪಟ್ಟಿಯಲ್ಲಿ ಎಂಟು ಮಹಿಳೆಯರು ಮತ್ತು ಆರು ಮಕ್ಕಳು ಸೇರಿದ್ದಾರೆ. ಆದರೆ ಇಸ್ರೇಲ್ ಸೇನೆಯಿಂದ ಯಾವುದೇ ತಕ್ಷಣದ ಪ್ರತಿಕ್ರಿಯೆ ಬಂದಿಲ್ಲ.

ಗಾಯಾಳುಗಳನ್ನು ಹತ್ತಿರದ ಆಸ್ಪತ್ರೆಗೆ ಕರೆತರಲಾಗಿದೆ. ಸೋಮವಾರ ಇಸ್ರೇಲ್ ಬೀಟ್ ಲಾಹಿಯಾ ನಗರದ ಕಟ್ಟಡದ ಮೇಲೆ ದಾಳಿ ಮಾಡಿದೆ, ಇಲ್ಲಿ ಹಲವು ಕುಟುಂಬಗಳು ಆಶ್ರಯ ಪಡೆದಿವೆ ಎಂದು ಆಸ್ಪತ್ರೆಯ ನಿರ್ದೇಶಕ ಹುಸ್ಸಾಮ್ ಅಬು ಸಫಿಯಾ ಹೇಳಿದ್ದಾರೆ.

ತಿರುಪತಿ ದೇವಸ್ಥಾನಕ್ಕೆ ಹೊಸ ಅಧ್ಯಕ್ಷರ ನೇಮಕ

ಆಂಧ್ರ ಪ್ರದೇಶ: ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಟ್ರಸ್ಟಿಗಳ ಮಂಡಳಿಯ 54ನೇ ಅಧ್ಯಕ್ಷರಾಗಿ ಬಿ.ಆರ್.ನಾಯ್ಡು ಅವರು ಬುಧವಾರ ಬೆಳಿಗ್ಗೆ ತಿರುಮಲ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಟಿಟಿಡಿ ಕಾರ್ಯನಿರ್ವಾಹಕ ಅಧಿಕಾರಿ ಶ್ಯಾಮಲಾ ರಾವ್ ಅವರು ಹೊಸ ಅಧ್ಯಕ್ಷರಿಗೆ ಪ್ರಮಾಣ ವಚನ ಬೋಧಿಸಿದರು.

ಬಿ.ಆರ್.ನಾಯ್ಡು ಮೊದಲಿಗೆ ವರಾಹ ಸ್ವಾಮಿಯ ದರ್ಶನ ಪಡೆದು, ವೈಕುಂಠಂ ಕ್ಯೂ ಕಾಂಪ್ಲೆಕ್ಸ್ 1ರ ಮೂಲಕ ದೇವಾಲಯದೊಳಗೆ ಪ್ರವೇಶಿಸಿದರು. ವೆಂಕಟೇಶ್ವರನ ದರ್ಶನದ ನಂತರ, ಪುರೋಹಿತರು ರಂಗನಾಯಕುಲ ಮಂಟಪದಲ್ಲಿ ವೈದಿಕ ಮಂತ್ರಗಳೊಂದಿಗೆ ಆಶೀರ್ವಾದ ನೀಡಿದರು. ತಿರುಪತಿ ಲಡ್ಡು ಪ್ರಸಾದದ ಬಗ್ಗೆ ವಿವಾದ ಕಾಣಿಸಿಕೊಂಡ ಒಂದು ತಿಂಗಳ ನಂತರ ಶ್ರೀ ವೆಂಕಟೇಶ್ವರ ದೇವಸ್ಥಾನಕ್ಕೆ ಹೊಸ ಅಧ್ಯಕ್ಷರ ನೇಮಕವಾಗಿರುವುದು ವಿಶೇಷ.

ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪ್ರಸಾದವಾಗಿ ನೀಡುವ ಲಡ್ಡು ತಯಾರಿಸಲು ಪ್ರಾಣಿಗಳ ಕೊಬ್ಬನ್ನು ಬಳಸಲಾಗಿದೆ ಎಂಬ ಆರೋಪದ ಬಗ್ಗೆ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ಅಕ್ಟೋಬರ್ 4ರಂದು ಸ್ವತಂತ್ರ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿತು. ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ಕೆ.ವಿ.ವಿಶ್ವನಾಥನ್ ಅವರ ನ್ಯಾಯಪೀಠವು ತಿರುಮಲ ಪ್ರಸಾದದಲ್ಲಿ ವಿಶ್ವದಾದ್ಯಂತದ ಕೋಟ್ಯಂತರ ಭಕ್ತರ ಭಾವನೆಗಳು ಅಡಕವಾಗ

ರೀಮೇಕ್‌ಗೆ ಹೀರೋ ಬದಲು ಸ್ಟಾರ್ ಹೀರೋ

ಮಲಯಾಳಂನ 'ಆವೇಶಂ' ಸಿನಿಮಾ ಭಾರಿ ಹಿಟ್ ಸಿನಿಮಾ, ಇದೀಗ ಈ ಸಿನಿಮಾ ತೆಲುಗಿಗೆ ರೀಮೇಕ್ ಆಗುತ್ತಿದೆ. ಆದರೆ ಈ ಹಿಂದೆ ನಿಶ್ಚಯವಾಗಿದ್ದ ನಾಯಕ ನಟ ಬದಲಾಗಿ ಆ ಸ್ಥಾನಕ್ಕೆ ಸ್ಟಾರ್ ನಟ ಬಂದಿದ್ದಾರೆ. ಮಲಯಾಳಂ ಚಿತ್ರರಂಗದ ಈ ವರ್ಷದ ಬ್ಲಾಕ್ ಬಸ್ಟರ್ ಸಿನಿಮಾಗಳಲ್ಲಿ ಒಂದು 'ಆವೇಶಂ'.



ಫಹಾದ್ ಫಾಸಿಲ್ ಮುಖ್ಯ ಪಾತ್ರದಲ್ಲಿ ನಟಿಸಿದ್ದ ಈ ಸಿನಿಮಾ ಕೇರಳದಲ್ಲಿ ಮಾತ್ರವಲ್ಲದೆ, ಬೆಂಗಳೂರು, ಮುಂಬೈಗಳಲ್ಲಿಯೂ ಭಾರಿ ಹಿಟ್ ಎನಿಸಿಕೊಂಡಿತ್ತು. ಈ ಸಿನಿಮಾ ಒಟಿಟಿಯಲ್ಲಿ ಬಿಡುಗಡೆ ಆದ ಬಳಿಕವೂ ಸಹ ಚಿತ್ರಮಂದಿರಗಳಲ್ಲಿ ಹೌಸ್ ಫುಲ್ ಪ್ರದರ್ಶನ ಕಂಡಿತ್ತು. ಬೆಂಗಳೂರಿನ ಒಬ್ಬ ರೌಡಿಯ ಕತೆಯನ್ನು ಒಳಗೊಂಡಿದ್ದ ಈ ಸಿನಿಮಾ ಕತೆ ಸರಳವಾಗಿದ್ದರು ನಟನೆ, ಕಾಮಿಡಿ ಮೂಲಕ ಜನರ ಮನಸ್ಸು ಗೆದ್ದಿತ್ತು. ಇದೀಗ ಈ ಸಿನಿಮಾ ತೆಲುಗಿಗೆ ರೀಮೇಕ್ ಆಗುತ್ತಿದೆ. 'ಆವೇಶಂ' ಸಿನಿಮಾ ತೆಲುಗಿಗೆ ರೀಮೇಕ್ ಆಗುತ್ತಿರುವ ಸುದ್ದಿ ಹೊಸದೇನಲ್ಲ. ಕಳೆದ ತಿಂಗಳೆ ಈ ಬಗ್ಗೆ ಸುದ್ದಿ ಹರಿದಾಡಿತ್ತು, ಆದರೆ ಹೊಸ ಸುದ್ದಿಯೆಂದರೆ ತೆಲುಗು ರೀಮೇಕ್‌ನಲ್ಲಿ ನಟಿಸುತ್ತಿರುವ ನಾಯಕ ಬದಲಾಗಿದ್ದಾರೆ. ಈ ಮೊದಲು, 'ಆವೇಶಂ' ತೆಲುಗು ರೀಮೇಕ್‌ನಲ್ಲಿ 'ಟಿಲ್ಲು' ಸಿನಿಮಾ ಖ್ಯಾತಿಯ ಸಿದ್ದು ಜೊನ್ನಲಗಡ್ಡ ನಟಿಸಲಿದ್ದಾರೆ ಎನ್ನಲಾಗಿತ್ತು. ಆದರೆ ಈಗ ಆ ಸ್ಥಾನಕ್ಕೆ ತೆಲುಗಿನ ಸ್ಟಾರ್ ನಟನ ಎಂಟ್ರಿ ಆಗಿದೆ. 'ಆವೇಶಂ' ಸಿನಿಮಾದ ತೆಲುಗು ರೀಮೇಕ್‌ನಲ್ಲಿ ರವಿತೇಜ ಮುಖ್ಯ ಪಾತ್ರದಲ್ಲಿ ನಟಿಸಲಿದ್ದಾರೆ. ಫಹಾದ್ ಫಾಸಿಲ್ ನಟಿಸಿರುವ ರಂಗ ಪಾತ್ರದಲ್ಲಿ ರವಿತೇಜ ನಟಿಸಿದ್ದಾರೆ.

ನಾನು ಕೆಲವು ತಪ್ಪುಗಳನ್ನು ಮಾಡಿದ್ದೇನೆ

ಸೌತ್ ಸಿನಿಮಾಗಳಲ್ಲಿ ಮಿಂಚಿದ್ದ ನಟಿ ಸಮಂತಾ ಈಗ ಬಾಲಿವುಡ್‌ನತ್ತ ಮುಖ ಮಾಡಿದ್ದಾರೆ. 'ಹನಿ ಬನಿ ಸಿಟಾಡೆಲ್' ಸಿರೀಸ್ ಮೂಲಕ ನಟಿ ಸದ್ದು ಮಾಡುತ್ತಿದ್ದಾರೆ. ಇನ್ನೂ 'ಪುಷ್ಪ' ಚಿತ್ರದಲ್ಲಿ ಹಿಟ್ ಸಾಂಗ್ ಕೊಟ್ಟೇಲೆ ಅವರ ಕೆರಿಯರ್‌ನಲ್ಲಿ ಹೇಳಿಕೊಳ್ಳುವಂತಹ ಸಿನಿಮಾ ಯಶಸ್ಸು ಸಿಗಲಿಲ್ಲ. ಈ ಕುರಿತು ನಟಿ ಮಾತನಾಡಿದ್ದಾರೆ. ಸೋಶಿಯಲ್ ಮೀಡಿಯಾದಲ್ಲಿ ಅಭಿಮಾನಿಗಳ ಸಂವಾದ ಮಾಡುವಾಗ ನಟಿ ಕೆರಿಯರ್ ಕುರಿತು ರಿಯಾಕ್ಟ್ ಮಾಡಿದ್ದಾರೆ. ಪ್ರತಿಯೊಂದು ಪಾತ್ರವನ್ನೂ ಚಾಲೆಂಜಿಂಗ್ ಆಗಿ ತೆಗೆದುಕೊಳ್ಳಬೇಕು ಎಂದು ನಾನು ನನಗೆ ಪ್ರಾಮಿಸ್ ಮಾಡಿಕೊಂಡಿದ್ದೇನೆ. ನಾನು ಕೆಲವು ತಪ್ಪುಗಳನ್ನು ಮಾಡಿದ್ದೇನೆ. ಎಲ್ಲಾ ಸಮಯದಲ್ಲೂ ಗೆಲುವು ಸಿಕ್ಕಿಲ್ಲ. ನಾನು ನನ್ನ ವೈಫಲ್ಯಗಳನ್ನು ಒಪ್ಪಿಕೊಳ್ಳುತ್ತೇನೆ ಎಂದು ನಟಿ ಹೇಳಿದ್ದಾರೆ. ಇದರ ಜೊತೆಗೆ ಕೊನೆಯ ಕೆಲವು ಸಿನಿಮಾಗಳು ಅಂದುಕೊಂಡಂತೆ ಮೂಡಿ ಬಂದಿಲ್ಲ ಎಂದು ಸಿನಿಮಾ ಸೋಲಿನ ಬಗ್ಗೆ ಅವರು ಒಪ್ಪಿಕೊಂಡಿದ್ದಾರೆ. ಅಂದಹಾಗೆ, ವರುಣ್ ಧವನ್ ನಟನೆಯ 'ಹನಿ ಬನಿ ಸಿಟಾಡೆಲ್' ವೆಬ್ ಸಿರೀಸ್‌ನಲ್ಲಿ ಸಮಂತಾ ಆಯಕ್ಷನ್ ಅವತಾರ ತಾಳಿದ್ದಾರೆ. ಈ ಹಿಂದೆ ಎಂದೂ ನಟಿಸಿರದ ಪಾತ್ರದಲ್ಲಿ ಸ್ಯಾಮ್ ಕಾಣಿಸಿಕೊಂಡಿದ್ದಾರೆ. ಇದೇ ನವೆಂಬರ್ 7ರಂದು ಒಟಿಟಿಯಲ್ಲಿ ಈ ವೆಬ್ ಸರಣಿ ರಿಲೀಸ್ ಆಗಲಿದೆ. ಇನ್ನೂ ನಾಗಚೈತನ್ಯ ಜೊತೆ ಸಮಂತಾ 2021ರಲ್ಲಿ ಡಿವೋರ್ಸ್ ಪಡೆದುಕೊಂಡರು. ಅಲ್ಲಿಂದ ಅವರು ಸಿನಿಮಾಗಿಂತ ವೈಯಕ್ತಿಕ ವಿಚಾರವಾಗಿಯೇ ಸುದ್ದಿಯಾಗುತ್ತಿದ್ದರು. ಅನಾರೋಗ್ಯದ ಬಳಲುತ್ತಿದ್ದ ನಟಿ ಈಗ ಚೇತರಿಸಿಕೊಂಡಿದ್ದಾರೆ. ಮತ್ತೆ ಸಿನಿಮಾಗಳತ್ತ ಮುಖ ಮಾಡಿದ್ದಾರೆ.

ಸಿನಿಮಾದ ಮೇಲೆ ಫ್ಯಾನ್ಸ್‌ಗೆ ಬೆಟ್ಟದಷ್ಟು ನಿರೀಕ್ಷೆ

ರಾಮಾಯಣ ಚಿತ್ರದ ಮೊದಲ ಟೈಟಲ್ ರಿಲೀಸ್

ನ್ಯಾಷನಲ್ ಸ್ಟಾರ್ ಯಶ್ ನಟನೆಯ 'ರಾಮಾಯಣ' ಸಿನಿಮಾದ ಫಸ್ಟ್‌ಲುಕ್ ರಿವೀಲ್ ಆಗಿದೆ. ಇದೀಗ 'ರಾಮಾಯಣ' ಸಿನಿಮಾ 2 ಭಾಗಗಳಲ್ಲಿ ಮೂಡಿ ಬರಲಿದ್ದು, ಈ ಕುರಿತು ಅಧಿಕೃತವಾಗಿ ಚಿತ್ರತಂಡ ತಿಳಿಸಿದೆ. ರಾಮನಾಗಿ ರಣ್‌ಬೀರ್ ಕಪೂರ್, ಸೀತೆಯ ಪಾತ್ರದಲ್ಲಿ ಸಾಯಿ ಪಲ್ಲವಿ ಮತ್ತು ರಾವಣನಾಗಿ ಕನ್ನಡದ ನಟ ಯಶ್ ಅವರು ಜೀವ ತುಂಬಲಿದ್ದಾರೆ. 'ರಾಮಾಯಣ' 2 ಭಾಗಗಳಲ್ಲಿ ಮೂಡಿ ಬರಲಿದೆ. ಇದರ ರಿಲೀಸ್ ಬಗ್ಗೆ ಚಿತ್ರತಂಡ ಮಾಹಿತಿ ಹಂಚಿಕೊಂಡಿದೆ. ರಾಮಾಯಣ ಮೊದಲ ಭಾಗ ದೀಪಾವಳಿಯಂದು 2026ರಲ್ಲಿ ರಿಲೀಸ್ ಆಗಲಿದೆ. ಎರಡನೇ ಭಾಗ ದೀಪಾವಳಿಯಂದು 2027ರಲ್ಲಿ ಸಿನಿಮಾ ರಿಲೀಸ್ ಆಗಲಿದೆ ಎಂದು ಚಿತ್ರತಂಡ ಅಧಿಕೃತವಾಗಿ ತಿಳಿಸಿದೆ. ಇನ್ನೂ ರಾವಣನ ಪಾತ್ರದಲ್ಲಿ ನಟಿಸುವ ಬಗ್ಗೆ ಯಶ್ ಅಧಿಕೃತವಾಗಿ ಇತ್ತೀಚೆಗೆ ತಿಳಿಸಿದ್ದಾರೆ. ನಿತೇಶ್ ತಿವಾರಿ ಈ ಸಿನಿಮಾವನ್ನು ನಿರ್ದೇಶನ ಮಾಡುತ್ತಿದ್ದಾರೆ. ನಿರ್ಮಾಪಕ ನಮಿತ್ ಮಲ್ಹೋತ್ರಾ ಜೊತೆ ಕೋ- ಪ್ರೊಡ್ಯೂಸರ್ ಆಗಿ ಯಶ್ ಕೂಡ ಕೈಜೋಡಿಸಿದ್ದಾರೆ.

ಮಹೇಶ್ ಬಾಬುಗೆ ಅವಮಾನ

ನಟ ಮಹೇಶ್ ಬಾಬು ಅವರು ಹಲವು ವರ್ಷಗಳಿಂದ ಚಿತ್ರರಂಗದಲ್ಲಿ ಇದ್ದಾರೆ. ಅವರಿಗೆ ದೊಡ್ಡ ಅಭಿಮಾನಿ ಬಳಗ ಇದೆ. ಆದರೆ ನಿನ್ನೆ ಮೊನ್ನೆ ಬಂದ ಹೊಸ ಹೀರೋಗಳೆಲ್ಲ ಮಹೇಶ್ ಬಾಬು ಅವರಿಗೆ ಅವಮಾನ ಮಾಡಿದರೆ ಅವರ ಫ್ಯಾನ್ಸ್ ಖಂಡಿತವಾಗಿಯೂ ಸಹಿಸಿಕೊಳ್ಳುವುದಿಲ್ಲ. 'ಹನುಮಾನ್' ಸಿನಿಮಾದ ನಟ ತೇಜ ಸಜ್ಜಾ ಅವಮಾನ ಮಾಡಿದ್ದಾರೆ. ಮಹೇಶ್ ಬಾಬು ಫ್ಯಾನ್ಸ್ ತಿರುಗಿಬಿದ್ದಿದ್ದಾರೆ. 2024ರ ಆರಂಭದಲ್ಲೇ ಟಾಲಿವುಡ್ ಬಾಕ್ಸ್ ಆಫೀಸ್‌ನಲ್ಲಿ ಕ್ಲ್ಯಾಶ್ ಆಗಿತ್ತು. ಸ್ಟಾರ್ ನಟರ ಸಿನಿಮಾಗಳ ಎದುರಲ್ಲಿ ಹೊಸ ಹೀರೋಗಳ ಸಿನಿಮಾ ಕೂಡ ಬಿಡುಗಡೆ ಆಗಿತ್ತು. ತೇಜ ಸಜ್ಜಾ ನಟನೆಯ 'ಹನುಮಾನ್' ಹಾಗೂ ಮಹೇಶ್ ಬಾಬು ಅಭಿನಯದ 'ಗುಂಟೂರು ಖಾರಂ' ಸಿನಿಮಾಗಳು ಏಕಕಾಲಕ್ಕೆ ರಿಲೀಸ್ ಆಗಿದ್ದವು. ಆದರೆ ಗೆದ್ದಿದ್ದು 'ಹನುಮಾನ್' ಸಿನಿಮಾ. ಹೌದು, ತೇಜ ಸಜ್ಜಾ ಅವರು ಆ ಸಿನಿಮಾ ಮೂಲಕ ಭರ್ಜರಿ ಯಶಸ್ಸು ಕಂಡರು. ಸ್ಟಾರ್ ಹೀರೋಗಳಿಗೆ ಅವರು ಟಕ್ಕರ್ ನೀಡಿದರು. ಆದರೆ ಆ ಯಶಸ್ಸಿನ ಅಹಂ ಅವರ ತಲೆಗೆ ಏರಿದಂತಿದೆ. ಅದಕ್ಕೆ ಒಂದು ನಿದರ್ಶನ ಸಿಕ್ಕಿದೆ. ಪ್ರಶಸ್ತಿ ಪ್ರದಾನ ಕಾರ್ಯಕ್ರಮವೊಂದರಲ್ಲಿ ರಾಣಾ ದಗ್ಗುಬಾಟಿ ಮತ್ತು ತೇಜ ಸಜ್ಜಾ ಅವರು ಜೊತೆಯಾಗಿ ವೇದಿಕೆ ಹಂಚಿಕೊಂಡಿದ್ದರು. ಅವರಿಬ್ಬರ ನಡುವೆ ನಡೆದ ಸಂಭಾಷಣೆಯಿಂದ ಮಹೇಶ್ ಬಾಬು ಅವರಿಗೆ ಅವಮಾನ ಆಗಿದೆ. ಅವರಿಬ್ಬರು ಮಾತನಾಡುವಾಗ 2024ರ ಸಂಕ್ರಾಂತಿ ಕ್ಲ್ಯಾಶ್ ಮತ್ತು ಮಹೇಶ್ ಬಾಬು ಬಗ್ಗೆ ಪ್ರಸ್ತಾಪ ಆಗಿದೆ. ಆ ಮಾತುಕಥೆಯಿಂದ 'ಪ್ರಿನ್ಸ್' ಅಭಿಮಾನಿಗಳಿಗೆ ನೋವಾಗಿದೆ.

'ಈಗಲೂ ಇವರು ಬದಲಾಗಿಲ್ಲ. ವಿವಾದಗಳಿಂದ ದೂರ ಇದ್ದಾರೆ. ಸೌಮ್ಯವಾಗಿ ಮಾತನಾಡುತ್ತಾರೆ, ಲಕ್ಷಾಂತರ ಜನರಿಗೆ ಇಷ್ಟ ಆಗಿದ್ದಾರೆ. ಲವರ್ ಬಾಯ್ ಮತ್ತು ಆಯಕ್ಷನ್ ಸ್ಟಾರ್..' ಎಂದು ರಾಣಾ ದಗ್ಗುಬಾಟಿ ಹೇಳುತ್ತಿರುವಾಗ ಅರ್ಧಕ್ಕೆ ತಡೆದ ತೇಜ ಸಜ್ಜಾ ಅವರು 'ನನ್ನನ್ನು ಜಾಸ್ತಿ ಹೊಗಳಬೇಡಿ' ಎಂದರು. ಅದಕ್ಕೆ ಉತ್ತರಿಸಿದ ರಾಣಾ ದಗ್ಗುಬಾಟಿ, 'ನಾನು ಹೇಳಿದ್ದು ಮಹೇಶ್ ಬಾಬು ಬಗ್ಗೆ. ಆದರೆ ಈ ಮಾತುಗಳು ನಿಮಗೂ ಅನ್ವಯ ಆಗುತ್ತವೆ' ಎಂದರು. 'ಮಹೇಶ್ ಬಾಬು ಸೂಪರ್ ಸ್ಟಾರ್. ನೀವು ಸೂಪರ್ ಹೀರೋ. ನಿಮ್ಮಿಬ್ಬರ ಸಿನಿಮಾಗಳು ಕೂಡ ಸಂಕ್ರಾಂತಿಗೆ ರಿಲೀಸ್ ಆಗಿತ್ತು' ಎಂದು ರಾಣಾ ದಗ್ಗುಬಾಟಿ ಹೇಳಿದರು. 'ಸಂಕ್ರಾಂತಿ ವಿಷಯದ ಬಗ್ಗೆ ಮಾತನಾಡೋದು ಬೇಡ' ಎಂದು ತೇಜ ಸಜ್ಜಾ ಹೇಳಿದರು. 'ಯಾಕೆ ಅದು ಸೂಕ್ಷ್ಮವಾದ ವಿಷಯವೇ' ಎಂದು ರಾಣಾ ಪ್ರಶ್ನೆ ಮಾಡಿದರು. ಅವರಿಬ್ಬರ ನಡುವಿನ ಈ ಮಾತುಕಥೆಯಿಂದ ಮಹೇಶ್ ಬಾಬು ಅವರಿಗೆ ಅವಮಾನ ಆಗಿದೆ ಎಂದು ಫ್ಯಾನ್ಸ್ ಕ್ಲಾಸ್ ತೆಗೆದುಕೊಂಡಿದ್ದಾರೆ.

ಜಾಹ್ನವಿ ಪಾತ್ರದಲ್ಲಿ ಮೋಡಿ

ಉದ್ಯಮಿ ಪ್ರತ್ಯಕ್ಷ್ ಜೊತೆ ಚಂದನಾ

ಮದುವೆ ಡೇಟ್ ಫಿಕ್ಸ್

'ಬಿಗ್ ಬಾಸ್ ಕನ್ನಡ ಸೀಸನ್ 7, 'ಲಕ್ಷ್ಮಿ ನಿವಾಸ' ಖ್ಯಾತಿಯ ಚಂದನಾ ಅನಂತಕೃಷ್ಣ ಅವರು ಅಭಿಮಾನಿಗಳಿಗೆ ಶುಭ ಸುದ್ದಿ ಕೊಟ್ಟಿದ್ದಾರೆ. ಉದ್ಯಮಿ ಪ್ರತ್ಯಕ್ಷ್ ಎಂಬುವವರ ಜೊತೆ ಹಸೆಮಣೆ ಏರಲು ನಟಿ ಸಜ್ಜಾಗಿದ್ದಾರೆ. ಕಿರುತೆರೆಯಲ್ಲಿ ಚಿನ್ನುಮರಿ ಅಲಿಯಾಸ್ ಜಾಹ್ನವಿ ಪಾತ್ರದಲ್ಲಿ ಮೋಡಿ ಮಾಡುತ್ತಿರುವ ಚಂದನಾ ಇದೀಗ ಹೊಸ ಬಾಳಿಗೆ ಕಾಲಿಡಲು ರೆಡಿಯಾಗಿದ್ದಾರೆ. ಕುಟುಂಬಸ್ಥರು ನಿಶ್ಚಯಿಸಿದ ಮದುವೆ ಇದಾಗಿದ್ದು, ಉದ್ಯಮಿ ಪ್ರತ್ಯಕ್ಷ್ ಜೊತೆ ಇದೇ ನವೆಂಬರ್ 28ಕ್ಕೆ ಬೆಂಗಳೂರಿನಲ್ಲಿ ಚಂದನಾ ಮದುವೆ ಜರುಗಲಿದೆ. ಈ ಮದುವೆಯಲ್ಲಿ ಕುಟುಂಬಸ್ಥರು, ಆಪ್ತರು, ಕಿರುತೆರೆಯ ಕಲಾವಿದರು ಭಾಗಿಯಾಗಲಿದ್ದಾರೆ. ಇನ್ನೂ ಪ್ರತ್ಯಕ್ಷ್ ಅವರು ಉದ್ಯಮಿಯಾಗಿದ್ದಾರೆ. ವಿಶೇಷ ಅಂದರೆ, ಪ್ರತ್ಯಕ್ಷ್ ಪೋಷಕರು ಕೂಡ ಚಿತ್ರರಂಗದಲ್ಲಿ ಗುರುತಿಸಿಕೊಂಡಿದ್ದಾರೆ.

ದಿವಂಗತ ಉದಯ್ ಹುತ್ತಿನಗದ್ದೆ ಅವರು ಡಾ.ರಾಜ್‌ಕುಮಾರ್ ಜೊತೆ 'ದೇವತಾ ಮನುಷ್ಯ' ಚಿತ್ರದಲ್ಲಿ ನಟಿಸಿದ್ದರು. 'ಆರಂಭ', 'ಅಗ್ನಿಪರ್ವ', 'ಶುಭ ಮಿಲನ' ಸೇರಿದಂತೆ ಹಲವು ಸಿನಿಮಾಗಳಲ್ಲಿ ಅವರು ನಟಿಸಿದರು. ಅವರ ಪತ್ನಿ ಲಲಿತಾಂಜಲಿ ಉದಯ್ ಕೂಡ ಹಿರಿತೆರೆ, ಕಿರುತೆರೆಯಲ್ಲಿ ಸಕ್ರಿಯರಾಗಿದ್ದಾರೆ. ಇನ್ನೂ ರಾಜ ರಾಣಿ, ಹೂ ಮಳೆ, ಬಿಗ್ ಬಾಸ್ ಕನ್ನಡ ಸೀಸನ್ 7 ಶೋ ಸೇರಿದಂತೆ ಹಲವು ಪ್ರಾಜೆಕ್ಟ್‌ಗಳಲ್ಲಿ ಚಂದನಾ ಕಾಣಿಸಿಕೊಂಡಿದ್ದಾರೆ. ಪ್ರಸ್ತುತ 'ಲಕ್ಷ್ಮಿ ನಿವಾಸ' ಸೀರಿಯಲ್‌ನಲ್ಲಿ ಜಾಹ್ನವಿ ಪಾತ್ರದ ಮೂಲಕ ಅಭಿಮಾನಿಗಳ ಮನಗೆದ್ದಿದ್ದಾರೆ. ಜೊತೆಗೆ 'ಭಾವ ತೀರ ಯಾನ' ಸಿನಿಮಾದಲ್ಲಿ ಧೃತಿ ಪಾತ್ರಕ್ಕೆ ನಟಿ ಜೀವ ತುಂಬಿದ್ದಾರೆ.

ಅತಿ ಕಡಿಮೆ ಮೂಲ ಬೆಲೆ ಘೋಷಿಸಿಕೊಂಡ ಪೃಥ್ವಿ-ಸರ್ಫರಾಜ್

ಐಪಿಎಲ್ 2025 ರ ಮೆಗಾ ಹರಾಜಿನಲ್ಲಿ 1574 ಆಟಗಾರರು ನೋಂದಾಯಿಸಿಕೊಂಡಿದ್ದಾರೆ. ಪೃಥ್ವಿ ಶಾ ಮತ್ತು ಸರ್ಫರಾಜ್ ಖಾನ್ ಅವರು ತಮ್ಮ ಮೂಲ ಬೆಲೆಯನ್ನು ಕೇವಲ 75 ಲಕ್ಷ ರೂಪಾಯಿಗಳಿಗೆ ನಿಗದಿಪಡಿಸಿದ್ದು ಆಶ್ಚರ್ಯವನ್ನುಂಟು ಮಾಡಿದೆ. ಇದು ಅವರ ಇತ್ತೀಚಿನ ಪ್ರದರ್ಶನ ಮತ್ತು ಹರಾಜಿನಲ್ಲಿ ಮಾರಾಟವಾಗದೆ ಉಳಿಯುವ ಆತಂಕದಿಂದಾಗಿ ಈ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಊಹಿಸಲಾಗಿದೆ. ನವೆಂಬರ್ 24 ಮತ್ತು 25 ರಂದು ಎಲ್ಲಾ ತಂಡಗಳು ಈ ಆಟಗಾರರನ್ನು ಬಿಡ್ ಮಾಡುತ್ತವೆ. ಅದಕ್ಕೂ ಮೊದಲು ಎಲ್ಲಾ ಆಟಗಾರರು ತಮ್ಮ ಮೂಲ ಬೆಲೆಗಳನ್ನು ಘೋಷಿಸಿದ್ದಾರೆ. ಪಟ್ಟಿಯಲ್ಲಿ ಭಾರತದ ಭಾಗಶಃ ಆಟಗಾರರು ತಮ್ಮ ಮೂಲ ಬೆಲೆಯನ್ನು 2 ಕೋಟಿಗೆ ಇರಿಸಿದ್ದರೆ, ಇಬ್ಬರು ಆಟಗಾರರು ಮಾತ್ರ ತಮ್ಮ ಮೂಲ ಬೆಲೆಯಲ್ಲಿ ಲಕ್ಷದಲ್ಲಿ ಇರಿಸಿಕೊಂಡಿದ್ದಾರೆ. ಅತಿ ಕಡಿಮೆ ಮೂಲ ಬೆಲೆಯನ್ನು ಘೋಷಿಸಿಕೊಂಡ ಕ್ಯಾಪ್ಡ್ ಆಟಗಾರರೆಂದರೆ ಅದು ಪೃಥ್ವಿ ಶಾ ಹಾಗೂ ಸರ್ಫರಾಜ್ ಖಾನ್. ಈ ಇಬ್ಬರು ಆಟಗಾರರು ಈಗಾಗಲೇ ಟೀಂ ಇಂಡಿಯಾಕ್ಕೆ ಪದಾರ್ಪಣೆ ಮಾಡಿದ್ದಾರೆ. ಇದರ ಜೊತೆಗೆ ಐಪಿಎಲ್‌ನಲ್ಲಿ ಈ ಆಟಗಾರರ ಮೇಲೆ ಕೋಟಿಗಳ ಮಳೆಯೂ ಸುರಿದಿದೆ. ಆದಾಗ್ಯೂ ಈ ಆಟಗಾರರು ಮುಂದಿನ ಐಪಿಎಲ್ ಹರಾಜಿಗೆ ತಮ್ಮ ಮೂಲ ಬೆಲೆಯನ್ನು ಕೇವಲ 75 ಲಕ್ಷ ರೂಗಳಿಗೆ ಇರಿಸಿದ್ದಾರೆ. ಇದಕ್ಕೆ ಕಾರಣವೂ ಇದ್ದು, ಪ್ರಸ್ತುತ ಈ ಇಬ್ಬರ ಪ್ರದರ್ಶನ ಅಷ್ಟು ಗಮನಾರ್ಹವಾಗಿಲ್ಲ. ಅಲ್ಲದೆ ತಮ್ಮ ಮೂಲ ಬೆಲೆಯನ್ನು ಹೆಚ್ಚಿಸಿದರೆ ಯಾವುದೇ ತಂಡವು ತನ್ನನ್ನು ಖರೀದಿಸಲು ಬಯಸುವುದಿಲ್ಲ ಎಂಬ ಆತಂಕ ಇವರಿಗಿದೆ. ಹೀಗಾಗಿ ಹಳೆ ಸಂಬಳಕ್ಕಿಂತ 10 ಪಟ್ಟು ಕಡಿಮೆ ಮಾಡಿದ್ದಾರೆ. ಐಪಿಎಲ್ 2024 ರವರೆಗೆ ಡೆಲ್ಲಿ ಕ್ಯಾಪಿಟಲ್ಸ್ ಪರ ಆಡುತ್ತಿದ್ದ ಪೃಥ್ವಿ ಶಾಗೆ ಕಳೆದ 2 ಸೀಸನ್‌ನಗಳಲ್ಲಿ 7.5 ಕೋಟಿ ರೂ. ವೇತನ ನೀಡಲಾಗಿತ್ತು. ಆದರೆ ಮುಂಬರುವ ಹರಾಜಿನಲ್ಲಿ ಶಾ ತಮ್ಮ ಆರಂಭಿಕ ಬೆಲೆಯನ್ನು ಕೇವಲ 75 ಲಕ್ಷ ರೂ.ಗೆ ನಿಗದಿ ಮಾಡಿದ್ದಾರೆ. ಆದಾಗ್ಯೂ, ಪೃಥ್ವಿ ಅವರು ಕೊನೆಯದಾಗಿ ಎಷ್ಟು ಹಣ ಪಡೆಯಲ್ಲಿದ್ದಾರೆ ಎಂಬುದು ಹರಾಜಿನ ನಂತರ ತಿಳಿಯಲಿದೆ. ಪೃಥ್ವಿ ಶಾ ಐಪಿಎಲ್‌ನಿಂದ ಇದುವರೆಗೆ 19 ಕೋಟಿ 80 ಲಕ್ಷ ರೂ. ವೇತನ ಪಡೆದಿದ್ದಾರೆ. 2018ರ ಅಂಡರ್-19 ವಿಶ್ವಕಪ್‌ನಲ್ಲಿ ನಾಯಕರಾಗಿದ್ದ ಶಾ ಅವರನ್ನು ಅದೇ ವರ್ಷ ದೆಹಲಿ ತಂಡ 1.2 ಕೋಟಿ ರೂ.ಗೆ ಖರೀದಿಸಿತ್ತು. ಅಂದಿನಿಂದ ಅವರು ದೆಹಲಿ ತಂಡದಲ್ಲಿದ್ದರು. 2022 ರ ನಂತರ ಪೃಥ್ವಿ ಅವರ ಸಂಬಳವನ್ನು ದೆಹಲಿ 7.5 ಕೋಟಿ ರೂ.ಗೆ ಏರಿಸಿತು. ಇದೀಗ ಡೆಲ್ಲಿ ಫ್ರಾಂಚೈಸಿ ಪೃಥ್ವಿ ಅವರನ್ನು ತಂಡದಿಂದ ಹೊರಹಾಕಿದೆ. ಕಳೆದ ಸೀಸನ್‌ನಲ್ಲಿ 8 ಪಂದ್ಯಗಳಲ್ಲಿ ಆಡುವ ಅವಕಾಶ ಪಡೆದರೂ ಪೃಥ್ವಿ ಅವರಿಗೆ ವಿಶೇಷ ಪ್ರದರ್ಶನ ನೀಡಲು ಸಾಧ್ಯವಾಗಲಿಲ್ಲ. ಆಡಿದ 8 ಪಂದ್ಯಗಳಲ್ಲಿ 163 ಸ್ಟ್ರೈಕ್ ರೇಟ್‌ನಲ್ಲಿ 198 ರನ್ ಗಳಿಸಲಷ್ಟೇ ಶಕ್ತರಾಗಿದ್ದರು. ಆದ್ದರಿಂದ ಪೃಥ್ವಿ ಅವರನ್ನು ತಂಡದಿಂದ ಕೈಬಿಡಲಾಯಿತು.

ಪೃಥ್ವಿ ಶಾ ಅವರಂತೆಯೇ ಸರ್ಫರಾಜ್ ಖಾನ್ ಕೂಡ ಹೆಚ್ಚಿನ ಬೆಲೆ ಇಟ್ಟುಕೊಂಡರೆ ಯಾರೂ ತನ್ನನ್ನು ಖರೀದಿಸುವುದಿಲ್ಲ ಎಂಬ ಭಯದಿಂದ ತಮ್ಮ ಮೂಲ ಬೆಲೆಯನ್ನು 75 ಲಕ್ಷ ರೂ.ಗೆ ಇರಿಸಿಕೊಂಡಿದ್ದಾರೆ. ವಾಸ್ತವವಾಗಿ ಸರ್ಫರಾಜ್ ಕಳೆದ ಬಾರಿಯೂ ಮಾರಾಟವಾಗದೆ ಉಳಿದಿದ್ದರು. ಆಗ ಅವರು ತಮ್ಮ ಬೆಲೆಯನ್ನು ಕೇವಲ 50 ಲಕ್ಷ ರೂ. ನಿಗದಿಪಡಿಸಿದ್ದರು.

ಆದರೆ, ಈ ಬಾರಿ ಅವರು ಟೀಂ ಇಂಡಿಯಾಗೆ ಪಾದಾರ್ಪಣೆ ಮಾಡಿರುವುದರಿಂದ ಅವರನ್ನು ಯಾವ ಫ್ರಾಂಚೈಸಿಯಾದರೂ ಖರೀದಿಸುವ ಸಾಧ್ಯತೆಗಳಿವೆ.

ಸರ್ಫರಾಜ್ 2015ರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಐಪಿಎಲ್‌ಗೆ ಪಾದಾರ್ಪಣೆ ಮಾಡಿದ್ದರು. ಮೊದಲ ಸೀಸನ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಸರ್ಫರಾಜ್ ಅವರ ಆ ನಂತರದ ಪ್ರದರ್ಶನವು ವಿಶೇಷವೇನೂ ಆಗಿರಲಿಲ್ಲ. ಹೀಗಾಗಿ ಕಳೆದ ಒಂಬತ್ತು ವರ್ಷಗಳಲ್ಲಿ ಸರ್ಫರಾಜ್, ಐಪಿಎಲ್‌ನಲ್ಲಿ ಆಡಿದ್ದು ಕೇವಲ 37 ಪಂದ್ಯಗಳು ಮಾತ್ರ. ಲೀಗ್‌ನಲ್ಲಿ ಅವರ ಪ್ರದರ್ಶನವು ಪ್ರಬಲವಾಗಿಲ್ಲದಿದ್ದರೂ, ಅವರಿಗೆ ಸೀಮಿತ ಅವಕಾಶಗಳೂ ಸಿಕ್ಕಿವೆ.

ಮಾರಾಟವಾಗದೆ ಉಳಿಯುವ ಭಯ

ಆರ್‌ಸಿಬಿ ಜೊತೆಗಿನ ಪಯಣ ಇನ್ನೂ ಮುಗಿದಿಲ್ಲ

ಹ್ಯಾಪಿ ನ್ಯೂಸ್ ನೀಡಿದ ಗ್ಲೆನ್ ಮ್ಯಾಕ್ಸ್‌ವೆಲ್

ಆರ್‌ಸಿಬಿ ತಂಡ ಕೇವಲ ಮೂರು ಆಟಗಾರರನ್ನು ಉಳಿಸಿಕೊಂಡಿದ್ದು, ಗ್ಲೆನ್ ಮ್ಯಾಕ್ಸ್‌ವೆಲ್ ಅವರನ್ನು ತಂಡದಿಂದ ಬಿಟ್ಟ